ಪ್ರೊ. ಸಾ. ಕೃ. ರಾಮಚಂದ್ರರಾವ್

ಸಂಗೀತ ಸಾಮ್ರಾಜ್ಞಿ

ಎಂ. ಎಸ್. ಸುಬ್ಬುಲಕ್ಷ್ಮಿ

ಸಂಗೀತ ಸಾಮ್ರಾಜ್ಞಿ
ಎಂ. ಎಸ್. ಸುಬ್ಬುಲಕ್ಷ್ಮಿ

(ಬದುಕು, ಸಾಧನೆ)

ಪ್ರೊ. ಸಾ. ಕೃ. ರಾಮಚಂದ್ರರಾವ್

ವಿ. ಸೀ. ಸಂಪದ
ರಾಜೀವನಗರ, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085

SANGITHA SAMRAJNI M. S. SUBBULAKSHMI (Life & Achievement) : by Prof. S. K. Ramachandra Rao, Published by V. Si. Sampada, No. 25, 'Vasundhara', 'C' Cross, Rajivnagar, Banashankari 3rd Stage, 4th Phase, Bangalore - 560 085

© AUTHOR

First Impression : 2005

Pages : 8+108

Price Rs. 75/– (ಬೆಲೆ : ಎಪ್ಪತ್ತೈದು ರೂಪಾಯಿ)

ವಿ.ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ), ನಂ. 25, 'ವಸುಂಧರಾ', 'ಸಿ' ಕ್ರಾಸ್, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು–560 085

ಅಧ್ಯಕ್ಷರು : ಪ್ರೊ. ಎಂ. ಎಚ್. ಕೃಷ್ಣಯ್ಯ

ಉಪಾಧ್ಯಕ್ಷರು : ಪ್ರೊ. ಕೆ. ಎಸ್. ಕಲ್ಲಾಪುರ (ಧಾರವಾಡ)

ಕಾರ್ಯದರ್ಶಿ : ಪ್ರೊ. ಎಂ. ವಿ. ಸತ್ಯನಾರಾಯಣ

ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ

ಸದಸ್ಯರು : ಡಾ. ಮತ್ತೂರು ಕೃಷ್ಣಮೂರ್ತಿ
ವಿ. ಎಸ್. ಕೃಷ್ಣಮೂರ್ತಿ
ಎಚ್. ವಿ. ವೆಂಕಟಸುಬ್ಬಯ್ಯ
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರೊ. ವಿಶ್ವನಾಥ ಶರ್ಮ (ವಾರಾಣಸಿ)
ಪ್ರೊ. ಎಮ್. ರಾಮಚಂದ್ರ (ಕಾರ್ಕಳ)
ಡಾ. ಎನ್. ಎಸ್. ತಾರಾನಾಥ (ಮೈಸೂರು)
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ
ವೈ. ಎಂ. ರಾಜು

ಮುದ್ರಣ :
ನೇತ್ರಾ ಪ್ರಿಂಟರ್ಸ್
ಬೆಂಗಳೂರು–560 018

ಅರಿಕೆ

ಕರ್ನಾಟಕ ಸಂಗೀತದ ಅನರ್ಘ್ಯ ರತ್ನವಾಗಿದ್ದ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಈಚೆಗೆ ಕೆಲವು ತಿಂಗಳ ಹಿಂದೆ ತಮ್ಮ 89ನೆಯ ವಯಸ್ಸಿನಲ್ಲಿ ವಿಧಿವಶರಾದ್ದು ಸಂಗೀತ ಪ್ರಪಂಚವನ್ನೇ ಬಡವುಗೊಳಿಸಿದೆ. ಅವರ ಬದುಕು-ವ್ಯಕ್ತಿತ್ವ-ಸಂಗೀತ ಸಾಧನೆ ಎಲ್ಲವೂ ಎತ್ತರದ್ದು; ಆದರ್ಶ ಪ್ರಾಯವಾದ್ದು; ಚಿರಸ್ಮರಣೀಯವಾದ್ದು.

ಎಂಎಸ್‌ರನ್ನು ಕುರಿತಂತೆ ಇಂಗ್ಲಿಷಲ್ಲಿ (ಶ್ರೀ ಟಿ.ಜೆ.ಎಸ್. ಜಾರ್ಜ್, ಶ್ರೀಮತಿ ಲಕ್ಷ್ಮಿ ವಿಶ್ವನಾಥನ್‌ರದೂ ಸೇರಿದಂತೆ) ಕೆಲವು ಉತ್ಕೃಷ್ಟ ಹೊತ್ತಿಗೆಗಳು ಪ್ರಕಟವಾಗಿದ್ದರೂ ಏಕೊ ಏನೊ ಕನ್ನಡದಲ್ಲಿ ಆದಂತಿಲ್ಲ. ಆ ಕಾರಣದಿಂದ ಹಾಗೂ ಭಾರತೀಯ ಸಂಸ್ಕೃತಿಯ ಮೂರ್ತರೂಪವೆನಿಸಿದ್ದ ಎಂಎಸ್‌ರನ್ನು ಕುರಿತು ಒಂದು ಕಿರುಹೊತ್ತಿಗೆಯನ್ನು ಹೊರತರಲು ಸಂಕಲ್ಪಿಸಿ, ಅದನ್ನು ರಚಿಸಿಕೊಡಲು ಸಾಹಿತ್ಯ ಸಂಗೀತ ಶಿಲ್ಪ ಇತ್ಯಾದಿ ಲಲಿತಕಲೆಗಳಲ್ಲಿ ಪರಿಣತರೂ ಎಂಎಸ್‌ರನ್ನು ಬಲ್ಲವರೂ ಆದ ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್ ಅವರನ್ನು ಪ್ರಾರ್ಥಿಸಿಕೊಂಡೆವು. ನಮ್ಮ ಮನವಿಯನ್ನು ಪುರಸ್ಕರಿಸಿದ ಪ್ರೊ. ರಾವ್ ಅವರು ಎಂಎಸ್‌ರ ಬದುಕು, ಸಾಧನೆಗಳು ಎಳೆ ಎಳೆಯಾಗಿ ಚಿತ್ರಣಗೊಂಡಿರುವ ಈ ಉತ್ಕೃಷ್ಟ ಕೃತಿಯನ್ನು ಬರೆದು ಕೊಟ್ಟಿದ್ದಾರೆ. ಜೊತೆಗೆ ಎಂಎಸ್ ಅವರ ಬಂಧುಗಳ, ಅವರ ಸಂಪರ್ಕಕ್ಕೆ ಬಂದು ಅವರನ್ನು ರೂಪಿಸಿದ ಹಲವು ಮಂದಿ ಹಿರಿಯ ಸಂಗೀತಗಾರರ ರೇಖಾಚಿತ್ರಗಳನ್ನು ರಚಿಸಿಕೊಟ್ಟು, ಆ ಎಲ್ಲರ ಬಗೆಗೂ ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸಿಕೊಟ್ಟು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಈ ಉಪಕಾರಕ್ಕಾಗಿ ಪ್ರೊ. ರಾವ್ ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಗೌರವಪೂರ್ವಕ ನಮನಗಳು.

ಇದನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ನೇತ್ರಾ ಪ್ರಿಂಟರ್ಸ್‌ನ ಮಿತ್ರರಿಗೆ, ಮುಖಪುಟ ವಿನ್ಯಾಸವನ್ನು ರಚಿಸಿಕೊಟ್ಟ ಗೆಳೆಯ ಶ್ರೀ ನಾಗೇಂದ್ರಕುಮಾರ್ ಅವರಿಗೆ ನಮ್ಮ ವಂದನೆಗಳು. ಮುಖಪುಟದ ವರ್ಣಪಾರದರ್ಶಿಕೆ 'ಹಿಂದೂ' ಪತ್ರಿಕೆಯ ಶ್ರೀ ವಿ. ರಾಮಮೂರ್ತಿ ಅವರದು. ಅವರನ್ನು ಸಂಪರ್ಕಿಸಲು ನಡೆಸಿದ ಯತ್ನ ಫಲಕಾರಿಯಾಗಲಿಲ್ಲ. ಅವರಿಗೆ ನಾವು ಆಭಾರಿಯಾಗಿದ್ದೇವೆ.

ಎಂಎಸ್‌ರನ್ನು ಕುರಿತ ಈ ಪುಸ್ತಕ ಓದುಗರೆಲ್ಲರಿಗೆ ಮೆಚ್ಚಿಕೆಯಾಗುವುದೆಂದು ನಂಬಿದ್ದೇವೆ.

10.3.2005

ಎಂ. ವಿ. ವೆಂಕಟೇಶಮೂರ್ತಿ

ವಿ. ಸೀ. ಸಂಪದ

ಸಂಗೀತ ಸಾಮ್ರಾಜ್ಞಿ

ಎಂ. ಎಸ್. ಸುಬ್ಬುಲಕ್ಷ್ಮಿ

ಪರಿಚ್ಛೇದ ಒಂದು

ಪ್ರಸ್ತಾವನೆ

೧

ಕರ್ನಾಟಕ ಸಂಗೀತದ ಸುಂದರ ಸುಭಗ ಸೌಧದ ಉತ್ತುಂಗ ಶಿಖರದ ಮೇಲೆ ಎಂಬತ್ತು ವರ್ಷಗಳಿಂದ ಲೋಕದ ಕಣ್ಣನ್ನು ಕುಕ್ಕಿ ಕಂಗೊಳಿಸುತ್ತಿದ್ದ ಸ್ವರ್ಣಖಚಿತ ಶಿಖಾಮಣಿಯೊಂದು ಈಗ (ಎಂದರೆ 2004ರ ಡಿಸೆಂಬರ್ ಹನ್ನೆರಡರಂದು) ಕಳಚಿಬಿದ್ದಿತು. ಸಂಪ್ರದಾಯ ಸಂಗೀತದ ಸೌಂದರ್ಯ, ಸ್ವರೂಪ, ಸ್ವಭಾವ, ಸ್ವಾರಸ್ಯಗಳನ್ನು ಒಟ್ಟಿಗೆ ಬೆಳಗಿಸುತ್ತಿದ್ದ ಸಿರಿಕಂಠದ ಸಂತಗಾಯಕಿ ಇನ್ನಿಲ್ಲ. ಸಂಗೀತ ರಸಿಕರಿಗೆ ಒದಗುತ್ತಿದ್ದ ರಸದೌತಣ ಇನ್ನು ಧ್ವನಿಮುದ್ರಿಕೆಗಳ ಮೂಲಕವೇ! ವೈಣಿಕ ಶಿಖಾಮಣಿ ಶೇಷಣ್ಣನವರು (1926ರಲ್ಲಿ) ತೀರಿಕೊಂಡಾಗ, ನನ್ನ ಗುರುಗಳು (ಪ್ರಾತಃಸ್ಮರಣೀಯ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರು) ಹೇಳಿದಂತೆ, ಸರಸ್ವತಿಯ ಮನೆಯಲ್ಲಿ ಕಳುವಾಯಿತು. ಜವರಾಯ ಅಪುರೂಪದ ಜೀವವೊಂದನ್ನು ಸೆಳೆದೊಯ್ದುಬಿಟ್ಟ. ಇಲ್ಲಿ ಜೀವದ ಕೆಲಸವೂ ಮುಗಿದಿದ್ದಿತೆನ್ನಿ. ಆ ಶ್ರೀಕಂಠದಿಂದ ಧಾರೆಧಾರೆಯಾಗಿ ಹೊರಹೊಮ್ಮಿ ಹರಿದುಬರುತ್ತಿದ್ದ ಸುನಾದದ ಹೊಳೆ ಬತ್ತಿಹೋಗುತ್ತಿದ್ದಿತು. ರಸಿಕಲೋಕದ ಮೇಲೆ ಕರುಣೆಯಿಂದ ಭಗವಂತ ಕೊಡಮಾಡಿದ ದೀವಟಿಗೆ ಮತ್ತೆ ಬಾನನ್ನಡರಿ ಮರೆಯಾಯಿತು. ಹುಟ್ಟಿದ್ದು ಸಾಯಬೇಕು, ಬಂದದ್ದು ಹೋಗಬೇಕು, ಕಾಣಿಸಿಕೊಂಡದ್ದು ಕಣ್ಮರೆಯಾಗಬೇಕು. ಪ್ರಕೃತಿನಿಯಮವೇ ಅದು ತಾನೆ?

ಆದರೆ ಅದೊಂದು ಜೀವ ಬದುಕಿನಲ್ಲಿ ಅದೆಷ್ಟು ಕೆಟ್ಟದಿನಗಳನ್ನು ಕಂಡಿತೋ, ಅದೆಷ್ಟು ಬವಣೆಗಳನ್ನು ತಾಳಿಕೊಂಡಿತೋ, ಅದೇನು ಒಡಲಬೇಗೆಯನ್ನು ಹೇಗೆ ಸಹಿಸಿಕೊಂಡಿತೋ ನಮಗಿಂದು ಸರಿಯಾಗಿ ಸಮಗ್ರವಾಗಿ ತಿಳಿಯದು. ಪುಟವಿಟ್ಟ ಚಿನ್ನದಂತೆ, ಎಲ್ಲ ನಂಜನ್ನೂ ಉಂಡು, ಕೊಳೆಯನ್ನು ಕಳೆದುಕೊಂಡು, ಕಳೆಕಳೆಯ ಮೊಗದಿಂದ ಸಂಗೀತಸುಧೆಯನ್ನು ರಸಿಕರಿಗೆ ಉಣಬಡಿಸಿ, ಸಮಾಧಾನದಿಂದ ದೂರಸರಿದು ಮರೆಯಾದ ಜೀವ ಅದು. ಬಡೇಗುಲಾಂ ಅಲಿಖಾನ್ ಹೇಳಿದಂತೆ ಸುಬ್ಬುಲಕ್ಷ್ಮಿ 'ಸುಸ್ವರಲಕ್ಷ್ಮಿ'; ಪ್ರಧಾನಿ ಜವಹರಲಾಲ ನೆಹ್ರು ಬಣ್ಣಿಸಿದಂತೆ 'ಸಂಗೀತ ಪ್ರಪಂಚದ ಸಾಮ್ರಾಜ್ಞಿ'. ಸಂಗೀತ ವಿದ್ವಾಂಸರೆಲ್ಲರಿಗೂ ಕಣ್ಮಣಿ. ಆಕೆಯ ಸಂಗೀತವನ್ನಾಗಲಿ ವ್ಯಕ್ತಿತ್ವವನ್ನಾಗಲಿ ಮೆಚ್ಚಿಕೊಳ್ಳದಿದ್ದವರು ಅರಸಿಕರೇ. ಅವರ ಸಂಗೀತವಷ್ಟೇ ದೊಡ್ಡದು ಎನ್ನುವಂತಿಲ್ಲ; ಅವರ ಬದುಕೂ ಅಷ್ಟೇ ದೊಡ್ಡದು. ಅವರ ಸಂಗೀತ 'ಆಪಾತಮಧುರ'ವಾದರೆ ಅವರ ವ್ಯಕ್ತಿತ್ವ 'ಆಲೋಚನಾಮೃತ'. ಎಷ್ಟು ಉಳಿಗಳ ಪೆಟ್ಟನ್ನು ತಿಂದು ಭವ್ಯವಾದ ಒಂದು ಲಿಂಗವಾಯಿತೋ ಅದೇ ಒಂದು ಕಾದಂಬರಿಯಂತೆ ಕುತೂಹಲವನ್ನು ಕೆರಳಿಸುತ್ತದೆ.

ಈಗ ನಮ್ಮ ಪಾಲಿಗೆ ಉಳಿದಿರುವುದು ಅವರ ಸಂಗೀತದ ನೆನಪು. ಅದನ್ನಾದರೂ ನಾವು ಎಚ್ಚರದಿಂದ ಉಳಿಸಿಕೊಂಡರೆ ಸಾಕು. ಆ ಸಂಗೀತ ನಮಗೆ ಸುಖವನ್ನು ತರುವುದಷ್ಟೇ ಅಲ್ಲ, ಸಂಗೀತ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಆದರ್ಶವನ್ನು ಒದಗಿಸುತ್ತದೆ. ಸಂಪ್ರದಾಯ ಸಂಗೀತದಲ್ಲಿ ರಂಜನೆಯ ಪಾಲಿದೆ, ಶ್ರವಣಸುಖದ ಪಾಲಿದೆ, ತ್ಯಾಗರಾಜರು ಹೇಳಿದಂತೆ 'ಕರ್ಣಾನಂದ'ದ ಪಾಲಿದೆ, ಆದರೆ ಅದಕ್ಕಿಂತ ಮಿಗಿಲಾಗಿ ಆಧ್ಯಾತ್ಮಿಕ ಸಂಸ್ಕಾರದ ಪಾಲೂ ಇದೆ. ಒಡಲನ್ನು ಬೆಳಗಿಸಿ, ಬದುಕನ್ನು ತಿದ್ದಿ, ಜಗತ್ತಿನ ಜಂಜಡದಿಂದ ಜೀವವನ್ನು ಮೇಲೆತ್ತಿ ನಿಲ್ಲಿಸುವ ಗುಣ ಸಂಗೀತಕ್ಕಿದೆ. ರಾಗ-ತಾಳಗಳು ಕಂಗೊಳಿಸುವುದು ಭಾವಶುದ್ಧಿಯಿಂದ. ಇದಕ್ಕೇ ಭಕ್ತಿಯೆಂದು ಇನ್ನೊಂದು ಹೆಸರು. ಪುರಂದರದಾಸರು 'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ, ಹರಿ ತಾಳನೋ' ಎಂದದ್ದು ಇದನ್ನು ಕುರಿತೇ. ಇದನ್ನು ತಮ್ಮ ಸಾಧನೆಯಿಂದ ಸಂಗೀತದಿಂದ ಶ್ರುತಪಡಿಸಿದವರು ಎಂಎಸ್.

೨

ಸಾಧನೆಗೆ ಅವರೇ ಇನ್ನೊಂದು ಹೆಸರು. ಸಂಗೀತ ಪ್ರಪಂಚದಲ್ಲಿ ಅಷ್ಟು ನಿಷ್ಠೆಯಿಂದ ಸಾಧನೆ ಮಾಡಿದವರು ವಿರಳ. ನಿಸರ್ಗಸಿದ್ಧವಾಗಿಯೇ ಇದ್ದ ಕಂಠಮಾಧುರ್ಯವು ಎಡೆಬಿಡದ ಸಾಧನೆಯಿಂದ ಸಂಸ್ಕಾರಗೊಂಡು ಸುವರ್ಣಕ್ಕೆ ಸುಗಂಧವನ್ನು ಪೂಸಿದಂತಾಯಿತು. ಸಂಗೀತಕ್ಕೆ ಸಾಧನೆಯೇ ಸರ್ವಸ್ವ ಎಂಬುದನ್ನು ಮನಗಾಣಿಸಿದವರಲ್ಲಿ ಅವರು ಅಗ್ರಗಣ್ಯರು. ಎಷ್ಟೇ ಪ್ರೌಢಿಮೆ ಸಿದ್ಧವಾದರೂ, ಎಷ್ಟೇ ಪ್ರಸಿದ್ಧರಾದರೂ, ಎಷ್ಟೇ ಜನಾನುರಾಗವನ್ನೂ ವಿದ್ವನ್ಮಾನ್ಯತೆಯನ್ನೂ ಗಳಿಸಿದವರಾದರೂ ಅವರು ಕಡೆಯವರೆಗೂ ಸಾಧನೆಯನ್ನು ಬಿಡಲಿಲ್ಲ. ಆ ಸಾಧನೆಯ ಗುಂಗಿನಲ್ಲೇ ಅವರು ಬದುಕಿದ್ದು. ಅವರ ಬದುಕು ಸಂಗೀತಕ್ಕೆ ಮೀಸಲು; ಸಂಗೀತವನ್ನು ಬಿಟ್ಟು ಬೇರೊಂದು ಆಸಕ್ತಿಯಾಗಲಿ ಹವ್ಯಾಸವಾಗಲಿ ಅವರಿಗೆ ಎಂದೂ ಇದ್ದದ್ದೇ ಇಲ್ಲ. ಎಳವೆಯಿಂದ ದೇಹವಿಡುವವರೆಗೂ ಸಂಗೀತವೇ ಉಸಿರು. ಮೊದಲು ಕಲೆಯಾಗಿ ಕಾಣಿಸಿಕೊಂಡದ್ದು ಆಮೇಲೆ ಯೋಗವಾಗಿ ಪರಿಣಮಿಸಿತು. ಕಲೆಯ ಮೇಲಣ ಒಲವು ಭಾವಶುದ್ಧಿಯ ಕಡೆ ಒಲಿದು ಊರ್ಜಿತವಾಯಿತು. ಸಾಧನೆಯ ಪ್ರಯೋಜನ ಸಾರ್ಥಕವಾದದ್ದು ಹೀಗೆ.

ಸಾಧನೆಯ ಒಂದು ಮುಖ ಪ್ರೌಢಿಮೆಯನ್ನು ಪಡೆದುಕೊಳ್ಳುವುದಾದರೆ ಇನ್ನೊಂದು ಮುಖ ಬಾಳುವೆಯಲ್ಲಿ ಪ್ರಸನ್ನತೆಯನ್ನೂ ಪ್ರಶಾಂತಿಯನ್ನೂ ಸಾಧಿಸಿಕೊಳ್ಳುವುದು. ಆಕೆಯ ಮೇಲೆರಗಿಬಂದ ಬವಣೆಗಳ ಸರಮಾಲೆಯನ್ನು ಗಮನಿಸಿದಾಗ, ಸಾಧನೆಯು ಆಕೆಯ ಸ್ವಾಸ್ಥ್ಯವನ್ನು ಉಳಿಸಿ, ಬೆಳೆಸಿ, ಬೆಳಗಿದ ಬಗೆಯನ್ನು ಕಂಡುಕೊಳ್ಳಬಹುದು. ಸಂಗೀತ ಸಾಧನೆಯ ದೃಷ್ಟ ಪ್ರಯೋಜನವೇನೋ ಸ್ವರಶುದ್ಧಿ, ಶ್ರುತಿಶುದ್ಧಿ, ಲಯಸಿದ್ಧಿಗಳ ಸಂಪಾದನೆಯೇ ಆದರೂ, ಕಲ್ಪನಾವಿಲಾಸದ ಸಾಮರ್ಥ್ಯವೇ ಆದರೂ, ಅದೃಷ್ಟ ಪ್ರಯೋಜನವಿರುವುದು ಭಾವಶುದ್ಧಿಯಲ್ಲಿ, ಭಕ್ತಿಭಾವದಲ್ಲಿ, ಸಾಂತ್ವನಗುಣದಲ್ಲಿ. ಇದು ಸಂಗೀತಕ್ಕೂ ಬೇಕು, ಬದುಕಿಗೂ ಬೇಕು. ಎಂಎಸ್ ಅವರ ಸಂಗೀತದಲ್ಲೂ ಬಾಳುವೆಯಲ್ಲೂ ಸಾಧನೆಯ ಈ ವಿಶೇಷಲಾಭವನ್ನು

ಕಾಣಬಹುದು. ಸಂಗೀತದಿಂದ ಬದುಕು ಗಂಭೀರವಾಗಬೇಕು, ಉದಾತ್ತವಾಗಬೇಕು, ಪ್ರಶಾಂತವಾಗಬೇಕು, ಉಜ್ವಲವಾಗಬೇಕು ಎಂಬ ಆದರ್ಶವನ್ನು ಈ ಕಾಲದಲ್ಲಿ ನಮ್ಮೆದುರು ಇರಿಸಿದವರು ಎಂಎಸ್. ಹಿಂದೆ ಪುರಂದರದಾಸರಾಗಲಿ, ಅನ್ನಮಾಚಾರ್ಯರಾಗಲಿ, ಭದ್ರಾದ್ರಿ ರಾಮದಾಸರಾಗಲಿ, ತ್ಯಾಗರಾಜಸ್ವಾಮಿಗಳಾಗಲಿ ಇದೇ ಆದರ್ಶವನ್ನು ತೋರಿಸಿದ್ದುದನ್ನು ಈಕೆ ನಮ್ಮ ನೆನಪಿಗೆ ತಂದರು. ಅವರಂತೆ ಇವರು ವಾಗ್ಗೇಯಕಾರರಾಗಲಿಲ್ಲ ದಿಟ, ಆದರೆ ತಮ್ಮ ನಿರಂತರ ಸಾಧನೆಯಿಂದ ಸಂತರ ಶ್ರೇಣಿಗೇ ಸೇರಿದರು. ಸಂತಗಾಯಕಿಯೆಂಬ ವಿಶೇಷಣ ಅವರಿಗೆ ಚೆನ್ನಾಗಿ ಒಪ್ಪುತ್ತದೆ.

ಸಂಗೀತವೊಂದು ಹೇಳಿ ಕೇಳಿ ಕಲೆ, ಕಲೆಗಾರನ ಬದುಕು ಎಂತಾದರಿರಲಿ, ಅದು ಸಂಗೀತಕ್ಕೆ ಹೊರತಾದುದು, ಸಂಗೀತವನ್ನು ಸವಿಯುವಾಗ ಅದರ ಗೊಡವೆಯಿರಬಾರದು ಎನ್ನುವ ಭಾವನೆ ಬಹುಜನರಲ್ಲಿ ಬೇರೂರಿದೆ. ಜೀವನದಿಂದ ಕಲೆಯನ್ನು ಬೇರ್ಪಡಿಸುವ ಈ ಬುದ್ಧಿ ಸರಿಯಾದುದಲ್ಲ. ವ್ಯಕ್ತಿತ್ವದಲ್ಲಿ ಹಿರಿಮೆ ಇದ್ದಾಗಲೇ ಕಲೆಯಲ್ಲೂ ಅದು ಕಂಡುಕೊಳ್ಳುವುದು. ದೊಡ್ಡ ಕಲೆಯನ್ನು ಆಶಿಸುವವನು ದೊಡ್ಡ ವ್ಯಕ್ತಿತ್ವವನ್ನೂ ಪಡೆದುಕೊಂಡಿರಬೇಕು. ಆಗಮದಲ್ಲಿ ಅರ್ಚಕನು ತಾನು ಮೊದಲು ದೇವತೆಯಾಗದೆ ದೇವತೆಯನ್ನು ಪೂಜಿಸಬಾರದು ('ನಾದೇವೋ ದೇವಮರ್ಚಯೇತ್') ಎಂಬ ನಿಯಮವಿದೆ. ಎಂಎಸ್ ಅವರ ಕಂಠಮಾಧುರ್ಯ ಒಂದು ತೂಕವಾದರೆ, ಅವರ ಜೀವನಮಾಧುರ್ಯ ಇನ್ನೊಂದು ತೂಕ. ಅವರ ಸಿರಿಕಂಠ ದೈವದತ್ತವಾದುದು; ಅವರ ಸಾಧನೆಗೆ ಒದಗಿದ ಅನುಕೂಲವೂ ದೈವದತ್ತವಾದುದೇ. ಈ ಸಾಧನೆಯ ಹರವು ಸಂಗೀತಕ್ಕೆ ಮಾತ್ರ ಸೀಮಿತವಾಗದೆ ಅವರ ಇಡೀ ಬದುಕನ್ನು ಆವರಿಸಿಕೊಳ್ಳುವಂತೆ ಆತಂಕ-ಆಪತ್ತುಗಳು ಒದಗಿಬಂದದ್ದೂ ದೈವದ ಕೃಪೆಯಿಂದಲೇ. ಅವರ ಸಾಧನೆಯನ್ನು ವ್ಯವಹಾರ-ಪರಮಾರ್ಥಗಳ ಸಂಗಮವಾಗಿ ಮಾರ್ಪಡಿಸಿದ್ದೂ ದೈವವೇ. ದೈವವನ್ನು ದೃಢವಾಗಿ ನಂಬಿದ್ದವರು ಅವರು. 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' ಎಂಬ ಹರಿದಾಸ ಸೂಕ್ತಿಯ

ಸ್ವಾರಸ್ಯವನ್ನು ಎಲ್ಲರಿಗೆ ಮನಗಾಣಿಸಿದರು. ತಾವೇ ದೊಡ್ಡ ಜೀವವಾಗಿ, ದೊಡ್ಡದೊಂದು ಕಲೆಗೆ ಕಾರಣರಾದರು.

ಸಾಧನೆಯೆಂದೆವಲ್ಲ, ಅದರ ತಾತ್ಪರ್ಯ ಇಷ್ಟು : ಮನುಷ್ಯನ ಸಾಮಾನ್ಯವಾದ ಮಿತಿಯನ್ನು ಮೀರಿ, ಯಾವುದೇ ಪ್ರಕಾರದಲ್ಲಿ ಮಿಗಿಲಾದ ಸಾಮರ್ಥ್ಯವನ್ನು ಪಡೆದುಕೊಳ್ಳುವುದು. ಶಾರೀರಕ ಪ್ರವೃತ್ತಿಗಳು, ಮಾನಸಿಕ ವೃತ್ತಿಗಳು, ಬೌದ್ಧಿಕ ಪ್ರಸಾರಗಳು ಎಲ್ಲವೂ ಸಾಧನೆಯ ಹರವಿನೊಳಗೆ ಸೇರಿಕೊಳ್ಳಬಹುದು. ಒಟ್ಟಿನಲ್ಲಿ, ನಿಸರ್ಗಸಿದ್ಧವಾದ ನೆಲೆಯೊಂದರಿಂದ ಮೇಲಿನ ನೆಲೆಗೇರುವುದು ಸಾಧನೆಯ ಉದ್ದೇಶ. ಋಷಿಯ ಹಂಬಲ "ಸಟೆಯಿಂದ ದಿಟದತ್ತ ಹೋಗುವೆನು; ಮನುಷ್ಯನ ನೆಲೆಯಿಂದ ದೈವದ ನೆಲೆಗೆ ಏರುವೆನು" ("ಅನೃತಾತ್ಸತ್ಯಮುಪೈಮಿ, ಮಾನುಷಾದ್ದೈವಮುಪೈಮಿ") ಎಂಬುದು ಸಾಧನೆಯ ಚೌಕಟ್ಟಿನಲ್ಲಿಯೇ. ತೈತ್ತಿರೀಯ ಬ್ರಾಹ್ಮಣದಲ್ಲಿ ಬರುವ ಮಾತು ಇದು. ಸಾಧನೆಯ ಮೊದಲು ಮನುಷ್ಯವ್ಯಕ್ತಿಯೇ ಆಗಿದ್ದವರು ಎಂಎಸ್; ಸಾಧನೆಯ ಬಲದಿಂದ ಅತಿಮಾನುಷವೆನ್ನಬಹುದಾದ ಸ್ಥಿತಿಗೆ ಏರಿದರು. ಹಂತ ಹಂತವಾಗಿ, ಅನುಕ್ರಮವಾಗಿ ಅವರ ಚೇತನ ವಿಕಸಿತವಾದುದನ್ನು ಗುರುತಿಸುವುದು ಕಷ್ಟ. ಅದಕ್ಕೆ ನೆರವಾಗುವ ವಿವರಗಳು ದೊರಕಲಾರವು. ಆದರೆ ಸ್ಥೂಲವಾಗಿ ತಿಳಿಯುವುದು ಅಷ್ಟು ಕಷ್ಟವಾಗಲಾರದು. ಹಾಗೆ ತಿಳಿಯುವುದರಿಂದ ಕುತೂಹಲವಷ್ಟೆ ತಣಿದೀತು ಎಂದಲ್ಲ ; ಆಸಕ್ತರಾದವರಿಗೆ ವಿವರಗಳು ದಾರಿದೀಪಗಳೂ ಆಗಬಹುದು.

೨

ಅವಳ ಎಂಬತ್ತೆಂಟು ವರ್ಷಗಳ ಸುದೀರ್ಘವಾದ ಬದುಕನ್ನು ನಾಲ್ಕು ವಿಭಾಗಗಳಲ್ಲಿ ಕಾಣಬಹುದು.

(1) ಮೊದಲನೆಯದು ತಮ್ಮ ತೌರೂರಾದ ಮಧುರೆಯಲ್ಲಿ ತಮ್ಮ ತಾಯಿಯ ಆಸರೆಯಲ್ಲಿ ಕಳೆದ ವರ್ಷಗಳು. ಸಂಗೀತದಲ್ಲಿ ಪ್ರವೇಶ, ಸಾಧನೆ, ಪ್ರೌಢಿಮೆಗಳು ಈ ಅವಧಿಯಲ್ಲೇ ಕಾಣಿಸಿಕೊಳ್ಳುತ್ತವೆ. ಮಗಳ ಪ್ರಾಪಂಚಿಕ



ಎಂ. ಎಸ್. ಸುಬ್ಬುಲಕ್ಷ್ಮಿ

ಅಭ್ಯುದಯಕ್ಕೆಂದು ತಾಯಿ ಮಧುರೆಯನ್ನು ಬಿಟ್ಟು ಚೆನ್ನೈಗೆ ವಲಸೆಬಂದುದು, ಮುಂದೆ ಹುಡುಗಿಯ ಬಾಳಸಂಗಾತಿಯಾದ ಸದಾಶಿವಂ ಪರಿಚಯವಾದುದು, ಮತ್ತೆ ಮಧುರೆಗೆ ಹಿಂದಿರುಗಿದುದು ಇವೆಲ್ಲ ಇಲ್ಲಿಯೇ ಸೇರಿಕೊಳ್ಳುತ್ತವೆ (1932ರವರೆಗೆ).

(2) ಎರಡನೆಯ ವಿಭಾಗದಲ್ಲಿ ಎಂಎಸ್ ತೌರೂರನ್ನೂ ತಾಯಿಯ ಆಸರೆಯನ್ನೂ ಬಿಟ್ಟು, ಗುಟ್ಟಾಗಿ ಚೆನ್ನೈಗೆ ಬಂದು ಸದಾಶಿವಂ ಆಸರೆಯಲ್ಲಿ ನಿಂತುದೂ, ಚಲಚ್ಚಿತ್ರರಂಗದಲ್ಲಿ ಅಡಿಯಿಟ್ಟುದೂ, ಸದಾಶಿವಂರನ್ನು ಮದುವೆಯಾದುದೂ ಸೇರಿಕೊಳ್ಳುತ್ತವೆ (1935 ರಿಂದ 1940ರವರೆಗೆ).

(3) ಗಂಡ ಸದಾಶಿವಂ ನಿರ್ದೇಶನದ 'ಮೀರಾ' ಚಿತ್ರದಲ್ಲಿ ನಾಯಕಿ ಪಾತ್ರವನ್ನು ವಹಿಸಿ, ಸಂತಭಕ್ತೆಯಲ್ಲಿನ ತನ್ಮಯತೆಯಿಂದ ತಾನೇ ಭಕ್ತಿಯ ನಿರ್ಭರತೆಯನ್ನು ಗಳಿಸಿಕೊಂಡುದು, ಸಂಗೀತ ವಿನಿಕೆಯಲ್ಲಿ ಭಕ್ತಿಭಾವವನ್ನೇ

ಪ್ರಧಾನ ವಿವರವಾಗಿ ಪರಿಗ್ರಹಿಸಿದುದು ಮೂರನೆಯ ವಿಭಾಗದಲ್ಲಿ ಬರುತ್ತವೆ. ಚಲಚ್ಚಿತ್ರರಂಗದಿಂದ ಕಾಲ್ತೆಗೆದು ಸಂಗೀತವೊಂದರಲ್ಲೇ ತಮ್ಮನ್ನು ತೊಡಗಿಸಿಕೊಂಡುದು ಆಗಲೇ. ಇದೇ ಅವಧಿಯಲ್ಲಿ ಲೋಕವಿಖ್ಯಾತಿಯನ್ನು ಗಳಿಸಿ 'ಕಲ್ಕಿ ಗಾರ್ಡನ್ಸ್' ಅರಮನೆಯಲ್ಲಿ ಗಂಡನೊಂದಿಗೆ ವಾಸಮಾಡಿದುದು, ರಾಜಾಜಿಯವರ ಸಂಪರ್ಕ ಮತ್ತು ಮಾರ್ಗದರ್ಶನ ಮೊದಲಾದುದು ಸೇರುತ್ತವೆ (1945 ರಿಂದ 1977 ರವರೆಗೆ).

(4) 'ಕಲ್ಕಿ ಗಾರ್ಡನ್ಸ್' ಅರಮನೆಯನ್ನು ಮಾರಿ ಕೊಟ್ಟೂರುಪುರದಲ್ಲಿ ಬಾಡಿಗೆಯ ಸಣ್ಣ ಮನೆಯೊಂದರಲ್ಲಿ ವಾಸಿಸತೊಡಗಿ ವಿಶ್ರಾಂತಸ್ಥಿತಿಯಲ್ಲಿದ್ದು ಅಂತರ್ಮುಖಿಯಾದುದು, ಸದಾಶಿವಂ ಅವರು ತೀರಿಕೊಂಡುದು (1997), ತಾವೇ ತೀರಿಕೊಂಡುದು (2004) ಈ ವಿವರಗಳು ನಾಲ್ಕನೆಯ ವಿಭಾಗ.

ಈ ನಾಲ್ಕೂ ವಿಭಾಗಗಳಲ್ಲಿ ಏಕರಸವಾಗಿ ಹರಿದು ಬರುವುದು ಅವರ ಸಂಗೀತ. ಮೊದಲ ಎರಡು ವಿಭಾಗಗಳಲ್ಲಿ ಸಂಗೀತವು ರಸಿಕರಂಜನೆಗಾಗಿ ವಿನಿಯೋಗವಾಯಿತೆಂದರೂ ಸ್ವಸಂತೋಷವೂ ಅಂತರ್ಗತವಾಗಿ ಇದ್ದಿತು. ಉಳಿದ ಎರಡು ವಿಭಾಗಗಳಲ್ಲಿ ಆಧ್ಯಾತ್ಮಿಕ ಪ್ರಸಕ್ತಿ ಪ್ರಬಲವಾಗಿ ಭಗವದಾರಾಧನೆಗೆಂದೇ ಸಂಗೀತದ ವಿನಿಯೋಗ ಪ್ರಸ್ತುತವಾಯಿತು. ಮೊದಲನೆಯ ವಿಭಾಗದಲ್ಲಿ ತಾಯಿ ವೀಣಾವಿದುಷಿ ಷಣ್ಮುಖವಡಿವು ಅವರದ್ದೇ ಪ್ರಮುಖ ಪಾತ್ರ. ಮುಂದಿನ ಮೂರು ವಿಭಾಗಗಳಲ್ಲೂ ಗಂಡ ಸದಾಶಿವಂ ಅವರದ್ದೇ ಮೇಲುಗೈ. ದೈವಭಕ್ತಿ ಮೊದಲ ವಿಭಾಗದಲ್ಲೇ ಮೊದಲಾಗಿ, ಮೂರನೆಯದರಲ್ಲಿ ಮುಪ್ಪರಿಗೊಂಡು, ನಾಲ್ಕನೆಯದರಲ್ಲಿ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಅವರ ಬದುಕಿನ ಮೊದಲ ಭಾಗದಲ್ಲಿ ತಾಯಿಯ ಪ್ರಭಾವ, ಅನಂತರ ಗಂಡನ ಪ್ರಭಾವ, ರಾಜಾಜಿಯ ಪ್ರಭಾವ, ಕಂಚಿಯ ಪರಮಾಚಾರ್ಯರ ಪ್ರಭಾವ, ಪುಟ್ಟಪರ್ತಿ ಸಾಯಿಬಾಬಾರ ಪ್ರಭಾವ ಇವು ಅನುಕ್ರಮವಾಗಿ ಕಾಣಿಸಿಕೊಳ್ಳುತ್ತವೆ.

ಳ

ಎಂಎಸ್ ವಿಚಾರವಾಗಿ ಏನನ್ನು ಹೇಳುವಾಗಲೂ ಅವರ ಗಂಡ ಟಿ. (ತ್ಯಾಗರಾಜಯ್ಯರ್) ಸದಾಶಿವಂ ಸೊಲ್ಲು ಬಂದೇ ಬರುತ್ತದೆ. ಅದೊಂದು ಅನನ್ಯ, ಅನ್ಯೋನ್ಯ, ಅನುಕೂಲ ದಾಂಪತ್ಯ. ಅವರಿಬ್ಬರು ಒಬ್ಬರನ್ನೊಬ್ಬರು ಕಂಡದ್ದು 1936ರಲ್ಲಿ. ಆಗ ಎಂಎಸ್‌ಗೆ ಸುಮಾರು ಇಪ್ಪತ್ತು ವರ್ಷ ವಯಸ್ಸು; ಸದಾಶಿವಂ ಹದಿನಾಲ್ಕು ವರ್ಷ ಹಿರಿಯರು. ಅನುರಾಗ ಪರಸ್ಪರವಲ್ಲದಿದ್ದರೂ ಊರ್ಜಿತವಾಯಿತು. ಅದೊಂದು ಅನ್ಯೋನ್ಯಾಶ್ರಯದ ಕತೆ. ಅವರಿಂದ ಇವರು ನೆಲೆಗಂಡರು, ಇವರಿಂದ ಅವರು ಮೇಲೇರಿದರು. ಸ್ವಭಾವದಲ್ಲಿ ತೀರ ವಿಭಿನ್ನವಾದರೂ ಅವಿನಾಭಾವ ಅಗತ್ಯವಾಯಿತು. ಬದುಕಿನಲ್ಲಿ ಎಂಎಸ್ ಮಾರ್ಪಟ್ಟಿದ್ದು, ಪ್ರೌಢಿಮೆ-ಪ್ರಸಿದ್ಧಿಗಳನ್ನು ಪಡೆದುಕೊಂಡದ್ದು, ಕಡೆಗೆ ಸಂತಗಾಯಕಿಯಾಗಿ ನೆಲೆಗಂಡದ್ದು ಗಂಡನಿಂದಲೇ. ಗಂಡನಾದರೂ ತನ್ನೆಲ್ಲ ವೃತ್ತಿ, ಪ್ರವೃತ್ತಿಗಳನ್ನೂ ಏಕಾಗ್ರವಾಗಿ ಧಾರೆಯೆರೆದದ್ದು ಎಂಎಸ್ ಅವರ ಅಭ್ಯುದಯಕ್ಕೇ.



ಟಿ. ಸದಾಶಿವಂ

ಸದಾಶಿವಂ ಅವರ ವ್ಯಕ್ತಿತ್ವದಲ್ಲಿ ಮತ್ತು ವರ್ತನೆಯಲ್ಲಿ ಅನೇಕ ಹುಳುಕುಗಳನ್ನು ಕಾಣುವವರಿದ್ದಾರೆ, ತೋರುವವರಿದ್ದಾರೆ. ಸ್ವಾರ್ಥಪರತೆ, ನಿಷ್ಕರುಣೆ, ಮತ್ಸರ, ಮುಂಗೋಪ, ಜೋರು, ಜಂಬ, ದರ್ಪ ಮೊದಲಾಗಿ ಹಲವು ಅವಗುಣಗಳನ್ನು ಎಣಿಸುವವರಿದ್ದಾರೆ. ಅವರಿಂದ ಎಂಎಸ್‌ಗೆ ತುಂಬ ಅನ್ಯಾಯವಾಯಿತು ಎಂದು ಹೇಳುವವರೂ ಇದ್ದಾರೆ. ದಿಟವನ್ನು ಯಾರೂ ಅರಿಯರು; ಅರಿತುಕೊಳ್ಳುವ ಪರಿಯೂ ಯಾವುದಿರದು. ಎಂಎಸ್ ಅವರ ವ್ಯಕ್ತಿತ್ವದಲ್ಲಿ ಪರಿವರ್ತನೆಯಿದ್ದಂತೆಯೇ ಸದಾಶಿವಂ ಅವರ ವ್ಯಕ್ತಿತ್ವದಲ್ಲೂ ಇರಲಾರದೆ? ಸದಾಶಿವಂ ಅವರ ಮುಪ್ಪಿನಲ್ಲಿ ಯಾರೋ ಒಬ್ಬರು ಎಂಎಸ್‌ನಲ್ಲಿ ಅವರು ಕಂಡುಕೊಂಡ ಗುಣ ಯಾವುದು ಎಂದು ಅವರನ್ನು ಕೇಳಿದಾಗ ಅವರು 'ಶಾಂತಂ' (ನೆಮ್ಮದಿಯಿಂದ ಇರುವುದು), 'ಅಡಕ್ಕಂ' (ನಮ್ರತೆ) ಎಂದು ಹೇಳಿದರಂತೆ. ಇದನ್ನು ಕಂಡುಕೊಳ್ಳುವ ವಿವೇಕ, ಒಪ್ಪಿಕೊಳ್ಳುವ ಔದಾರ್ಯ, ಇತರರೆದುರು ಹೇಳುವ ಪ್ರಾಮಾಣಿಕತೆ ಇದ್ದರೆ ಸಾಕಲ್ಲ?

ಸದಾಶಿವಂ ತಮ್ಮ 95ನೆಯ ವಯಸ್ಸಿನಲ್ಲಿ, ಎರಡು ದಿನಗಳ ಕಾಲ ನರ್ಸಿಂಗ್ ಹೋಂನಲ್ಲಿದ್ದು ಉಸಿರಾಟದ ತೊಂದರೆಯಾಗಿ ಮೃತ್ಯುಮುಖದಲ್ಲಿರುವಾಗ ಎಂಎಸ್ ಬಂದರಂತೆ. ಸದಾಶಿವಂ ಅವರನ್ನು ನೋಡಿ, ನಸುನಕ್ಕು, ಅವರ ಕೈಹಿಡಿದು ನೆಮ್ಮದಿಯಿಂದ ಕಣ್ಣುಮುಚ್ಚಿದರಂತೆ. ಈ ಪ್ರಸಂಗದಿಂದ ಎದ್ದುಕಾಣುವುದು ಸದಾಶಿವಂ ಅವರದ್ದೇ 'ಶಾಂತಂ', 'ಅಡಕ್ಕಂ' ಗುಣಗಳು. ಸದಾಶಿವಂ ತೀರಿಕೊಂಡ ಮೇಲೆ ಎಂಎಸ್‌ಗೆ ಬ್ರಹ್ಮಾಂಡವೇ ಬರಿದಾದದ್ದೂ ಉಲ್ಲೇಖವಿದೆ. ಹೆಂಡತಿಯೇ ಗಂಡನ ವ್ಯಕ್ತಿತ್ವವನ್ನು ಒಟ್ಟಾರೆ ಅಂಗೀಕರಿಸಿಕೊಂಡಮೇಲೆ, ಅವನಲ್ಲಿ ಇದ್ದಿರಬಹುದಾದ ಅವಗುಣಗಳನ್ನು ಎಣಿಸದೆ ಗೌರವಬುದ್ಧಿಯಿಂದಲೇ ಕಂಡುಕೊಂಡಮೇಲೆ, ಇತರರ ತಕರಾರು ಏನು? ಊಹಾಪೋಹಗಳಿಗೆ ಬೆಲೆ ಏನು?

ಸದಾಶಿವಂ (ಹುಟ್ಟಿದ್ದು 1902ರ ಸೆಪ್ಟೆಂಬರ್ 4ರಂದು) ವಿದ್ಯಾರ್ಥಿಯಾಗಿದ್ದಾಗ ಭಾರತಸ್ವಾತಂತ್ರ್ಯಕ್ಕಾಗಿ ವಿಪ್ಲವಮಾರ್ಗಕ್ಕೆ ಒಲಿದು, ಸುಬ್ರಹ್ಮಣ್ಯಶಿವ ಎಂಬ ಯುವನಾಯಕನಿಂದ ಬಾಂಬ್ ಸಿಡಿಸುವ ಕಲೆಯನ್ನು ಕಲಿತಮೇಲೆ, ರಾಜಾಜಿಯ ಅಸಹಕಾರ ಚಳುವಳಿಯಲ್ಲಿ ಸೇರಿ

ಸತ್ಯಾಗ್ರಹಿಯಾದರು. ಎರಡು ಬಾರಿ ಸೆರೆಮನೆಯನ್ನೂ ಸೇರಿದರು. ಅಲ್ಲಿ ರಾಜಾಜಿಯ ಅಂತರಂಗ ಭಕ್ತರಾಗಿದ್ದ ಆರ್. ಕೃಷ್ಣಮೂರ್ತಿ ('ಕಲ್ಕಿ', 1899-1954)ಯೆಂಬ ಸಾಹಿತಿ-ಸತ್ಯಾಗ್ರಹಿಯ ಸಂಪರ್ಕಕ್ಕೆ ಬಂದು, ಮುಂದೆ ರಾಜಾಜಿಯ ಅಚ್ಚುಮೆಚ್ಚಿನ ಅನುಯಾಯಿಯಾದರು. ಖದ್ದರ್ ಮಾರಾಟದಲ್ಲೂ ತಮ್ಮನ್ನು ತೊಡಗಿಸಿಕೊಂಡರು.

ಅನಂತರ ತಮ್ಮ ಆಪ್ತಮಿತ್ರರಾದ 'ಕಲ್ಕಿ' ಕೃಷ್ಣಮೂರ್ತಿಯ ನೆರವಿನಿಂದ ಅವರು ಸಂಪಾದಕರಾಗಿದ್ದ 'ಆನಂದ ವಿಕಟನ್' ಎಂಬ ಹೆಸರಾಂತ ತಮಿಳು ಪತ್ರಿಕೆಯ ಜಾಹಿರಾತು ಪ್ರತಿನಿಧಿಯಾಗಿ ಕೆಲಸಮಾಡಿ ಪತ್ರಿಕೆಯಲ್ಲಿ ಪ್ರಕಾಶನಕ್ಕೆಂದು ಸಂಗೀತ-ನರ್ತನ ಪ್ರಪಂಚದ ಗಣ್ಯರನ್ನು ಭೇಟಿಮಾಡುವ ಸಂದರ್ಭದಲ್ಲಿ ಎಂಎಸ್ ಅವರನ್ನು ಕಂಡರು. ಇದೇ ಮುಂದಿನ ಅಪುರೂಪ ದಾಂಪತ್ಯಕ್ಕೆ ನಾಂದಿಯಾಯಿತು. ಇದಾದ ತರುಣದಲ್ಲೇ ಸದಾಶಿವಂ ನಿರ್ದೇಶನದಲ್ಲಿ ಕಲ್ಕತ್ತೆಯಲ್ಲಿ ತಮಿಳು 'ಸಾವಿತ್ರಿ' ಚಲಚ್ಚಿತ್ರ ಸಿದ್ಧವಾಯಿತು; ಎಂಎಸ್ ಅದರಲ್ಲಿ ನಾರದರ ಪಾತ್ರ ವಹಿಸಿದ್ದರು. ಈ ಚಲಚ್ಚಿತ್ರದಲ್ಲಿ ಆಕೆಗೆ ಬಂದ ಹಣದಿಂದಲೇ ಸದಾಶಿವಂ 'ಕಲ್ಕಿ' ವಾರಪತ್ರಿಕೆಯನ್ನು ಪ್ರಾರಂಭಿಸಿದರು; ಕೃಷ್ಣಮೂರ್ತಿಯೇ ಸಂಪಾದಕರಾದರು.

ಎಂಎಸ್-ಸದಾಶಿವಂ ಮೊದಲ ಸಂಪರ್ಕದ ಬಗ್ಗೆ ಇನ್ನೊಂದು ವಿವರಣೆಯಿದೆ. ಷಣ್ಮುಖವಡಿವು ಚೆನ್ನೈನಲ್ಲಿ ಮಕ್ಕಳೊಂದಿಗೆ ನೆಲೆಸಿದಮೇಲೆ ವೀಣಾ ಧನಂ ಅವರು ಎಂಎಸ್ ಹಾಡಿಕೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಧನಮ್ಮಾಳ್ ಮುಂಬಯಿ ಮಾತುಂಗಾ ಸಂಗೀತಸಭೆಗೆ ಹೋಗಿ-ಬರುತ್ತಲೇ ಇದ್ದರು. ಆ ವರ್ಷ ಅದೇ ಸಭೆಯಲ್ಲಿ ಧನಮ್ಮಾಳ್ ಮೊಮ್ಮಕ್ಕಳಾದ ಬೃಂದಾ, ಮುಕ್ತಾ, ಅಭಿರಾಮ ಸುಂದರಿಯರ ಗಾಯನ, ಬಾಲಸರಸ್ವತಿಯ ನೃತ್ಯ ಏರ್ಪಟ್ಟಿದ್ದಿತು. ಎಂಎಸ್ ಗಾಯನವನ್ನೂ ಅದೇ ಸಂದರ್ಭದಲ್ಲಿ ಇರಿಸಿಕೊಳ್ಳುವಂತೆ ಧನಮ್ಮಾಳ್ ಸಭೆಯವರಿಗೆ ಸೂಚಿಸಿದರು; ಅವರೂ ಒಪ್ಪಿದರು. ಎಂಎಸ್ ಮುಂಬಯಿಗೆ ಹೋಗುವುದೆಂದು ನಿಶ್ಚಯವಾಯಿತು, ಆದರೆ ಅವರಿಗೆ ವಯಲಿನ್ ಪಕ್ಕವಾದ್ಯ ನುಡಿಸಲು ಒಪ್ಪಿಕೊಂಡಿದ್ದ ಮಾಯಾವರಂ ಗೋವಿಂದರಾಜಪಿಳ್ಳೆ ಕಡೆಯಗಳಿಗೆಯಲ್ಲಿ

ತಮಗೆ ಬರಲಾಗುವುದಿಲ್ಲವೆಂದುಬಿಟ್ಟರು. ಬೇರೆಯವರು ದೊರೆಯುವುದು ಕಷ್ಟವಾಗಿ, ಎಂಎಸ್ ತಾನೊಬ್ಬಳೇ ಮುಂಬಯಿಗೆ ಹೋಗುವುದಿಲ್ಲವೆಂದಾಯಿತು. ಆಗ ಒಬ್ಬ ತರುಣ ಉತ್ಸಾಹಿ, ತಾನು ಎಂಎಸ್ ಜೊತೆಗೆ ಮುಂಬಯಿಗೆ ಹೋಗಿ ಅಲ್ಲಿಯೇ ಪಕ್ಕವಾದ್ಯದವರನ್ನು ಗೊತ್ತುಮಾಡುವುದಾಗಿ ಮುಂದೆ ಬಂದ. ಈ ತರುಣನೇ ಟಿ. ಸದಾಶಿವಂ. ಎಂಎಸ್ ಮುಂಬಯಿಗೆ ಹೋದದ್ದೂ ಆಯಿತು; ಅಲ್ಲಿಯೇ ಇದ್ದ ಪರೂರು ಎಂ. ಎಸ್. ಅನಂತರಾಮನ್ (ಖ್ಯಾತಿವೆತ್ತ ಎಂಎಸ್ ಗೋಪಾಲಕೃಷ್ಣನ್ ಅವರ ಸೋದರ, ಪರೂರು ಸುಂದರಂ ಅಯ್ಯರ ಮಗ) ವಯಲಿನ್ ಪಕ್ಕವಾದ್ಯ ನುಡಿಸಿದ್ದೂ ಆಯಿತು; ಎಂಎಸ್ ಹಾಡಿಕೆಗೆ ಮುಂಬಯಿಯ ರಸಿಕರು ಬೆರಗಾದದ್ದೂ ಆಯಿತು. ಇದು ಸದಾಶಿವಂ-ಎಂಎಸ್ ಇಬ್ಬರೂ ಒಟ್ಟಿಗೆ ಸೇರಿದ ಸಂದರ್ಭವೆಂದು ಕೆಲವರ ಎಣಿಕೆ. ಯಾವುದು ದಿಟವೋ ದೇವರು ಬಲ್ಲ!

ಶ

ಮುಂದಿನ ಪ್ರಕರಣ 'ಕಲ್ಕಿ ಗಾರ್ಡನ್ಸ್' ವ್ಯವಸ್ಥೆ (1947). ಪತ್ರಿಕೆಯ ಸಂಪಾದನೆ, ಪ್ರಕಟಣೆ, ವಿತರಣೆ ಎಲ್ಲಕ್ಕೂ ಕೇಂದ್ರಸ್ಥಳವಾದದ್ದು ಮಾತ್ರವಲ್ಲ, ಸದಾಶಿವಂ ಗುರುಗಳಾಗಿದ್ದ ರಾಜಾಜಿಯ ರಾಜಕಾರಣ ಚಟುವಟಿಕೆಗಳಿಗೆಲ್ಲ ಅದೇ ತಾಣವಾಯಿತು, ಅವರ ಪ್ರೇರಣೆಯಿಂದ ಪ್ರಕಟಗೊಳ್ಳುತ್ತಿದ್ದ 'ಸ್ವರಾಜ್ಯ' ಪತ್ರಿಕೆಯ ಸಂಪಾದಕ ಖಾಸಾ ಸುಬ್ಬರಾಯರ ನಿವಾಸಸ್ಥಳವೂ ಆಯಿತು. ಇಲ್ಲಿಂದ 'ಕಲ್ಕಿ' ವಾರಪತ್ರಿಕೆ ಹೊರಡುತ್ತಿದ್ದಿತು; ರಾಜಾಜಿಯ ಸ್ವರಾಜ್ಯ ಪಕ್ಷದ ಕಾರ್ಯಾಲಯವೂ ಇಲ್ಲಿಯೇ ಇದ್ದಿತು. 'ಆನಂದ ವಿಕಟನ್' ಕಾಂಗ್ರೆಸ್ ಪಕ್ಷದ ಮುಖಪತ್ರಿಕೆಯಾಗಿದ್ದಂತೆ, 'ಕಲ್ಕಿ' ಸ್ವರಾಜ್ಯ ಪಕ್ಷದ ಮುಖಪತ್ರಿಕೆಯಾಯಿತು. ರಾಜಾಜಿ ಕಾಂಗ್ರೆಸ್ ಪಕ್ಷದಿಂದ ಹೊರಬಂದು ತಮ್ಮದೇ ಪಕ್ಷವೊಂದನ್ನು ಏರ್ಪಡಿಸಿಕೊಂಡಿದ್ದ ಕಾಲ ಅದು. ಈ ಪಕ್ಷಕ್ಕೆ ಬೆಂಬಲವಾಗಿ ನಿಂತು ರಾಜಾಜಿಗೆ ನೆರವಾದವರು ಸದಾಶಿವಂ. ಮೂವತ್ತು ವರ್ಷಗಳಷ್ಟು ಕಾಲ ಸದಾಶಿವಂ ಇಲ್ಲಿ ಏಕಚ್ಛತ್ರಾಧಿಪತಿಯಂತೆ ಮೆರೆದರು. 'ಸ್ವರಾಜ್ಯ' ಸ್ಥಾಪನೆಗೆ ಮೊದಲು

ಕಾಂಗ್ರೆಸ್ ನಾಯಕರೇ ಆಗಿದ್ದ ರಾಜಾಜಿಯ ಅನುಗ್ರಹದಿಂದ ಅವರಿಗೆ ಮಹಾತ್ಮಾಗಾಂಧಿ, ಜವಹರಲಾಲ ನೆಹ್ರೂ ಮೊದಲಾದ ನಾಯಕರ ಪರಿಚಯವಾಯಿತು; ದಿಲ್ಲಿ ಸಂಪರ್ಕ, ಸರಕಾರದ ಸಹಯೋಗ ದೊರೆತುವು. ತಮ್ಮ ಪ್ರಭಾವ ನಾಲ್ಕೂ ಕಡೆ ಪಸರಿಸುವಂತಾಯಿತು.

ಆದರೆ 1954ರಲ್ಲಿ 'ಕಲ್ಕಿ' ಪತ್ರಿಕೆಯ ಜೀವನಾಡಿಯಾಗಿದ್ದ, ಸದಾಶಿವಂಗೆ ನೆಚ್ಚಿನ ಗೆಳೆಯರಾಗಿದ್ದ, ಜನಪ್ರಿಯ ಸಾಹಿತಿಯೆಂದು ಹೆಸರಾಗಿದ್ದ ಕೃಷ್ಣಮೂರ್ತಿ ತೀರಿಕೊಂಡರು. ಸದಾಶಿವಂಗೆ ಗುರುವಾಗಿದ್ದ, ಮಾರ್ಗದರ್ಶಿಯಾಗಿದ್ದ ರಾಜಾಜಿ 1972ರಲ್ಲಿ ಕಣ್ಮುಚ್ಚಿದರು. ರಾಜಾಜಿಯ ಸಂಪರ್ಕಕ್ಕೆ ಬಂದಮೇಲೇ ಸದಾಶಿವಂ ತಮ್ಮ ವಿಶೇಷ ವ್ಯಕ್ತಿತ್ವವನ್ನು ಪಡೆದುಕೊಂಡದ್ದು. 'ಪೆರಿಯವರ್'(ಹಿರಿಯರು) ಎಂದೇ ಸದಾಶಿವಂ ಅವರನ್ನು ಗುರುತಿಸಿ ನಡೆದುಕೊಂಡರು. ಗಾಂಧೀಜಿಯ ಪಟ್ಟಶಿಷ್ಯರಾಗಿ, ಕಾಂಗ್ರೆಸ್ ನಾಯಕರಾಗಿ, ಸತ್ಯಾಗ್ರಹ ಚಳುವಳಿಯ ಧುರೀಣರಾಗಿದ್ದ ರಾಜಾಜಿ (ಚಕ್ರವರ್ತಿ ರಾಜಗೋಪಾಲಾಚಾರ್ಯರು) ಭಾರತ ಸ್ವತಂತ್ರವಾದ ಮೇಲೆ ಮೊಟ್ಟಮೊದಲ ಭಾರತೀಯ ಗೌರ್ನರ್ ಜನರಲ್ ಆದರು; ಅನಂತರ ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾದರು; ಮುಂದೆ ತಮಿಳುನಾಡು ಪ್ರಾಂತ್ಯದ ಮುಖ್ಯಮಂತ್ರಿಯಾದರು. ಅನಂತರ ನೆಹ್ರು ಸರ್ಕಾರದ ಧೋರಣೆಯನ್ನು ವಿರೋಧಿಸಿ ಕಾಂಗ್ರೆಸ್‌ನಿಂದ ಹೊರಬಂದು ಸ್ವರಾಜ್ಯ ಪಕ್ಷವನ್ನು ಕಟ್ಟಿದರು. ಕಡೆಕಡೆಗೆ 'ಕಲ್ಕಿ ಗಾರ್ಡನ್ಸ್'ನಲ್ಲೇ ವಾಸಿಸುತ್ತಿದ್ದರು. ಸದಾಶಿವಂ ಇಲ್ಲದೆ ಅವರು ಕೆಲಸಮಾಡುವುದಿರಲಿ ಉಸಿರಾಡುವುದೇ ಕಷ್ಟವೆಂದು ಅವರೇ ಹೇಳುತ್ತಿದ್ದರು. ಈಗ ಅವರು ಕಣ್ಮರೆಯಾದಮೇಲೆ 'ಕಲ್ಕಿ ಗಾರ್ಡನ್ಸ್'ನ ಕಳೆಯೂ ಸಾಕಷ್ಟು ಮರೆಯಾಯಿತು. 'ಸ್ವರಾಜ್ಯ'ದ ಸಂಪಾದಕರಾಗಿ ಅಲ್ಲಿಯೇ ಇದ್ದ ಖಾಸಾ ಸುಬ್ಬರಾಯರೂ 1961ರಲ್ಲಿ ತೀರಿಕೊಂಡಿದ್ದರು.

ಸಾಲದುದಕ್ಕೆ 'ಕಲ್ಕಿ' ಕಾರ್ಯಾಲಯದ ನೌಕರರು ಬಂಡಾಯವೆದ್ದರು. ಎಲ್ಲವೂ ಸದಾಶಿವಂಗೆ ವಿಪರೀತವೇ ಆಯಿತು. 1977ರಲ್ಲಿ ಅವರು 'ಕಲ್ಕಿ ಗಾರ್ಡನ್ಸ್' ಆವರಣವನ್ನೆಲ್ಲ ಮಾರಿ ನೌಕರರಿಗೆ ಪರಿಹಾರ ಹಣವನ್ನು ಧಾರಾಳವಾಗಿಯೇ ವಿತರಣೆ ಮಾಡಿ ಕೈತೊಳೆದುಕೊಂಡರು. ಎರಡು ಲಕ್ಷ

ರೂಪಾಯಿಗಳಿಗೆ ಚೆಟ್‌ಪೆಟ್‌ನಲ್ಲಿ ಪೂನಮಲ್ಲಿ ಹೈರೋಡಿನಲ್ಲಿದ್ದ ಎರಡು ಎಕರೆ ಹರವಿನ ಈ ಆಸ್ತಿಯನ್ನು ಕೊಂಡು ಮೂವತ್ತು ವರ್ಷಗಳ ನಂತರ ಹದಿನಾರು ಲಕ್ಷ ರೂಪಾಯಿಗಳಿಗೆ ಮಹರ್ಷಿ ಮಹೇಶಯೋಗಿ ವಿದ್ಯಾಮಂದಿರಕ್ಕೆ ಮಾರಿದರು. ಬಂದ ಹಣವೆಲ್ಲ ನೌಕರರನ್ನು ತಣಿಸುವುದರಲ್ಲೇ ಕರಗಿತು. ವೈಭವದಲ್ಲಿ ಮೆರೆಯುತ್ತಿದ್ದ ಸದಾಶಿವಂ ಈಗ ಮತ್ತೆ ಸಾಮಾನ್ಯ ಸ್ಥಿತಿಗೆ ಮರಳಿದರು. ಸಾಧಾರಣ ಮನೆಯೊಂದನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು ಎಂಎಸ್ ಅವರೊಡನೆ ವಾಸಮಾಡತೊಡಗಿದ್ದರು. ಬಹುಕಾಲ ಸದಾಶಿವಂ ಕಾರ್ಯದರ್ಶಿಯಂತೆ ಕೆಲಸಮಾಡುತ್ತಿದ್ದ, ಅವರಿಗೆ ತುಂಬ ಬೇಕಾದ ಆತ್ಮನಾಥನ್ ಎಂಬುವರು, ಸದಾಶಿವಂ ನೆರವಿನಿಂದ ಸ್ವಂತ ಉದ್ಯಮವನ್ನಾರಂಭಿಸಿ, ಬಂದ ಹಣದಲ್ಲಿ ಚೆನ್ನೈನ ಕೊಟ್ಟೂರುಪುರ ವಿಸ್ತರಣದಲ್ಲಿ ಮನೆಯೊಂದನ್ನು ಕೊಂಡು, ಮಾರ್ಪಡಿಸಿ ಅದಕ್ಕೆ 'ಶಿವಂ ಶುಭಂ' ಎಂದು ಹೆಸರಿಟ್ಟರು. 'ಶಿವಂ' ಎಂದರೆ ಸದಾಶಿವಂ, 'ಶುಭಂ' ಎಂದರೆ ಸುಬ್ಬುಲಕ್ಷ್ಮಿ. ಇವರಿಗೆಂದೇ ಕಟ್ಟಿಸಿದ ಮನೆ ಅದು. ಚೊಕ್ಕವಾದ ಸಣ್ಣಮನೆ. ಅಲ್ಲಿ ಸದಾಶಿವಂ-ಎಂಎಸ್ ವಿಶ್ರಾಂತಿ ಜೀವನದಲ್ಲಿ, ಶಾಂತ ಪರಿಸರದಲ್ಲಿ ಇರತೊಡಗಿದರು. ಆತ್ಮನಾಥನ್ ಅವರಿಬ್ಬರನ್ನೂ ಆದರದಿಂದ ನೋಡಿಕೊಳ್ಳುತ್ತಿದ್ದರು.



ಟಿ. ಸದಾಶಿವಂ

ಇದೊಂದು ಘಟ್ಟ ಮುಗಿದಂತೆ. ಮುಂದೆ ಸದಾಶಿವಂರ ಚಟುವಟಿಕೆಯು ಇಳಿಮುಖವಾಯಿತು. ಎಂಎಸ್ ಅವರ ಸಂಗೀತವಷ್ಟೆ ಅವರ ಪಾಲಿಗೆ ಉಳಿಯಿತು. ತಮ್ಮ 95ನೆಯ ವಯಸ್ಸಿನಲ್ಲಿ (1997ರ ನವೆಂಬರ್ 19ರಂದು) ತೀರಿಕೊಂಡರು. ಎಂಎಸ್ ಅವರ ಬಾಳುವೆಯಲ್ಲಿ ಅದೂ ಒಂದು ಅಧ್ಯಾಯ ಮುಗಿಯಿತು.

೬

ಎಂಎಸ್ ಅವರ ಬದುಕನ್ನು ನೋಡಿದಾಗ, ಸದಾಶಿವಂ 'ಕಲ್ಕಿ ಗಾರ್ಡನ್ಸ್'ನಲ್ಲಿರುವಾಗಲೇ (1947-1977) ಎಂಎಸ್ ಅವರ ವೈಭವದ ದಿನಗಳು. ಸನ್ಮಾನಗಳ ಸುರಿಮಳೆ ಒದಗಿಬಂದದ್ದು, ದೇಶವಿದೇಶಪ್ರವಾಸಗಳು ಕೈಗೂಡಿದ್ದು, ಲೋಕವಿಖ್ಯಾತಿ ಸಿದ್ಧಿಸಿದ್ದು, ಅವರ ಸಂಗೀತ ಲೋಕೋತ್ತರವಾದದ್ದು, ರಾಜಾಜಿಯ ಮಾರ್ಗದರ್ಶನ ಲಭಿಸಿದ್ದು, ಕಂಚಿ ಪರಮಾಚಾರ್ಯರ (ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳ) ಆದರಾನುಗ್ರಹ ದೊರೆತದ್ದು, ಜನಪ್ರಿಯವಾದ ಧ್ವನಿಮುದ್ರಿಕೆಗಳು ಹೊರಬಂದದ್ದು ಎಲ್ಲವೂ ಈ ಅವಧಿಯಲ್ಲೇ. ಸದಾಶಿವಂ ತನಗಿದ್ದ ಎಲ್ಲ ಅನುಕೂಲಗಳನ್ನೂ, ಸಂಪರ್ಕಗಳನ್ನೂ, ಸೌಲಭ್ಯಗಳನ್ನೂ ಎಂಎಸ್ ಅಭ್ಯುದಯಕ್ಕೆ, ಅವರ ಪ್ರಶಸ್ತಿ ಪ್ರಖ್ಯಾತಿಗಳಿಗೇ ವಿನಿಯೋಗಿಸಿದರು. ಇದೇ ಅವಧಿಯಲ್ಲಿ ಎಂಎಸ್ ಸಂಗೀತವೂ ಪರಿಪಕ್ವವಾಯಿತು, ಉನ್ನತವಾಯಿತು, ಊರ್ಜಿತವಾಯಿತು, ವಿಸ್ತೃತವಾಯಿತು, ಅಪರಿಮಿತವಾಗಿ ಜನಪ್ರಿಯವಾಯಿತು. ಅದು ಜನರಂಜನೆಯಿಂದ ಆತ್ಮೋನ್ನತಿಯ ಕಡೆಗೆ ತಿರುಗಿದ್ದೂ ಆಗಲೇ. ಮತ್ತೆ, ಸದಾಶಿವಂ ಅವರಲ್ಲೂ ಬರುಬರುತ್ತ ಒಂದು ಪರಿವರ್ತನೆಯಾಗಿರಬೇಕು. ಎಂಎಸ್‌ರವರಲ್ಲಿ ಅವರು ಕಂಡುಕೊಂಡ 'ಶಾಂತಂ', 'ಅಡಕ್ಕಂ' ಗುಣಗಳು ಇವರಲ್ಲೂ ಸಂಕ್ರಮಿಸಿರಬಹುದು.

ಮೂವತ್ತು ವರ್ಷಗಳ ಆ ಅವಧಿಯಲ್ಲಿ ನಮ್ಮ ನಾಡಿನ ಎಲ್ಲ ಹಿರಿಯ ಸಂಗೀತ ವಿದ್ವಾಂಸರೂ ಎಂಎಸ್ ಅವರ ಸಂಪರ್ಕಕ್ಕೆ ಬಂದು, ಅವರ

ಕಂಠಸಿರಿಯನ್ನು ಮಾತ್ರವಲ್ಲದೆ ಪ್ರತಿಭೆಯನ್ನೂ ಪ್ರೌಢಿಮೆಯನ್ನೂ ಮುಕ್ತಕಂಠದಿಂದ ಮೆಚ್ಚಿಕೊಂಡು, ಅವರಿಗೆ ಸಂಗೀತವಿಚಾರವಾಗಿ ನೆರವಾದರು. ಇದು ಮಹತ್ವದ ವಿಚಾರ. ಇದರ ವಿವರಣೆ ಮುಂದೆ ಬರಲಿದೆ.

ಅವರಿಗೆ ಸಂದ ಹಲವು ಸನ್ಮಾನಗಳು, ದೇಶ-ವಿದೇಶಗಳಿಂದ ದೊರೆತ ಪುರಸ್ಕಾರಗಳು ಬಹುಮಟ್ಟಿಗೆ ಇದೇ ಅವಧಿಗೆ ಸೇರುತ್ತವೆ. 'ಪದ್ಮಭೂಷಣ' (1954 ಈ ಸನ್ಮಾನವು ವ್ಯವಸ್ಥೆಗೊಂಡ ವರ್ಷವೇ), ರಾಷ್ಟ್ರಾಧ್ಯಕ್ಷರ ಪುರಸ್ಕಾರ (1956), 'ಸಂಗೀತ ಕಲಾನಿಧಿ' (1968), ರಮೊನ್ ಮ್ಯಾಗ್ಸೆಸೇ ಪುರಸ್ಕಾರ (1974), ತಮಿಳು ಇಶೈ ಸಂಗಂನಿಂದ 'ಇಶೈ ಪೇರಾರಿಗ್ನರ್' ಪ್ರಶಸ್ತಿ (1970), ಶ್ರೀ ವೆಂಕಟೇಶ ತ್ಯಾಗರಾಜಸ್ವಾಮಿ ಉತ್ಸವದಲ್ಲಿ 'ಸಪ್ತಗಿರಿ ಸಂಗೀತವಿದ್ವನ್ಮಣಿ' ಪ್ರಶಸ್ತಿ (1975), 'ಪದ್ಮವಿಭೂಷಣ' (1975), ಗೌರವ ಡಾಕ್ಟೊರೇಟುಗಳು ರವೀಂದ್ರಭಾರತೀ ವಿಶ್ವವಿದ್ಯಾನಿಲಯದಿಂದ (1967), ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾನಿಲಯದಿಂದ (1971), ದಿಲ್ಲಿ ವಿಶ್ವವಿದ್ಯಾನಿಲಯದಿಂದ (1973), ಕೇಂದ್ರದ ಸಂಗೀತ ನಾಟಕ ಅಕ್ಯಾದಮಿಯ ಫೆಲೋಶಿಪ್ (1974), ಸೂರ್ ಸಿಂಗಾರ್ ಪುರಸ್ಕಾರ (1977). ಈ ಅವಧಿಗೆ ಮೊದಲು ಶೆಮ್ಮಂಗುಡಿ ಶ್ರೀನಿವಾಸಯ್ಯರು ಮತ್ತು ಕುಂಭಕೋಣಂ ರಾಜಮಾಣಿಕ್ಯಂಪಿಳ್ಳೆ ಅವರು ನೀಡಿದ 'ಇಶೈವಾಣಿ' ಪ್ರಶಸ್ತಿ (1940); ಈ ಅವಧಿಯ ನಂತರ ಅವರಿಗೆ ಸಂದ ಗೌರವ ಡಾಕ್ಟೊರೇಟುಗಳು ಮಧ್ಯಪ್ರದೇಶದ ಖೈರಾಘರ್ ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾನಿಲಯದಿಂದ (1979), ವಾರಣಾಸಿ ಹಿಂದೂ ವಿಶ್ವವಿದ್ಯಾನಿಲಯದಿಂದ (1980), ಮದ್ರಾಸು ವಿಶ್ವವಿದ್ಯಾನಿಲಯದಿಂದ (1987), ಶಾಂತಿನಿಕೇತನ ವಿಶ್ವಭಾರತಿ ವಿಶ್ವವಿದ್ಯಾನಿಲಯದಿಂದ 'ದೇಶಿಕೋತ್ತಮ' ಪುರಸ್ಕಾರ (1981), ಆಲ್ ಇಂಡಿಯ ರೇಡಿಯೋದಲ್ಲಿ 'ಪ್ರಡ್ಯೂಸರ್ ಎಮಿರಿಟಸ್' ಆಗಿ ನೇಮಕ (1979), ತಿರುಮಲ ತಿರುಪತಿ ದೇವಸ್ಥಾನದ ಆಸ್ಥಾನ ವಿದ್ವಾನ್ (1980), ಕಾಳಿದಾಸ ಸಮ್ಮಾನ (1988), ಕೋಣಾರ್ಕ ಸಮ್ಮಾನ (1991) ಮತ್ತು 'ಭಾರತರತ್ನ' (1998) ಇವನ್ನು ಹೆಸರಿಸಬಹುದು.

ಇದೇ ಅವಧಿಯಲ್ಲಿ ಅವರಿಗೆ ವಿದೇಶಗಳಲ್ಲಿ ವಿಖ್ಯಾತರಾಗುವ ಅವಕಾಶಗಳು ಒದಗಿದವು. ಎಡಿನ್‌ಬರೋ ಅಂತಾರಾಷ್ಟ್ರೀಯ ಕಲಾಸಮ್ಮೇಳನದಲ್ಲಿ (1963), ಯುಎನ್ ಸಾಮಾನ್ಯ ಸಮ್ಮೇಳನದಲ್ಲಿ (1966), ಅಮೇರಿಕೆಯಲ್ಲಿ ತೀರದಿಂದ ತೀರಕ್ಕೆ ಪ್ರವಾಸ ಮಾಡಿ ಹಾಡುವ ಅವಕಾಶ (1977), ನ್ಯೂಯಾರ್ಕಿನ ಕಾರ್ನೆಗಿ ಭವನದಲ್ಲಿ ಹಾಡುವ ಸಂದರ್ಭ (1977) ಇವು. ಈ ಅವಧಿಯ ನಂತರ ಬ್ರಿಟನ್ನಿನ ರಾಯಲ್ ಆಲ್ಬರ್ಟ್ ಭವನದಲ್ಲಿ ಬ್ರಿಟಿಷ್ ಸಾಮ್ರಾಜ್ಞಿಯ ಸಮ್ಮುಖದಲ್ಲಿ (1982), ರಷ್ಯದ ಮಾಸ್ಕೋ ನಗರದಲ್ಲಿ ಕ್ರೆಮ್ಲಿನ್ ಅರಮನೆಯಲ್ಲಿ (1987) ಮತ್ತು ರಷ್ಯದ ಸಂಗೀತ ವಿದ್ವಾಂಸರೆದುರು ರಕ್ಮನಿನೋಫ್ ಭವನದಲ್ಲಿ (ಅದೇ ವರ್ಷ) ಹಾಡಿದರು.

ಆದರೆ ಈ ಪ್ರಶಸ್ತಿಗಳು, ಪುರಸ್ಕಾರಗಳು, ಪ್ರವಾಸಗಳು ಇವೆಲ್ಲವೂ ಲೋಕೋತ್ತರ ನೆಲೆಯಲ್ಲಿದ್ದ ಎಂಎಸ್‌ರವರಿಗೇನು ಅಗತ್ಯವೂ ಆಗಿರಲಿಲ್ಲ, ಮುಖ್ಯವೆಂದೂ ಅನಿಸಲಿಲ್ಲ. ಅದರಿಂದ ಅವರ ಸ್ವಭಾವ, ಪ್ರವೃತ್ತಿಗಳಲ್ಲಿ ಏನೊಂದು ವಿಕಾರವೂ ಒದಗಲಿಲ್ಲ. ಅವರ ನೆಮ್ಮದಿ, ನಮ್ರತೆಗಳು (ಸದಾಶಿವಂ ಹೇಳಿದಂತೆ 'ಶಾಂತಂ', 'ಅಡಕ್ಕಂ') ಎಷ್ಟು ಮಾತ್ರಕ್ಕೂ ಕೆಡಲಿಲ್ಲ. ಅವರ ಜೀವನ ಮೌಲ್ಯಗಳು ಎಂದಿನಂತೆಯೇ ಉಳಿದುಕೊಂಡವು. ಗರ್ವದ ಲವಲೇಶವೂ ಅವರಲ್ಲಿ ಮೂಡಿಕೊಳ್ಳಲಿಲ್ಲ. ಕಡೆಯ ಗಳಿಗೆಯವರೆಗೂ ಠೇಂಕಾರ ಅವರತ್ತ ಸುಳಿಯಲಿಲ್ಲ. ಇದೊಂದು ಅವರ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿದ್ದ ಗುಣ. ತಮ್ಮೊಳಗೆ ತಾವು ನೆಲೆ ನಿಂತಿದ್ದರಾಗಿ ಹೊರಗಣ ಯಾವ ಲಾಭ-ನಷ್ಟಗಳೂ ಒಳಗಣ ನೆಮ್ಮದಿಯನ್ನು ಕದಲಿಸಲಿಲ್ಲ. ಅವರ ಶ್ರದ್ಧೆ ಸಂಪೂರ್ಣವಾಗಿ ದೈವದಲ್ಲಿದ್ದಿತು.

೨

ಎಳೆತನದಲ್ಲಿ ಮನೆಯಲ್ಲಿಯೇ ಪೂಜೆಪುನಸ್ಕಾರಗಳು ನಡೆಯುತ್ತಿದ್ದವು; ನೆರೆಯಲ್ಲೇ ಇದ್ದ ಕಾಮಾಕ್ಷಿಯ ಗುಡಿಯಲ್ಲಿನ ನಿತ್ಯನೈಮಿತ್ತಿಕ ಪೂಜೆ, ಉತ್ಸವಗಳ ಪ್ರಭಾವವೂ ಇದ್ದಿತು. ತಂದೆಯೂ ರಾಮಭಕ್ತರು; ಭಕ್ತಿಯೇ ಮುಖ್ಯವೆಂದು

ಮಗಳಿಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಚೆನ್ನೈಗೆ ತಾಯಿಯೊಂದಿಗೆ ವಲಸೆಬಂದಮೇಲೆ ಅಲ್ಲಿ ಚೈನಾಬಜಾರಿನಲ್ಲಿರುತ್ತಿದ್ದ ಚೆನ್ನಕಾಳಿಯಮ್ಮನ ಗುಡಿಗೆ ದಿನವೂ ಹೋಗುವುದು ತಪ್ಪಲಿಲ್ಲ. ತಮಿಳ್ ಇಶೈ ಚಳುವಳಿ ತಲೆಯೆತ್ತಿಕೊಂಡಾಗಲೂ ಭಕ್ತಿಯೇ ಆದರ ಅಂತರಂಗದ ಆಸರೆಯೆಂಬುದನ್ನು ಅರಿತುಕೊಂಡರು. ಗಂಡ ಸದಾಶಿವಂ ವ್ಯವಹಾರಚತುರರಾಗಿದ್ದರೂ ಒಡಲಲ್ಲಿ ಎಲ್ಲೋ ಒಂದು ಕಡೆ ದೈವಭಕ್ತಿಯ ಸಣ್ಣ ಸುಳಿ ಅಡಗಿದ್ದಿತು; ಹೊರಗಣ ನೋಟಕ್ಕೇನೋ ಅವರು ಸಂಪ್ರದಾಯ ಶರಣರು, ಸನಾತನಿ ಮನೋವೃತ್ತಿಯವರು; ಆದರೆ ಇಷ್ಟಿದ್ದ ಮಾತ್ರಕ್ಕೆ ಭಕ್ತಿ ಬೇರೂರಿರಬೇಕೆಂಬ ನಿಯಮವೇನಿಲ್ಲವಷ್ಟೆ? ಎಂಎಸ್‌ಗಿದ್ದ ದೈವಶ್ರದ್ಧೆ ಅವರಲ್ಲಿ ಎಷ್ಟರ ಮಟ್ಟಿಗಿದ್ದಿತೋ ಹೇಳುವ ಹಾಗಿಲ್ಲ. ಅವರಿಂದಾಗಿ ಎಂಎಸ್‌ಗೆ ಕಂಚಿ ಪರಮಾಚಾರ್ಯರ ಸಂಪರ್ಕ ಒದಗಿದುದೂ ಆಕೆಯ ಸಂಸ್ಕಾರವನ್ನು ಪರಮಧಾರ್ಮಿಕವಾಗಿಸಿತು. 'ಕಲ್ಕಿ ಗಾರ್ಡನ್ಸ್' ಅರಮನೆಯಲ್ಲಿ ಕೇಂದ್ರ ವಸ್ತುವಾಗಿ ರಾರಾಜಿಸುತ್ತ ಇದ್ದುದು ಕಂಚಿ ಪರಮಾಚಾರ್ಯರ ದೊಡ್ಡದೊಂದು ಭಾವಚಿತ್ರವೇ. ದಿನವೂ ಅದರ ಮುಂದೆ ನಿಂತು ಎಂಎಸ್ ಕಣ್ಣುಮುಚ್ಚಿ ಧ್ಯಾನಮಾಡುತ್ತಿದ್ದರಂತೆ. ಸಂಗೀತದಲ್ಲಿ ತ್ಯಾಗರಾಜರ ಭಕ್ತಿಭಾವ ಇವರನ್ನು ಸಂಪೂರ್ಣವಾಗಿ ಆವರಿಸಿದ್ದಿತು. 'ಶಾಂತಮು ಲೇಕ ಸೌಖ್ಯಮು ಲೇದು' ('ನೆಮ್ಮದಿಯಿರದೆ ಸಂತೋಷವೆಲ್ಲಿ ಬಂತು?') ಎಂಬ ಸೊಲ್ಲು ಅವರ ಬಾಳನ್ನೇ ತಿದ್ದಿತು.

ಇಂಥ ಪಾರಮಾರ್ಥಿಕ ಅನುರಕ್ತಿ ಬದುಕಿನಲ್ಲಿ ಬೇರುಬಿಟ್ಟಿದ್ದಾಗ ಪ್ರಾಪಂಚಿಕ ಪ್ರಶಸ್ತಿಯಾಗಲಿ ಸಿರಿವಂತಿಗೆಯಾಗಲಿ ಜನಾನುರಾಗವಾಗಲಿ ಮುಖ್ಯವೆನಿಸೀತೆ? ತಾನಾಗಿ ಒದಗಿ ಬಂದ, ಎಂದರೆ ದೈವಾನುಗ್ರಹದಿಂದ ಬಂದ, ಸಿರಿಯನ್ನು ಸದ್ವಿನಿಯೋಗ ಮಾಡುವ ಬುದ್ಧಿ ಅವರಿಗೆ ಸಹಜವಾಗಿಯೇ ಇದ್ದಿತು. ರಾಜಾಜಿ 1944ರ ಮೊದಲಭಾಗದಲ್ಲಿ ಕಸ್ತೂರಿಬಾ ಸ್ಮಾರಕ ನಿಧಿಗೆ ಹಣ ಸಂಗ್ರಹಣ ಮಾಡುವ ಉದ್ದೇಶದಿಂದ ಎಂಎಸ್‌ಗೆ ಸಂಗೀತ ಸಭೆಗಳನ್ನು ನಡೆಸುವಂತೆ ಕೇಳಿಕೊಂಡರು; ಗಂಡ ಸದಾಶಿವಂ ಕೂಡ ಉತ್ಸಾಹದಿಂದಲೇ ಒಪ್ಪಿದರು. ರಾಜಾಜಿಯ ಪಟ್ಟಶಿಷ್ಯ ತಾನೆ? ಮತ್ತೆ ಮಹಾತ್ಮಾ

ಗಾಂಧೀಜಿಯವರ ಬಯಕೆಯೂ ಹಿನ್ನೆಲೆಯಲ್ಲಿದ್ದಿತು. ಹಾಗಾಗಿ ಚೆನ್ನೈನಲ್ಲಿ 1944ರ ಜುಲೈ ತಿಂಗಳಲ್ಲಿ ಒಂದು, ಆಗಸ್ಟ್ ತಿಂಗಳಲ್ಲಿ ತಿರುಚ್ಚಿಯಲ್ಲೊಂದು, ಮಧುರೆಯಲ್ಲಿನ್ನೊಂದು, ಸೆಪ್ಟೆಂಬರ್ ತಿಂಗಳಲ್ಲಿ ಕೊಯಂಬತ್ತೂರಿನಲ್ಲೊಂದು, ತಂಜಾವೂರಿನಲ್ಲಿನ್ನೊಂದು – ಹೀಗೆ ಐದು ಕಚೇರಿಗಳು ನಡೆದು ಸಂಗ್ರಹವಾದ ಹಣವನ್ನೆಲ್ಲ ಕಸ್ತೂರಿಬಾ ಸ್ಮಾರಕ ನಿಧಿಗೆ ಒಪ್ಪಿಸಿಬಿಟ್ಟರು. ಆಗ ಮಹಾತ್ಮರು ಎಂಎಸ್‌ಗೆ ಬರೆದ ಪತ್ರ (1944, ಸೆಪ್ಟೆಂಬರ್ 28 ರದ್ದು)–

Dear Subbulakshmi,

Rajaji has told me everything about your good work in connection with the Kasturba Memorial Fund by using your musical gifts.

May God bless you.

Mo. Ka. Gandhi

ಈ ಪತ್ರದ ಸ್ವಾರಸ್ಯವಾದ ಅಂಶವೆಂದರೆ ಅವರ ಸಹಿ ತಮಿಳು ಲಿಪಿಯಲ್ಲಿರುವುದು. ರಾಜಾಜಿಯ ಸಲಹೆಯನ್ನು ಆದರದಿಂದ ಸ್ವೀಕರಿಸಿದರಾಗಿ, ಮುಂದೆ ಎಂಎಸ್ ಅವರ ಕಚೇರಿಗಳೂ ಧ್ವನಿಮುದ್ರಿಕೆಗಳೂ ಹಲವು ಸಾರ್ವಜನಿಕ ಸಂಸ್ಥೆಗಳಿಗೆ ಆರ್ಥಿಕ ನೆರವನ್ನೊದಗಿಸಿದವು. ಇವುಗಳಲ್ಲಿ ಮುಖ್ಯವಾದುವು ತಿರುಮಲ ತಿರುಪತಿ ದೇವಸ್ಥಾನದವರಿಗೆ ತಮ್ಮ ಅತ್ಯಂತ ಜನಪ್ರಿಯ ವೆಂಕಟೇಶ ಸುಪ್ರಭಾತದ ಧ್ವನಿಮುದ್ರಿಕೆಯಿಂದ ಸಂದ ಐದು ಲಕ್ಷ ರೂಪಾಯಿಗಳು, ರಾಮಕೃಷ್ಣಮಠಕ್ಕೆ ವಿಷ್ಣುಸಹಸ್ರನಾಮದ ಧ್ವನಿಮುದ್ರಿಕೆಯಿಂದ ಸಂದ ಹಣ, ಉಳಿದಂತೆ ಭಾರತೀ ಸ್ಮಾರಕ ಮಂಟಪ, ಮಹಾತ್ಮಾ ಗಾಂಧೀ ಸ್ಮಾರಕ ಮಂಟಪ, ಹಿಂದೀ ಪ್ರಚಾರ ಸಭೆ, ಕಾಂಚೀಪುರದ ಕಾಮಾಕ್ಷೀ ದೇವಾಲಯ, ಶಂಕರ ನೇತ್ರಾಲಯ ವೈದ್ಯಕೀಯ ಸಂಶೋಧನ ಪ್ರತಿಷ್ಠಾನ (ಚೆನ್ನೈ), ಎಟ್ಟಿಯಾಪುರದಲ್ಲಿ ಸುಬ್ರಹ್ಮಣ್ಯಭಾರತಿ ಸ್ಮಾರಕ, ನಾನಕ್ ಪ್ರತಿಷ್ಠಾನ,

ಭಾರತೀಯ ವಿದ್ಯಾಭವನ, ಚೆನ್ನೈನ ಕ್ಯಾನ್ಸರ್ ಸಂಸ್ಥೆ, ಚೆನ್ನೈನ ಮ್ಯೂಸಿಕ್ ಅಕ್ಯಾದಮಿ ಇವುಗಳಿಗೂ ಎಂಎಸ್ ಕೊಡುಗೈ ಕೊಡುಗೆ ಸಂದಿವೆ. ಮ್ಯಾಗ್ಸೆಸೇ ಪ್ರಶಸ್ತಿಯಾದ ಹತ್ತು ಸಾವಿರ ಡಾಲರ್‌ಗಳಷ್ಟು ಹಣವನ್ನು ಮೂರು ಸಂಸ್ಥೆಗಳಿಗೆ (ಭಾರತೀಯ ವಿದ್ಯಾಭವನ, ಕುಂಭಕೋಣದ ರಾಜಾ ಸಂಸ್ಕೃತ ಪಾಠಶಾಲೆ, ಚೆನ್ನೈನ ಆಸ್ಪತ್ರೆಯೊಂದು) ಹಂಚಿಬಿಟ್ಟರು. ಮುಂಬಯಿಯಲ್ಲಿ ದಕ್ಷಿಣ ಭಾರತದ ಶಿಕ್ಷಣ ಸಂಸ್ಥೆಗೆಂದು ತಮ್ಮ ಗಳಿಕೆಯಿಂದ ಬಂದ ತೊಂಬತ್ತೆಂಟು ಸಾವಿರ ರೂಪಾಯಿಗಳನ್ನು ಕೊಟ್ಟರು. ಚೆನ್ನೈ ಮತ್ತು ದಿಲ್ಲಿಗಳಲ್ಲಿ ರಾಜಾಜಿ ಸ್ಮಾರಕ ಪುತ್ಥಳಿಗೆ, ತಿರುವಾರೂರಿನಲ್ಲಿ ಸಂಗೀತ ತ್ರಿಮೂರ್ತಿಗಳ ಮನೆಗಳ ಜೀರ್ಣೋದ್ಧಾರಕ್ಕೆ ಉದಾರವಾಗಿ ನೆರವಾದರು.

ಹೀಗೆ ಹೃದಯತುಂಬಿ ಹಾಡುವುದು, ಕೈತುಂಬಿ ಕೊಡುವುದು; ಮೊದಲನೆಯದರಿಂದ ರಸಿಕರಂಜನೆ, ಎರಡನೆಯದರಿಂದ ಆರ್ತರಕ್ಷಣೆ. ಭಗವದ್ಗೀತೆ ಹೇಳುವಂತೆ ಮೊದಲು ಯಜ್ಞ(ಸಂಗೀತ ಸಮಾರಾಧನೆಯಿಂದ ಭಗವತ್ಪೂಜೆ), ಅನಂತರ ದಾನ. ಎರಡಕ್ಕೂ ಆಕರವಾಗಿ ತಪಸ್ಸು (ಅವರ ಬದುಕೇ). 'ಕಲ್ಕಿ ಗಾರ್ಡನ್ಸ್'ನಲ್ಲಿ ಎಂಎಸ್ ವೈಭವದಿಂದ ಮೆರೆದುದರ ತಾತ್ಪರ್ಯ ಇಷ್ಟೇ.

ಪರಿಚ್ಛೇದ ಎರಡು

ಮಧುರೆ ಷಣ್ಮುಖವಡಿವು ಸುಬ್ಬುಲಕ್ಷ್ಮಿ

೧

ಮಧುರೆ ತೌರೂರು, ಹುಟ್ಟಿದೂರು. ಷಣ್ಮುಖವಡಿವು ತಾಯಿ, ಮೊದಲ ಗುರು; ಸುಬ್ಬುಲಕ್ಷ್ಮಿ ಹಿರಿಯರು ಇಟ್ಟ ಹೆಸರು. ತಮಿಳುನಾಡಿನ ವಾಡಿಕೆಯಂತೆ ಹೆಸರು ಇಂಗ್ಲಿಷ್ ಮೊದಲ ಅಕ್ಷರ ಸಂಜ್ಞೆಯಿಂದ ಎಂಎಸ್‌ಎಸ್. ಆಕೆ ಎಚ್.ಎಂ.ವಿ. ಗ್ರಾಮಫೋನ್‌ಗೆ ತನ್ನ ಹತ್ತು ವರ್ಷ ವಯಸ್ಸಿನಲ್ಲೇ ಕೊಟ್ಟ ಮೊಟ್ಟಮೊದಲ ಧ್ವನಿಮುದ್ರಿಕೆಯೊಂದರಲ್ಲಿ ('ಮರಕತವಡಿವುಂ' ಎಂಬ ಚೆಂಚುರುಟಿ ರಾಗದ ಹಾಡು), ಹಾಡಿನ ಕೊನೆಗೆ "ನಾನು, ಮಧುರೆ ಸುಬ್ಬುಲಕ್ಷ್ಮಿ" ಎಂದು ಆ ಕಾಲದ ಪದ್ಧತಿಯಂತೆ ಹೇಳಿಕೊಂಡಿದ್ದಾರೆ. ಆದರೆ ಆಗ ಮಧುರೆಯವರೇ ಆದ ಎಸ್. ಡಿ. ಸುಬ್ಬುಲಕ್ಷ್ಮಿಯೆಂಬ ಗಾಯಕಿ, ನಟಿಯೊಬ್ಬರಿದ್ದರು; ಹೆಸರಾಗಿಯೂ ಇದ್ದರು. ಆದ್ದರಿಂದ ಇವರು ಮಧುರೆ ಷಣ್ಮುಖವಡಿವು ಸುಬ್ಬುಲಕ್ಷ್ಮಿ ಎಂದು ನಿರ್ದೇಶಿಸಿಕೊಳ್ಳಬೇಕಾಯಿತು. ಹೀಗೆ ಚಲಾವಣೆಗೆ ಬಂದ ಎಂಎಸ್‌ಎಸ್ ಬರುಬರುತ್ತ ಜನರ ಬಾಯಲ್ಲಿ ಎಂಎಸ್ ಎಂದಷ್ಟೇ ಉಳಿಯಿತು. ಮನೆಯಲ್ಲಿ ಮುದ್ದಿನ ಹೆಸರೇನೋ ಕುಂಜಮ್ಮನೆಂದು.

ಮಧುರೆಯ ಮೀನಾಕ್ಷಿ ದೇವಾಲಯದ ಪಶ್ಚಿಮದ್ವಾರಗೋಪುರದ ನೆಲೆಯಲ್ಲಿ ಹನುಮಂತರಾಯನ ಕೋಇಲ್ ರಸ್ತೆಯಲ್ಲಿ ಇವರ ಮನೆ. ಅದು

ರಸ್ತೆಯೆನ್ನುವುದಕ್ಕಿಂತ ಗಲ್ಲಿಯೆಂದರೆ ಹೆಚ್ಚಾಗಿ ಒಪ್ಪುತ್ತದೆ. ದೇವಸ್ಥಾನದ ಊಳಿಗದಲ್ಲಿದ್ದವರ ಮನೆಗಳು ಅವು. ಅವರು ದೇವದಾಸಿ ಪಂಗಡದವರು; ಇದ್ದದ್ದು ಸಣ್ಣಮನೆ. ಅಷ್ಟೇನು ಅನುಕೂಲವಲ್ಲದ ಮನೆತನ. ಆದರೆ ತಾಯಿ ಷಣ್ಮುಖವಡಿವು ಪ್ರೌಢ ವೀಣಾವಾದಕಿಯೆಂದು ಸುತ್ತಮುತ್ತ ಪ್ರಸಿದ್ಧರಾಗಿದ್ದರು. ಅವರ ತಾಯಿ ಅಕ್ಕಮ್ಮ ವಯಲಿನ್‌ವಾದಕಿ. ಅವರ ತಾಯಿ (ಹೆಸರು ತಿಳಿಯದು) ನರ್ತಕಿ; 1886ರಲ್ಲಿ ವೈಸ್‌ರಾಯ್ ಡಫರಿನ್ ಬಂದಿದ್ದಾಗ ಅವನೆದುರು ಈಕೆಯ ನರ್ತನವನ್ನೇರ್ಪಡಿಸಿದ್ದರಂತೆ. ಹೀಗೆ ನಾಲ್ಕೈದು ತಲೆಮಾರುಗಳಿಂದ ಈ 'ದೇವರ್ ಅಡಿಯಾಳ್'ಗಳು ಕಲಾಪೋಷಣೆಯನ್ನು ಕೈಗೊಂಡವರು. ಸಣ್ಣ ಮನೆ, ಸಣ್ಣ ವರಮಾನ, ಆದರೂ ದೊಡ್ಡ ಕುಟುಂಬ. ಸೋದರರು, ಅವರ ಹೆಂಡತಿಯರು, ತನ್ನ ಸೋದರಮಾವಂದಿರು, ಮತ್ತೆ ತನ್ನ ಮೂರು ಮಕ್ಕಳು. ಇವರೆಲ್ಲರನ್ನೂ ಈಕೆಯೇ ಸಾಕಬೇಕು.

ಆ ಕಾಲದಲ್ಲಿ ಹೀಗೆ ದೇವದಾಸಿಯರಾಗಿದ್ದು ತಮ್ಮ ಪ್ರತಿಭೆಯಿಂದ, ಕಲಾಪ್ರೌಢಿಮೆಯಿಂದ ಪ್ರಸಿದ್ಧರಾದವರು ಹಲವರಿದ್ದರು. ಕೊಯಂಬತ್ತೂರು ತಾಯಿ, ಸೇಲಂ ಗೋದಾವರಿ, ಮದ್ರಾಸ್ ಲಲಿತಾಂಗಿ (ಎಂ. ಎಲ್. ವಸಂತಕುಮಾರಿಯವರ ತಾಯಿ), ಬೆಂಗಳೂರು ನಾಗರತ್ನಮ್ಮ, ವೀಣಾ ಧನಂ, ಬಾಲಸರಸ್ವತಿ, ಹೀರಾಬಾಯಿ ಬರೋಡೆಕರ್, ಕೇಸರಿಬಾಯಿ ಕೇಳ್ಕರ್ ಮುಂತಾದವರು. ದೇವಸ್ಥಾನದಲ್ಲಿ ಅವರ ಕೈಂಕರ್ಯವೆಂದರೆ ಪೂಜೆಯ ಪ್ರಸಂಗದಲ್ಲಿ ಉತ್ಸವಗಳಲ್ಲಿ ದೇವರೆದುರು ಗಾಯನ-ನರ್ತನಗಳನ್ನು ಒಪ್ಪಿಸುವುದು. ವ್ಯವಹಾರದಲ್ಲಿ ಇಷ್ಟು ಕೈಂಕರ್ಯಕ್ಕೇ ಅವರು ಮೀಸಲಾಗಿರುವುದು ಸಾಧ್ಯವಾಗದೆ, ಪಂಗಡಕ್ಕೇ ಕಳಂಕವೊಂದು ಕಾಣಿಸಿಕೊಂಡಿತು. ಇಂಥ ಸಂದರ್ಭದಲ್ಲೂ ತಮ್ಮ ಕುಲವೃತ್ತಿಯಾದ ಗಾಯನ-ನರ್ತನ ಕಲಾಪ್ರಕಾರಗಳಲ್ಲೇ ತಮ್ಮನ್ನು ತೊಡಗಿಸಿಕೊಂಡು ಜನಪ್ರಿಯರಾದವರು ಕೆಲವರು.

ಅವರಲ್ಲಿ ಮಧುರೆ ಷಣ್ಮುಖವಡಿವು ಒಬ್ಬರು (1889-1962). ಅವರ ವೀಣಾವಾದನದ ವೈಖರಿ ಅನ್ಯಾದೃಶವಾಗಿದ್ದಿತು. ಹಿರಿಯ ಸಂಗೀತ ವಿದ್ವಾಂಸರೇ ಅದನ್ನು ಮೆಚ್ಚಿಕೊಂಡಿದ್ದರು. ತೆಳ್ಳಗಿನ ಮೈಕಟ್ಟು, ಆಕೆ ತೀರ

ದುರ್ಬಲರಾಗಿ ಕಾಣುತ್ತಿದ್ದರು; ಎರಡು ಗಂಟೆಗಳಿಗಿಂತ ಹೆಚ್ಚಾಗಿ ವೀಣೆಯನ್ನು ನುಡಿಸುತ್ತಿರಲಿಲ್ಲ. ಶಾರೀರದಲ್ಲಿ ಒಂದು ಬಗೆಯ ಸೊಗಸಿದ್ದಿತು; ಆದರೆ ಸ್ವರಸ್ಥಾನಗಳು ನಿಲ್ಲುತ್ತಿರಲಿಲ್ಲ. ಹಾಗೆಂದೇ ಅವರು ವೀಣೆಯನ್ನು ಹಿಡಿದದ್ದು. ಕರೂರು ವೆಂಕಟರಮಣ ಭಾಗವತರಲ್ಲಿ ಶಿಷ್ಯವೃತ್ತಿ ಮಾಡಿದರು. ಕಾರೈಕ್ಕುಡಿ ಸಾಂಬಶಿವಯ್ಯರು, ಪೊನ್ನುಸ್ವಾಮಿಪಿಳ್ಳೆ, ಸುಬ್ಬರಾಮ ಭಾಗವತರು, ಮೊದಲಾದ ಹಿರಿಯ ವಿದ್ವಾಂಸರು ಮಧುರೆಗೆ ಬಂದಾಗಲೆಲ್ಲ ಆಕೆಯ ಮನೆಗೆ ಬಂದು ಆಕೆಯ ವೀಣಾವಾದನವನ್ನಾಲಿಸಿ ಹೋಗುತ್ತಿದ್ದರು. ಮೃದಂಗವಾದನದಲ್ಲಿ ಅಭಿನವನಂದಿಯೆಂದು ಹೆಸರಾಗಿದ್ದ ಪುದುಕ್ಕೋಟೆ ದಕ್ಷಿಣಾಮೂರ್ತಿಪಿಳ್ಳೆಯಂತೂ ಮತ್ತೆ ಮತ್ತೆ ಬರುತ್ತಿದ್ದರು. ಆಕೆಯ ವೀಣಾವಿನಿಕೆಯ ಧ್ವನಿಮುದ್ರಿಕೆಗಳನ್ನು ಗ್ರಾಮೋಫೋನ್ ಕಂಪನಿಯವರು ಮಾಡಿಸಿಕೊಂಡು ಪ್ರಚಾರಕ್ಕೆ ತಂದಿದ್ದರು. ಅವುಗಳಲ್ಲಿ ಕುರಂಜಿರಾಗದ ಘನಂ ಸೀನಯ್ಯನ ಪದ 'ಶಿವದೀಕ್ಷಾಪರುಲು' ಮತ್ತು ರಾಗಮಾಲಿಕೆ, ತಾನಗಳ ವಿನಿಕೆ ತುಂಬ ಜನಪ್ರಿಯವಾಯಿತು. ಅದರಲ್ಲಿ ಆಕೆಯ ಹಾಡಿಕೆಯೂ ಸೇರಿದೆ. ಅವರ ಪ್ರಖ್ಯಾತಿಗೆ ಈ ಧ್ವನಿಮುದ್ರಿಕೆಗಳು ನೆರವಾದುವು.



ತಾಯಿ ವೀಣಾ ಷಣ್ಮುಖವಡಿವು

೨

ಷಣ್ಮುಖಮ್ಮಾಳಿಗೆ ಮೂವರು ಮಕ್ಕಳು. ಹಿರಿಯವನು ಶಕ್ತಿವೇಲ್, ಮೃದಂಗವಾದಕನಾದವನು, ಕಾಲೇಜು ಮೆಟ್ಟಿಲು ಹತ್ತಿ ಬಿಎ ಪದವಿಯನ್ನು ಪಡೆದುಕೊಂಡವನು. ಎರಡನೆಯವಳೇ ಎಂಎಸ್. ಕಡೆಯವಳು ವಡಿವಾಂಬಾಳ್ (ವಡಿವು ಎಂದರೆ ಚೆಲುವೆ), ವಯಲಿನ್ ಮತ್ತು ವೀಣಾವಾದಕಿ. ಮೂವರೂ ಸ್ಫುರದ್ರೂಪಿಗಳು, ಸಂಗೀತಪ್ರಿಯರು. ಆದರೂ ತಾಯಿಯ ಎಣಿಕೆಯಲ್ಲಿ ಮಧ್ಯದ ಮಗಳು ತುಂಬ ಪ್ರತಿಭಾಶಾಲಿನಿ, ಹುಟ್ಟಿನಿಂದಲೇ ಸಂಗೀತದಲ್ಲಿ ಸಿದ್ಧಿಯನ್ನು ಪಡೆದವಳು. ಆಕೆ ಮುಂದು ಬರಬೇಕೆಂದೇ ಹಾತೊರೆಯುತ್ತಿದ್ದವಳು ತಾಯಿ. ಕ್ರಮವರಿತು ಅವಳಿಗಾಗಲಿ ಇತರ ಮಕ್ಕಳಿಗಾಗಲಿ ತಾಯಿ ಪಾಠವನ್ನೇನು ಹೇಳಲಿಲ್ಲ; ಆದರೆ ಕೇಳ್ಮೆಯಿಂದಲೇ ಮೂವರೂ ಮಕ್ಕಳು ಸಂಗೀತವನ್ನು ಎಳೆತನದಲ್ಲೇ ಕಲಿತರು. ಹೀಗಾಗಿ ತಾಯಿಯೇ ಮೊದಲ ಗುರು.

ಕುಂಜಮ್ಮ (ಎಂಎಸ್) ಹುಟ್ಟಿದ ವರ್ಷ 1916, ಸೆಪ್ಟೆಂಬರ್ ಹದಿನಾರನೆಯ ದಿನದಂದು. ಪುರಟ್ಟಾಶಿ ಮಾಸ. ಭರಣೀ ನಕ್ಷತ್ರ. ಭರಣಿಯಲ್ಲಿ ಹುಟ್ಟಿದವರು ಧರಣಿಯನ್ನಾಳುವರೆಂಬ ಗಾದೆ ತಮಿಳಿನಲ್ಲಿದೆ. ಇವರೂ ಸಂಗೀತವೆಂಬ ಧರಣಿಯನ್ನಾಳಿದರು.

ಕುಂಜಮ್ಮನಿಗೆ ಮಗುವಾಗಿದ್ದಾಗಿನಿಂದ ಸಂಗೀತದ ಗೀಳು. ಮನೆಯಲ್ಲಿ ಮೂಲೆಗೆ ಒರಗಿಸಿಟ್ಟಿದ್ದ ಎರಡು ತಂಬೂರಿಗಳ ಜೊತೆಗೆ ಆಟ. ತಾಯಿ ಹೇಳಿಕೊಟ್ಟಿದ್ದ ಸ್ವರಗಳನ್ನು ಹಾಡುವಾಗ ತಂಬೂರಿಯ ಶ್ರುತಿಯನ್ನು ಗಮನಿಸುವುದು, ತಂಬೂರಿಯ ಜೊತೆಗೆ ಹಾಡುವುದು, ತಟ್ಟನೆ ತಂಬೂರಿ ಮೀಟುವುದನ್ನು ನಿಲ್ಲಿಸಿ ಹಾಡನ್ನು ಮುಂದುವರೆಸುವುದು, ಸ್ವರಸ್ಥಾನಗಳು ಸರಿಯಾಗಿದೆಯೇ ಎಂದು ಕಂಡುಕೊಳ್ಳಲು ಮತ್ತೆ ತಂಬೂರಿ ಮೀಟುವುದು, ಬೇರೆ ಬೇರೆ ಸ್ವರಗಳನ್ನು ಗಮಕವಿಲ್ಲದೆ ತಂಬೂರಿಯೊಂದಿಗೆ ಹಿಡಿಯುವುದು, ಮತ್ತೆ ಗಮಕಸಮೇತ ಸ್ವರಸ್ಥಾನಗಳನ್ನು ಹಿಡಿಯುವುದು ಇಂಥದೇ ಆಟ ಮಗುವಿಗೆ. ಇದರಿಂದಾಗಿ ತೀರ ಸಣ್ಣವಯಸ್ಸಿನಲ್ಲೇ ಶ್ರುತಿಶುದ್ಧಿ, ಸ್ವರಶುದ್ಧಿ ಎರಡೂ ಆಕೆಗೆ ಸಿದ್ಧಿಸಿದುವು. ತಾಯಿ ವೀಣೆ ನುಡಿಸುತ್ತಲೇ ಇರುವರು;

ಬಂದ ರಸಿಕರ ಎದುರಿಗೆ, ಅಥವಾ ತಮ್ಮಷ್ಟಕ್ಕೆ ತಾವೇ. ಆ ಸಮಯದಲ್ಲೆಲ್ಲ ಮಗು ಪಕ್ಕದಲ್ಲೇ ಕುಳಿತು ವೀಣೆಯ ಜೊತೆಗೆ ಹಾಡುವುದು; ತಾಯಿ ಎದ್ದು ಒಳಗೆ ಹೋದಾಗ ತಾನೇ ವೀಣೆಯ ಮೇಲೆ ಕೈಯಾಡಿಸಿ ತಾಯಿಯ ನುಡಿಸಾಣಿಕೆಯನ್ನು ಅನುಕರಿಸುವುದು.

ಮಗುವಿನಲ್ಲಿ ಸಹಜವಾಗಿದ್ದ ಸಂಗೀತ ಪ್ರತಿಭೆಯನ್ನು ತಾಯಿ ಗಮನಿಸಿ ಮಗುವಿನ ಸಂಗೀತ ಶಿಕ್ಷಣದತ್ತ ವಿಶೇಷ ಗಮನವನ್ನು ಹರಿಸಿದರು. ಮನೆಯಲ್ಲೂ ಹೊರಗೂ ತಮ್ಮ ಸಂಗೀತವಿನಿಕೆಗಳಿದ್ದಾಗ ಕುಂಜುವನ್ನು ಪಕ್ಕದಲ್ಲೇ ಕೂರಿಸಿಕೊಳ್ಳಲಾರಂಭಿಸಿದರು; ನಡುನಡುವೆ ಹಾಡುವಂತೆಯೂ ಹೇಳುತ್ತಿದ್ದರು. ಮನೆಗೆ ಬರುತ್ತಿದ್ದ ಸಂಗೀತ ವಿದ್ವಾಂಸರು ಮಗುವಿನ ಅಸಾಧಾರಣ ಪ್ರತಿಭೆಯನ್ನು ಕೊಂಡಾಡುತ್ತಿದ್ದರು. ಹೀಗಾಗಿ ಉಳಿದ ಇಬ್ಬರು ಮಕ್ಕಳಿಗಿಂತ ಕುಂಜಮ್ಮನ ಮೇಲೆ ತಾಯಿಯ ಒಲವು ಹೆಚ್ಚು ಮೂಡಿತು. ಕಡೆಯ ಮಗುವಾದ ವಡಿವುವಿಗೆ ತಾವೇ ವೀಣೆ ಕಲಿಸಿದರು. ತನ್ನ ತಾಯಿಯಿಂದ ವಯಲಿನ್ ಪಾಠವನ್ನೂ ಮಾಡಿಸಿದರು. ಕುಂಜು ಪ್ರಸಿದ್ಧಳಾದ ಗಾಯಕಿಯಾಗುವ ನಿರೀಕ್ಷೆ ಇದ್ದುದರಿಂದ ಹಾಡಿಕೆಯಲ್ಲೇ ಆಕೆಯನ್ನು ತೊಡಗಿಸಿದರು. ತಮಗೆ ಪರಿಚಿತರಾಗಿದ್ದ ವೀಣಾ ಧನಂ ಕೂಡ ಮಗುವಿನ ಹಾಡನ್ನು ಕೇಳಿ ಅದನ್ನೇ ಸೂಚಿಸಿದರು. ತಮ್ಮ ಶಾರೀರ ಅಷ್ಟು ಅನುಕೂಲವಲ್ಲವೆಂಬ ಅರಿವಿನ ಜೊತೆಗೆ ಸಮರ್ಥರಾದ ಗುರುಗಳಿಂದ ಶಿಕ್ಷಣ ಅಗತ್ಯವೆಂಬುದನ್ನೂ ಕಂಡುಕೊಂಡರು.

ಕುಂಜಮ್ಮ ಪದ್ಧತಿಯಂತೆ ಸಂಗೀತ ಕಲಿಯಲೆಂದು ತಾಯಿ ತಮಗೆ ಪರಿಚಿತರಾಗಿದ್ದ ಮಧುರೆ ಶ್ರೀನಿವಾಸಯ್ಯಂಗಾರರನ್ನು ಗೊತ್ತುಮಾಡಿದರು. ಇವರು 'ಸಂಗೀತಕಲಾನಿಧಿ' ಮಧುರೆ ಶೇಷಯ್ಯಂಗಾರರ ಸೋದರ. ಸೋದರರಿಬ್ಬರೂ ಪ್ರಸಿದ್ಧರಾಗಿದ್ದ ನಾಮಕ್ಕಲ್ ನರಸಿಂಹಯ್ಯಂಗಾರ್ಯರ ಶಿಷ್ಯರು. ಅರಿಯಕ್ಕುಡಿ ರಾಮಾನುಜಯ್ಯಂಗಾರರೂ ನಾಮಕ್ಕಲ್ ಅವರ ಬಳಿ ಶಿಷ್ಯವೃತ್ತಿ ಮಾಡಿದವರೇ. ಪಾಠ ಆರಂಭಮಾಡಿದ ಒಂದೆರಡು ತಿಂಗಳುಗಳಲ್ಲೇ ಮಧುರೆ ಶ್ರೀನಿವಾಸಯ್ಯಂಗಾರರು ತೀರಿಕೊಂಡುಬಿಟ್ಟರು. ಅನಂತರ ಸೈತ್ತೂರು ಸುಂದರೇಶ ಭಟ್ಟರ್ ಎಂಬ ವಯಲಿನ್ ವಾದಕರು ಗುರುವಾಗಿ ಆರಿಸಲ್ಪಟ್ಟರು. ಇವರು ಕಾಂಚೀಪುರಂ ನಾಯನಾಪಿಳ್ಳೆಯ ಶಿಷ್ಯರು; ಅವರ ಕಚೇರಿಗಳಲ್ಲಿ



ಗುರು ಸೈತ್ತೂರು ಸುಂದರೇಶ ಭಟ್ಟರ್

ಪಕ್ಕವಾದ್ಯ ನುಡಿಸುತ್ತಿದ್ದವರು; ಸೈತ್ತೂರು ಸಂಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದವರು. ಮತ್ತೆ ಜನಪ್ರಿಯ ಗಾಯಕರಾಗಿದ್ದ ಮಾಯಾವರಂ ವಿ. ವಿ. ಕೃಷ್ಣಯ್ಯರೂ ಮಗುವಿಗೆ ಹಾಡುಗಳನ್ನು ಕಲಿಸಿದರು.

ತಾಯಿ ಎಚ್‌ಎಂವಿ ಗ್ರಾಮೋಫೋನ್ ಸಂಸ್ಥೆಯಲ್ಲಿ ತನ್ನ ಸಂಗೀತ ಧ್ವನಿಮುದ್ರಣ ಮಾಡಿಸಲು ಚೆನ್ನೈಗೆ ಆಗಾಗ ಬರುತ್ತಿದ್ದರು. ಒಮ್ಮೆ ಬಂದಾಗ ಮಗಳ ಹಾಡಿಕೆಯನ್ನೂ ಧ್ವನಿಮುದ್ರಣ ಮಾಡಿಸಲು ಸೂಚಿಸಿದರು. ದಾಕ್ಷಿಣ್ಯಕ್ಕೆ ಮಣಿದು ಸಂಸ್ಥೆಯವರು ಒಪ್ಪಿದರು. ಒಮ್ಮೆ ಮಾಡಿಸಿದನಂತರ ಮತ್ತೆ ಮತ್ತೆ ಮಾಡಿಸಿದರು. ಹುಡುಗಿಯ ಧ್ವನಿಮುದ್ರಣ ತುಂಬ ಮಾರಾಟವೂ ಆಯಿತು. ತಟ್ಟೆಗಳ ಮೇಲೆ 'ಕೋಕಿಲಗಾನ ಎಂಎಸ್ ಸುಬ್ಬುಲಕ್ಷ್ಮಿ' ಎಂದಿದ್ದಿತು. ಆಗ ಹುಡುಗಿಗೆ ಹತ್ತೇ ವರ್ಷಗಳು. ಅಠಾಣಾರಾಗ, ತುರುಪ್ಪುಗಳು, ತ್ಯಾಗರಾಜರ 'ಎವರಿಮಾಟ' (ಕಾಂಬೋದಿ) ಮೊದಲಾದವು ಜನಪ್ರಿಯವಾದುವು. 'ಎವರಿಮಾಟ ಎಂಎಸ್' ಎಂಬ ಅಡ್ಡ ಹೆಸರೇ ಬಳಕೆಗೆ ಬಂದಿತಂತೆ. ತಾಯಿ ಇದರಿಂದ ಉತ್ತೇಜಿತರಾಗಿ ಅಕ್ಕಪಕ್ಕದ ಊರುಗಳಲ್ಲೆಲ್ಲ, ತಿರುಚ್ಚಿ,

ರಾಮನಾಥಪುರಂ, ಚೆಟ್ಟಿನಾಡು, ತಂಜಾವೂರು, ತಿರುನೆಲ್ವೇಲಿ ಮೊದಲಾದ ಕಡೆಗಳಲ್ಲಿ ಮಗಳ ಹಾಡಿಕೆಗಳನ್ನು ಏರ್ಪಡಿಸಿದರು. ಮದುವೆ ಸಮಾರಂಭಗಳಲ್ಲಿ, ಗುಡಿಗಳಲ್ಲಿ, ಜಮೀನುದಾರರ ಬಂಗಲೆಗಳಲ್ಲಿ ಎಂಎಸ್ ಗಾಯನ ನಡೆಯುವಾಗ ಜನ ಕಿಕ್ಕಿರಿದು ನೆರೆಯುತ್ತಿದ್ದರು. ರೈಲಿನಲ್ಲಿ, ಎತ್ತಿನ ಬಂಡಿಗಳ ಮೇಲೆ ಊರಿಂದೂರಿಗೆ ಮಗಳನ್ನು ತಾಯಿ ಕೊಂಡೊಯ್ಯುತ್ತಿದ್ದರು. ಹೋದೆಡೆಯಲ್ಲೆಲ್ಲ ಮಗಳಿಂದಾಗಿ ತಾಯಿಗೆ ವಿಶೇಷ ಸತ್ಕಾರ. ತಾನು ಹೆಸರಾಂತ ವೀಣಾ ವಿದುಷಿಯಾಗಿದ್ದರೂ ಈ ಬಗೆಯ ಜನಪ್ರೀತಿಯನ್ನು ಗಳಿಸಿರಲಿಲ್ಲ.



ಗುರು ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್

ಮಗುವಿನ ಕಂಠಸಿರಿಗೆ, ನಿಸರ್ಗಸಿದ್ಧವಾದ ಪ್ರತಿಭೆಗೆ ಮಾರು ಹೋದವರಲ್ಲಿ ಪುದುಕ್ಕೋಟೆ ದಕ್ಷಿಣಾಮೂರ್ತಿಪಿಳ್ಳೈ (1875-1937) ಪ್ರಮುಖರು. ಮಗು ಹಾಡಿದುದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ಮತ್ತೆ ಷಣ್ಮುಖವಡಿವು ಮನೆಗೆ ಬರುವಾಗ ತಮ್ಮ ಸ್ನೇಹಿತರಾಗಿದ್ದ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರನ್ನು (1890-1967) ಕರೆತಂದರು. ಇಬ್ಬರೂ ಆ ಕಾಲದ ಸಂಗೀತಪ್ರಪಂಚದಲ್ಲಿ ಅನಭಿಷಿಕ್ತ ಚಕ್ರವರ್ತಿಗಳು, ಒಬ್ಬರು

ಲಯವಾದ್ಯದಲ್ಲಿ, ಇನ್ನೊಬ್ಬರು ಹಾಡಿಕೆಯಲ್ಲಿ. ಅರಿಯಕ್ಕುಡಿಯವರೂ ಮಗುವಿನ ಹಾಡಿಕೆಯನ್ನು ಕೇಳಿ ಬೆರಗಾದರು. ದಕ್ಷಿಣಾಮೂರ್ತಿಪಿಳ್ಳೆಯವರು ಅರಿಯಕ್ಕುಡಿಯವರನ್ನು ಮಗುವಿಗೆ ಒಂದೆರಡು ಹಾಡುಗಳನ್ನು ಹೇಳಿಕೊಡುವಂತೆ ಕೋರಿದಾಗ ಅರಿಯಕ್ಕುಡಿ ಮಗುವಿಗೆ ಪಟ್ನಂ ಸುಬ್ರಹ್ಮಣ್ಯಅಯ್ಯರ ಗುರು ಕೊತ್ತವಾಸಲ್ ವೆಂಕಟರಾಮ ಅಯ್ಯರ ತೋಡಿವರ್ಣವೊಂದನ್ನೂ, ಪಟ್ನಂ ಅವರ ಶಿಷ್ಯರೂ ತಮ್ಮ ಗುರುವೂ ಆಗಿದ್ದ ರಾಮನಾಥಪುರಂ 'ಪೂಚಿ' ಶ್ರೀನಿವಾಸಯ್ಯಂಗಾರ್ಯರ 'ಸರಗುಣ ಪಾಲಿಂಪ' ಎಂಬ ಕೇದಾರಗೌಳದ ಕೃತಿಯನ್ನೂ ಕಲಿಸಿದರು.

೩

ಮನೆಗೆ ಬಂದು ಮಗುವನ್ನು ಹರಸಿದ ಹಿರಿಯರಲ್ಲಿ ಮಳವರಾಯನೆಂಡಾಲ್ ಸುಬ್ಬರಾಮ ಭಾಗವತರು, ವೈಣಿಕಶಿಖಾಮಣಿ ಶೇಷಣ್ಣನವರು (1852-1926), ಅಸಾಧಾರಣ ಗಾಯಕರಾಗಿದ್ದ ಕಾಂಚೀಪುರಂ ನಾಯನಾಪಿಳ್ಳೆ, ವಿಜಯನಗರದ ಪ್ರಸಿದ್ಧ ವೈಣಿಕರಾಗಿದ್ದ ವೆಂಕಟರಮಣದಾಸರು, ಚೆಂಬೈ ವೈದ್ಯನಾಥ ಭಾಗವತರು, ಕಾರೈಕುಡಿ ಸಾಂಬಶಿವಯ್ಯರು (1888-1957), ಚಿತ್ತೂರು ಸುಬ್ರಹ್ಮಣ್ಯಪಿಳ್ಳೆ ಮೊದಲಾದವರು ಇದ್ದರು. ಇವರೆಲ್ಲ ಶುದ್ಧಚಾರಿತ್ರ್ಯದವರು; ಸದಾಚಾರ ಸಂಪನ್ನರು. ವಾರಾಂಗನೆಯ ಸಹವಾಸಕ್ಕೆಂದು ಬಂದವರಲ್ಲ; ಸಂಗೀತದ ಒಲುಮೆಯೇ ಕಾರಣವಾಗಿ ಬಂದವರು. ಮಗುವಿಗೆ ಅದೂ ಇದೂ ಸಂಗೀತ ತುಣುಕುಗಳನ್ನು ಕಲಿಸಿ ಹೋಗುವರು; ತಿದ್ದುವರು; ಮೆಚ್ಚಿಕೊಳ್ಳುವರು. ಇವರ ಆಶೀರ್ವಾದವನ್ನು ಹುಡುಗಿಯ ಮೇಲೆ ಸುರಿಸಿ, ಆಕೆಯ ಭವಿತವ್ಯವನ್ನು ರೂಪಿಸುವ ಒಂದು ಬಗೆ ದೈವದ್ದು ಎಂದು ತೋರುತ್ತದೆ. ಯಾವ ವಿದ್ವಾಂಸರು ಮನೆಗೆ ಬಂದರೂ ಷಣ್ಮುಖವಡಿವು ವೀಣೆಯನ್ನು ಕೇಳುವುದಕ್ಕಿಂತ ಹೆಚ್ಚಾಗಿ ಕುಂಜಮ್ಮನ ಹಾಡಿಕೆಯನ್ನು ಕೇಳಲು ಕಾತರರಾಗಿರುತ್ತಿದ್ದರು. ಈ ಸಣ್ಣ ವಯಸ್ಸಿನಲ್ಲೇ ಹಿಂದೂಸ್ಥಾನೀ ಗಾಯಕರಾಗಿದ್ದ ನಾರಾಯಣರಾವ್ ವ್ಯಾಸರಿಂದ

ಕೆಲವು ಹಾಡುಗಳನ್ನು ಕಲಿತರು. (ಮುಂದೆ 'ಸೇವಾಸದನ' ಚಲಚ್ಚಿತ್ರದಲ್ಲಿ ಎಂಎಸ್ ಹಾಡಿ ಜನಪ್ರಿಯಗೊಳಿಸಿದ 'ಶ್ಯಾಮಸುಂದರ' ಎಂಬ ಹಾಡು ಆಗ ಕಲಿತದ್ದೇ). ಅಣ್ಣ ಶಕ್ತಿವೇಲ್ ಕುಂಜುವಿಗೆ ಮೃದಂಗವಾದನವನ್ನೂ ಕಲಿಸಿದರು. ರಾತ್ರಿಯ ವೇಳೆ ಮನೆಯ ಮಾಳಿಗೆಯಲ್ಲಿ ಕೂತು ಪಕ್ಕದ ಮನೆಯ ರೇಡಿಯೋವಿನಿಂದ ಬರುತ್ತಿದ್ದ ಸಂಗೀತವನ್ನೂ ಆಲಿಸುವರು. ಅಬ್ದುಲ್ ಕರೀಂಖಾನ್, ಬಡೇಗುಲಾಂ ಅಲಿಖಾನ್ ಮೊದಲಾದವರ ಹಿಂದೂಸ್ಥಾನೀ ಶೈಲಿಯ ಗಾಯನವನ್ನು ಅವರು ಕೇಳಿದ್ದು ಆಗಲೇ. ಬಡೇಗುಲಾಂ ಅಲಿಖಾನರ ಸಂಗೀತ ಅವರಿಗೆ ತುಂಬ ಪ್ರಿಯವಾಯಿತು.

ಎಂಎಸ್ ತಂದೆ ಮಧುರೆ ಸುಬ್ರಹ್ಮಣ್ಯಯ್ಯರು

ಹೀಗೆ ಸಣ್ಣ ವಯಸ್ಸಿನಲ್ಲೇ ಸಮೃದ್ಧ, ಸಂಪ್ರದಾಯಶುದ್ಧ ಸಂಗೀತದ ಮಹಾಪೂರ ಕುಂಜಮ್ಮನ ಪಾಲಿಗೆ ಒದಗಿಬಂದಿತು. ಇದರ ಜೊತೆಗೆ, ಮುಂದೆ ಅವರ ಬದುಕಿನಲ್ಲಿ, ಅವರ ಸಂಗೀತದಲ್ಲಿ ವಿಶಿಷ್ಟವಾದ ಒಂದು ವಿವರ ತೋರಿಕೊಂಡಿತು. ಆಕೆಗೆ ತಂದೆಯ ಸ್ಥಾನದಲ್ಲಿದ್ದವರು ಮಧುರೆ ಸುಬ್ರಹ್ಮಣ್ಯಯ್ಯರೆಂದು ಅವರೇ ಹೇಳಿಕೊಂಡಿದ್ದಾರೆ. ಅವರ ಮನೆಯಿದ್ದುದು ಹತ್ತಿರದ ಬೀದಿಯಲ್ಲೇ. ಈತ ವೃತ್ತಿಯಲ್ಲಿ ವಕೀಲರು, ಪ್ರವೃತ್ತಿಯಲ್ಲಿ ರಸಿಕರು.

ಮೇಲಾಗಿ ರಾಮಭಕ್ತರು. ರಾಮನವಮಿಯ ಸಂದರ್ಭದಲ್ಲಿ ರಾಮೋತ್ಸವವನ್ನು ವಿಜೃಂಭಣೆಯಿಂದ ನಡೆಸುವರು. ಪೂಜೆ, ಸಂಗೀತ ಎರಡೂ ಅದರಲ್ಲಿ ಸೇರುವುದು. ಕಡೆಯ ದಿನ ರಥೋತ್ಸವದಲ್ಲಿ ಬಂಡಿಯ ಮೇಲೆ ರಾಮದೇವರ ಪಟವನ್ನಿರಿಸಿ ಮೆರವಣಿಗೆ ಹೊರಡುವುದು. ಆಗ ವ್ಯವಸ್ಥಾಪಕರಾದ ಸುಬ್ರಹ್ಮಣ್ಯಯ್ಯರು ತಮ್ಮ ಮುದ್ದಿನ ಮಗಳಾದ ಕುಂಜುವನ್ನು ಎತ್ತಿಕೊಂಡು, ತೊಡೆಯ ಮೇಲೆ ಕೂರಿಸಿಕೊಂಡು ಬಂಡಿಯನ್ನೇರುವರು. ಮುಂದೆ ನಾಗಸ್ವರದವರು, ಚಿನ್ನಮೇಳ, ಮೊಹರಿವಾದಕರು, ಶ್ರುತಿ ಹಿಡಿಯುವವರು, ತವಿಲ್ ವಾದಕರು, ಡೋಲು, ತಾಳದವರು. ಈ ಸಂಗೀತಸಡಗರ ಮಗುವಿಗೆ ಒಂದು ಶಿಕ್ಷಣವೇ ಆಯಿತು. ತಾಯಿ ಹೆಸರಾಂತ ವೈಣಿಕರಾಗಿದ್ದುದರಿಂದ, ಮೀನಾಕ್ಷಿ ಗುಡಿಯಿಂದ ಉತ್ಸವ ಹೊರಟಾಗ, ನಾಗಸ್ವರದವರು ಇವರ ಮನೆಯ ಮುಂದೆ ನಿಂತು ಸಾವಧಾನವಾಗಿ, ಉತ್ಸಾಹದಿಂದ, ವಿಶೇಷವಾದ ಸಂಗೀತವನ್ನು ನುಡಿಸುವ ವಾಡಿಕೆಯಿದ್ದಿತು.

ಹೀಗೆ ಮನೆಯೊಳಗೆ ವೀಣೆ, ಹೊರಗೆ ನಾಗಸ್ವರ, ತನ್ನದೇ ಪ್ರತಿಭೆ ಈ ಮೂರೂ ಮಗುವಿಗೆ 'ತ್ರಿಪಾದ್‌ವಿಭೂತಿ'ಯಾಯಿತು. ಎಂಎಸ್ ಸಂಗೀತದ ಮುಕ್ಕಾಲು ಮಣೆಯಾಗಿ ಮೂಡಿಕೊಂಡಿತು. ವೀಣೆಯ ನುಡಿಸಾಟದಲ್ಲಿ ವಿಶಿಷ್ಟವಾದ ಗಮಕ, ಪ್ರಯೋಗ, ಪಲುಕುಗಳು, ನಾಗಸ್ವರದಲ್ಲಿ ವಿಶೇಷವಾದ ಸಂಚಾರಗಳು ಅವರ ಹಾಡಿಕೆಯಲ್ಲಿ ಅಂತರ್ಗತವಾದುವು. ಸಂಗೀತದ ಇನ್ನು ಒಂದು ಜೀವನಾಡಿಯೂ ಆಗಲೇ ಸಿದ್ಧವಾಯಿತು. ಇದು, ತಂದೆ ಮತ್ತೆ ಮತ್ತೆ ಹೇಳುತ್ತಲೆ ಇದ್ದ 'ಭಕ್ತಿಯೇ ಸಂಗೀತದ ಸರ್ವಸ್ವ' ಎಂಬ ಮಾತು. ಇದು ಮಗುವಿನ ಮನಸ್ಸಿನಲ್ಲಿ ಬೇರೂರಿಕೊಂಡಿತು, ಬರುಬರುತ್ತ ಹಸನಾಗಿ ಬೆಳೆದು ಹೆಮ್ಮರವಾಯಿತು, ಬಾಳ ಉಸಿರಾಯಿತು, ಸಂಗೀತದ ತವನಿಧಿಯಾಯಿತು. ಕುಂಜಮ್ಮನ ಹಾಡಿಕೆಯನ್ನು ಕೇಳಿ ಸುಪ್ರಸಿದ್ಧ ವೈಣಿಕರು ಕಾರೈಕ್ಕುಡಿ ಸಾಂಬಶಿವಯ್ಯರು "ಮಗು, ನಿನ್ನ ಗಂಟಲೊಳಗೇ ವೀಣೆ ಅಡಗಿ ಕೂತಿದೆಯಮ್ಮಾ!" ಎಂದು ಹೇಳಿದರಂತೆ. ಸರಿಯೆ, ಗಂಟಲೊಳಗೆ ವೀಣೆ, ತಲೆಯೊಳಗೆ ನಾಗಸ್ವರ, ಒಡಲೊಳಗೆ ಭಕ್ತಿಭಾವ. ಲೋಕೋತ್ತರವಾದ ಸಂಗೀತಕ್ಕೆ ಇನ್ನೇನು ಸಿದ್ಧತೆ ಬೇಕು?

ಈ ನಡುವೆ ಮತ್ತೊಂದು ಸೋಜಿಗದ ಪ್ರಸಂಗ. ಷಣ್ಮುಖವಡಿವು ಮನೆಗೆ ಪರಿವ್ರಾಜಕ ಸಾಧುವೊಬ್ಬರು ಬಂದು ಕೆಲಕಾಲ ತಂಗಿದ್ದರು. ಇವರು ಕುಂಜಮ್ಮನಿಗೆ ಸಂಸ್ಕೃತ ಶ್ಲೋಕಗಳನ್ನು ಕಲಿಸಲಾರಂಭಿಸಿದರು; ಗ್ರಂಥಾಕ್ಷರ ಲಿಪಿಯನ್ನೂ ಕಲಿಸಿದರು. ಶಾಲೆಯ ಹೊಸ್ತಿಲನ್ನೇ ಹೆಚ್ಚಾಗಿ ತುಳಿಯದ ತಮಿಳು ಮಗುವಿಗೆ ಮನೆಯಲ್ಲೇ ಸಂಸ್ಕೃತ ಪಾಠ ಎಂದರೆ ಅಚ್ಚರಿಯಲ್ಲವೆ? ಈ ಸಾಧು ಎಲ್ಲಿಂದ ಬಂದರೋ ತಿಳಿಯದು, ಎಲ್ಲಿಗೆ ಹೋದರೋ ತಿಳಿಯದು. ಅಂತೂ ಇದೊಂದು ಅಪೂರ್ವ ಸಂಸ್ಕಾರ ಕುಂಜಮ್ಮನ ಪಾಲಿಗೆ ಒಲಿದುಬಂದಿತು. ಮುಂದೆ ಆಕೆ ವಿಷ್ಣುಸಹಸ್ರನಾಮವನ್ನಾಗಲಿ, ವೆಂಕಟೇಶ್ವರ ಸುಪ್ರಭಾತವನ್ನಾಗಲಿ, ಭಜಗೋವಿಂದಂ ಮತ್ತು ಇತರ ಸಂಸ್ಕೃತ ಸ್ತೋತ್ರಗಳನ್ನಾಗಲಿ ಧ್ವನಿಮುದ್ರಣ ಮಾಡುವಾಗ ಆಕೆಯ ಸ್ಪಷ್ಟವಾದ, ಅಸ್ಖಲಿತವಾದ, ಶುದ್ಧವಾದ ಉಚ್ಚಾರಣೆ, ಪದವಿಭಾಗಗಳ ಔಚಿತ್ಯ ಮತ್ತು ಸ್ವಾರಸ್ಯ, ಸಂಸ್ಕೃತ ಪಾಠಪದ್ಧತಿಯ ತಿಳಿವಳಿಕೆ ಇವೆಲ್ಲ ಪಂಡಿತರನ್ನೇ ಬೆರಗುಮಾಡಿದವು.

ೞ

ಕುಂಜಮ್ಮನಿಗೆ ಏಳೆಂಟು ವರ್ಷಗಳಷ್ಟೆ. ತಾಯಿಯ ಜೊತೆಗೆ ಬಂದು ಹೊರಗೆ ಮಣ್ಣಾಟವಾಡುತ್ತ ಕುಳಿತಿದ್ದ ಹುಡುಗಿಯನ್ನು ಆಕೆ ಇದ್ದ ಹಾಗೆಯೇ ಸೇತುಪತಿ ಶಾಲೆಗೆ ಕೊಂಡೊಯ್ದರು. ಅಲ್ಲಿ ಸುಮಾರು ನೂರು ಜನರಿದ್ದ ಸಭೆಯೊಂದರಲ್ಲಿ ತಾಯಿ ಷಣ್ಮುಖವಡಿವು ವೀಣೆ ನುಡಿಸುತ್ತಿದ್ದರು. ಮಗುವನ್ನು ವೇದಿಕೆಯೇರಿಸಿ ತಾಯಿಯ ಪಕ್ಕ ಕುಳ್ಳಿರಿಸಿದರು. ತಾಯಿಯು ಮಗಳಿಗೆ ಹಾಡಲು ಹೇಳಿದರು. ಮಗುವಿನ ಹಾಡು ಎಲ್ಲರಿಂದಲೂ ಮೆಚ್ಚುಗೆ ಪಡೆಯಿತು. ಎಂಎಸ್ ಅವರ ಮೊದಲ ಕಚೇರಿಯ ಅನುಭವ ಇದು.

ಮುಂದಿನದು ಒಂಬತ್ತು ವರ್ಷ ವಯಸ್ಸಿನಲ್ಲಿ. ಮನೆಯ ನೆರೆಯಲ್ಲೇ, ಟಿ.ವಿ.ಎಸ್. ಸೈಕಲ್ ಮಾರಾಟಮಳಿಗೆಯ ಆರಂಭೋತ್ಸವ. ಅಂಗಡಿಯ ಮುಂದೆ ಚಪ್ಪರ ಏರಿಸಿದ್ದು, ಸಣ್ಣದೊಂದು ಗುಂಪು ನೆರೆದಿದ್ದಿತು. ವ್ಯವಸ್ಥಾಪಕರು ಷಣ್ಮುಖವಡಿವು ಮನೆಗೆ ಬಂದು, ಹಾಡಲು ಕುಂಜಮ್ಮನನ್ನು ಕಳುಹಿಸುವಂತೆ

ಕೇಳಿಕೊಂಡರು. ಆಕೆ ಒಪ್ಪಿ ಮಗಳನ್ನು ಕಳುಹಿಸಿಕೊಟ್ಟರು. ಅಲ್ಲಿ ಕುಂಜಮ್ಮನ ಗಾಯನವನ್ನು ಕೇಳಿ ಮುಗ್ಧರಾದವರಲ್ಲಿ ಒಬ್ಬಾತ ಎಚ್‌ಎಂವಿ ಗ್ರಾಮೋಫೋನ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದಾತ. ಸಹಜವಾದ ಸಂತೋಷದಿಂದ, ಅಸಾಧಾರಣವಾದ ಕಂಠಸಿರಿಯಿಂದ, ಯಾವೊಂದು ಬಿಂಕ, ನಾಚಿಕೆ, ಸಂಕೋಚಗಳಿಲ್ಲದೆ, ಮಧುರವಾಗಿ ಹಾಡಿದ ಈ ಹುಡುಗಿಯ ಹಾಡನ್ನು ಧ್ವನಿಮುದ್ರಣ ಮಾಡಿಕೊಂಡರೆ ಒಳ್ಳೆಯದೆಂದು ಆತ ಭಾವಿಸಿ ಅದಕ್ಕೆ ಒಡನೆಯೇ ಒಪ್ಪಿಗೆಯನ್ನು ಪಡೆದುಕೊಂಡ. ಚೆಂಚುರುಟಿ ರಾಗದ 'ಮರಕತವಡಿವುಂ' ಎಂಬ ಕೃತಿಯ ಗಾಯನದ ಧ್ವನಿಮುದ್ರಣವೂ ಆಯಿತು. ಎಚ್‌ಎಂವಿ ಗ್ರಾಮೋಫೋನ್ ಸಂಸ್ಥೆಯವರು ತಾಯಿಯ ಸೂಚನೆಯಂತೆ ಮಗು ಕುಂಜಮ್ಮನ ಹಾಡಿಕೆಯನ್ನು ಧ್ವನಿಮುದ್ರಣ ಮಾಡಿದ ಇನ್ನೊಂದು ವಿವರ ಮೊದಲೇ ಬಂದಿದೆ. ಇಲ್ಲಿನ ವಿವರ ಬೇರೆ ಬಗೆಯದು. ಯಾವುದು ದಿಟವೋ ತಿಳಿಯದು. ಅಂತೂ ಧ್ವನಿಮುದ್ರಣಗೊಂಡು ಜನಪ್ರಿಯ ಗಾಯಕಿಯೆಂದು ಹೆಸರಾದುದು ಹತ್ತನೆಯ ವಯಸ್ಸಿನಲ್ಲಿ ಎಂಬುದಂತೂ ಸರಿಯೇ.

ಇದಾದನಂತರ ರಾಮನಾಥಪುರದ ಅರಸೊತ್ತಿಗೆಯವರು ಈ ಹುಡುಗಿಯ ಗಾಯನವನ್ನು ತಮ್ಮ ಅರಮನೆಯಲ್ಲಿ ಏರ್ಪಡಿಸಿ, ಪುರಸ್ಕರಿಸಿದರು. ಮಧುರೆಯ ಹೊರಗೂ ಅನೇಕ ಜಮೀನುದಾರರ, ಅರಸರ ಮನೆಗಳಲ್ಲಿ ನಡೆಯುತ್ತಿದ್ದ ಮದುವೆ ಮೊದಲಾದ ಸಂದರ್ಭಗಳಲ್ಲಿ ಕುಂಜಮ್ಮನ ಗಾಯನ ಇರುತ್ತಿದ್ದಿತು. ಹನ್ನೆರಡು-ಹದಿಮೂರು ವಯಸ್ಸಿಗಾಗಲೇ ಆಕೆ ಜನಪ್ರಿಯ ಗಾಯಕಿಯಾಗಿಬಿಟ್ಟಿದ್ದಳು!

ಪುದುಕ್ಕೋಟೆ ದಕ್ಷಿಣಾಮೂರ್ತಿ ಪಿಳ್ಳೆಯವರ ಪ್ರಸ್ತಾಪ ಆಗಲೇ ಬಂದಿದೆ. ಅವರ ಮನೆಯಲ್ಲಿ ನಡೆದ ಮದುವೆಯೊಂದರಲ್ಲಿ ಕುಂಜಮ್ಮನನ್ನೇ ಹಾಡಲು ಕರೆಸಿದ್ದರು. ಸಂಜೆಯ ವಿನಿಕೆಯಲ್ಲಿ ಶೆಮ್ಮಂಗುಡಿ ಶ್ರೀನಿವಾಸಯ್ಯರು, ಮುಸಿರಿ ಸುಬ್ರಹ್ಮಣ್ಯಯ್ಯರು, ಚೆಂಬೈ ವೈದ್ಯನಾಥ ಭಾಗವತರು, ಕುಂಭಕೋಣಂ ರಾಜಮಾಣಿಕ್ಯಂಪಿಳ್ಳೆ (1898-1970), ಪಾಲಕ್ಕಾಡು ಮಣಿಅಯ್ಯರು, ಜಿ. ಎನ್. ಬಾಲಸುಬ್ರಹ್ಮಣ್ಯಂ (1910-1965), ಮೊದಲು ತಿಮಿರಿ ಅನಂತರ

ಬಾರಿ ನಾಗಸ್ವರದಲ್ಲಿ ಹೆಸರಾದ ತಿರುವಾಡುದುರೈ, ಎನ್. ರಾಜರತ್ನಂಪಿಳ್ಳೈ (1898-1956) ಮೊದಲಾದ ಘಟಾನುಘಟಿ ವಿದ್ವಾಂಸರು ನೆರೆದಿದ್ದರು. ಎಲ್ಲರೂ ಹನ್ನೆರಡು ವರ್ಷದ ಹುಡುಗಿಯ ಕಂಠಮಾಧುರ್ಯಕ್ಕೆ, ಸಂಗೀತದ ಪ್ರೌಢಿಮೆಗೆ, ನಿರೂಪಣೆಯ ಸೊಗಸಿಗೆ ದಿಗ್ಭ್ರಮೆಗೊಂಡರು. ಮರುದಿನ ಇವರೆಲ್ಲರೂ ಇದ್ದ ಸಭೆಯಲ್ಲಿ ದಕ್ಷಿಣಾಮೂರ್ತಿಪಿಳ್ಳೆಯವರು ಎದ್ದುನಿಂತು, ತಲೆ ಬಡಿದುಕೊಂಡು "ಆಂಡವನೇ (ದೇವರೇ), ಸಂಗೀತ ವಿದ್ವಾಂಸರು ಹಾಡಿಕೆಯ ದೊಂಬರಾಟದಲ್ಲಿ ತೊಡಗಿ, ತಮ್ಮ ಶಾರೀರವನ್ನು ಹೇಗೆ ತಾನೆ ಬದುಕಿರುವವರೆಗೂ ಉಳಿಸಿಕೊಂಡಾರು? ಅಂಥ ಕಸರತ್ತುಗಳನ್ನೆಲ್ಲ ನಮಗೆ (ಮೃದಂಗದವರಿಗೆ, ಡೋಲು-ತವಿಲ್‌ನವರಿಗೆ) ಬಿಡಿ! ಹಾಡುವವರು ರಾಗ, ಭಾವಗಳನ್ನು ಎತ್ತಿ ತೋರಿಸಬೇಕು. ಶಾರೀರವನ್ನು ಉಳಿಸುವುದು, ಬೆಳಗಿಸುವುದು ಅದೇ. ಈ ಸಣ್ಣ ಹುಡುಗಿಗೆ ಈ ಗುಟ್ಟು ಈಗಾಗಲೇ ತಿಳಿದಿದೆ! ನೆನ್ನೆ ನೀವೆಲ್ಲರೂ ಅವಳ ಹಾಡಿಕೆಯನ್ನು ಕೇಳಲಿಲ್ಲವೆ? ಸವಿಯಲಿಲ್ಲವೆ? ನಮ್ಮೆಲ್ಲರ ಹೃದಯವನ್ನು ಅದು ಸೂರೆಗೊಳ್ಳಲಿಲ್ಲವೆ? ಸೌಖ್ಯವನ್ನು ತಂದುಕೊಡಲಿಲ್ಲವೆ?" ಎಂದು ಆವೇಶದಿಂದ ನುಡಿದರು. ಸಭೆಯಲ್ಲಿಯೇ ಕುಳಿತಿದ್ದ ಕುಂಜಮ್ಮ ನಾಚಿ ತಾಯಿಯ ಹಿಂದೆ ಮುದುಡಿಕೊಂಡರು.

ಌ

ಎಂಎಸ್ ಅವರು ಅರವತ್ತು ವರ್ಷಗಳ ಕಾಲ ಹಾಡಿ ಲೋಕ ವಿಖ್ಯಾತರಾದ ಮೇಲೆ ನೆನಪಿಗೆ ತಂದುಕೊಂಡರು: "ಹಿರಿಯ ವಿದ್ವಾಂಸರು ನನ್ನನ್ನು ಹಾಡುವಂತೆ ಕೇಳುತ್ತಿದ್ದರು; ಉದಾರ ಹೃದಯದಿಂದ, ತೆರೆದ ಮನಸ್ಸಿನಿಂದ ಮೆಚ್ಚಿಕೊಳ್ಳುತ್ತಿದ್ದರು. ಕೆಲವರು ಕೊಂಡಾಡುತ್ತಲೂ ಇದ್ದರು. ಆದರೂ ನನ್ನ ಅಳುಕು, ಅಂಜಿಕೆ ಮರೆಯಾಗಲಿಲ್ಲ. ಈಗಲೂ ನನಗೆ ಹಾಡುವಾಗ ಹೆದರಿಕೆಯೇ!" ಆದರೆ ಹಾಡಲು ಮೊದಲು ಮಾಡಿದರೆಂದರೆ ಈಗ ಕಾಣುವ ಗಾಂಭೀರ್ಯ, ಧೈರ್ಯ, ಆತ್ಮಸ್ಥೈರ್ಯ ಆಗಲೂ ಇದ್ದುವು. ತನ್ನ ಹದಿನಾರನೆಯ ವಯಸ್ಸಿನಲ್ಲಿ ಆಕೆ ಚೆನ್ನೈನ ಜಾರ್ಜ್‌ಟೌನಿನ ಗೋವಿಂದಪ್ಪ ನಾಯಕನ ರಸ್ತೆಯಲ್ಲಿರುತ್ತಿದ್ದ ಸೌಂದರ್ಯಮಹಲ್ ಭವನದಲ್ಲಿ ಹಾಡುವಾಗ

ಅಲ್ಲಿದ್ದ ತಂಜಾವೂರು ಶಂಕರನ್ (ವೀಣೆ ಧನಮ್ಮಾಳ್ ಮೊಮ್ಮಗ) ಅವರ ಅನುಭವ ಇದು– "ಈ ಹುಡುಗಿ ಹಾಡುವಾಗ ಏನೊಂದು ಸಂಕೋಚವೂ ಇರಲಿಲ್ಲ; ಅವಳ ಧೈರ್ಯ ಮತ್ತು ಗಾಂಭೀರ್ಯಗಳಿಗೆ ಮಾರುಹೋದೆ".

ಕುಂಭಕೋಣ ತಂಜಾವೂರು ಸಂಗೀತ ಪದ್ಧತಿಯ ಕೇಂದ್ರವಾಗಿದ್ದ ಕಾಲ ಅದು. ಅಲ್ಲಿ ಕುಂಜಮ್ಮನ ಹಾಡಿಕೆಯನ್ನು ರಸಿಕರೂ ವಿದ್ವಾಂಸರೂ ಮೆಚ್ಚಿಕೊಂಡರೆ ಅದೊಂದು ಹಿರಿಮೆಯೆಂದು ಷಣ್ಮುಖವಡಿವು ಎಣಿಸಿ 1932ರಂದು ಅಲ್ಲಿ ನಡೆಯಲಿದ್ದ ಮಹಾಮಾಘೋತ್ಸವಕ್ಕೆ ದಕ್ಷಿಣದ ಕುಂಭಮೇಳಕ್ಕೆ ಮಗಳನ್ನು ಕರೆದೊಯ್ದರು. ಈ ಉತ್ಸವದ ವ್ಯವಸ್ಥೆಯಲ್ಲಿ ಧಾರ್ಮಿಕ ಮತ್ತು ಸಂಗೀತಕಾರ್ಯಕ್ರಮಗಳು ಸಮಪ್ರಧಾನವಾಗಿಯೇ ಸೇರಿದ್ದುವು. ಇವೆಲ್ಲವನ್ನೂ ನೋಡಿಕೊಳ್ಳುತ್ತಿದ್ದಾತ ಕೆ. ಸುಬ್ರಹ್ಮಣ್ಯಂ ಎಂಬ ಪ್ರಭಾವಶಾಲಿ, ಪ್ರತಿಭಾವಂತ. ವೃತ್ತಿಯಲ್ಲಿ ವಕೀಲನಾದರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದವರು; ನಟ, ಚಲಚ್ಚಿತ್ರ ನಿರ್ದೇಶಕ. ಆತ ಹೊರತಂದ 'ಪವಳಕ್ಕೊಡಿ' ತಮಿಳು ಚಿತ್ರದಲ್ಲಿ ಅಭಿನೇತ್ರಿಯಾಗಿ ಪ್ರಸಿದ್ಧಳಾದ ಎಸ್. ಡಿ. ಸುಬ್ಬುಲಕ್ಷ್ಮಿಯನ್ನೇ ಮುಂದೆ ಮದುವೆಯಾದರು. ಎಸ್. ಡಿ. ಸುಬ್ಬುಲಕ್ಷ್ಮಿಯೂ ಮಧುರೆಯುವರಾದ್ದರಿಂದ, ಪರಿಚಿತರಾದ್ದರಿಂದ ಷಣ್ಮುಖವಡಿವು ಅವರನ್ನು ಕಂಡು ತನ್ನ ಮಗಳು ಸುಬ್ಬುಲಕ್ಷ್ಮಿಗೆ ಮಹಾಮಾಘೋತ್ಸವದಲ್ಲಿ ಸಂಗೀತ ವಿನಿಕೆಗೆ ಅವಕಾಶವೊಂದನ್ನು ನೀಡುವಂತೆ ನೆರವಾಗಬೇಕೆಂದು ಕೋರಿಕೊಂಡರು.

ವ್ಯವಹಾರಚತುರ ಕೆ. ಸುಬ್ರಹ್ಮಣ್ಯಂಗೆ ಈ ಹದಿನಾರು ವರ್ಷದ ಹುಡುಗಿ ಕಾವೇರಿತೀರದ ಮೇಲೆ ನಡೆಯುವ ಅಲ್ಲಿನ ದಿಗ್ದಂತಿಗಳ ಮಹಾಸಭೆಯನ್ನು ಹೇಗೆ ಎದುರಿಸಿಯಾಳೆಂಬ ಅಂಜಿಕೆಯಿದ್ದಿತಾದರೂ ಎಸ್. ಡಿ. ಸುಬ್ಬುಲಕ್ಷ್ಮಿಯ ಒತ್ತಾಯದ ಮೇಲೆ ಒಪ್ಪಿಕೊಂಡರು. ಆದರೆ ಈ ಮಧುರೆಯ ಹುಡುಗಿ, ಷಣ್ಮುಖವಡಿವು ಮಗಳು, ಸುಬ್ಬುಲಕ್ಷ್ಮಿ ತನ್ನ ವಿನಿಕೆಯಿಂದ ಜಯಭೇರಿ ಹೊಡೆದುಬಿಟ್ಟಳು! ಎಲ್ಲೆಲ್ಲೂ ಅವಳ ಸಂಗೀತದ ಸೊಗಸಿನ ಸೊಲ್ಲೇ. ಎಲ್ಲ ರಸಿಕರ ಹೃದಯಗಳನ್ನೂ ಸೂರೆಗೊಂಡಳು. ಕೆಲವು ದಿನಗಳ ಹಿಂದೆ ಅಲ್ಲೇ ಆ ಕಾಲದ ಸಂಗೀತಚಕ್ರವರ್ತಿಯೆನಿಸಿದ್ದ ಮಹಾರಾಜಪುರಂ ವಿಶ್ವನಾಥಯ್ಯರ

ಸಂಗೀತ ನಡೆದಿದ್ದಿತು. ಅವರಿಗೆ ಆಗ ಚಿನ್ನದ ಮೆಡಲ್ ಒಂದನ್ನು ಗೌರವವಾಗಿ ನೀಡಲಾಗಿತ್ತು. ಅವರು ಸುಬ್ಬುಲಕ್ಷ್ಮಿ ಹಾಡಿದ ಸಭೆಯಲ್ಲೂ ಇದ್ದರು. ಹಾಡನ್ನು ಕೇಳಿ ಮಾರುಹೋದರು. ತಮಗೆ ಸಭೆ ನೀಡಿದ್ದ ಮೆಡಲನ್ನು ಸುಬ್ಬುಲಕ್ಷ್ಮಿಗೆ ಕೊಟ್ಟು "ಇದು ನಿನಗೇ ಸಲ್ಲಬೇಕು" ಎಂದು ಹೇಳಿ ಕೊಂಡಾಡಿದರು.



ಎಂಎಸ್

ಇದರ ಪ್ರಭಾವ ಎಷ್ಟಾಯಿತೆಂದರೆ ಚೆನ್ನೈನ ಸುಪ್ರತಿಷ್ಠಿತ ಸಂಗೀತ ಸಂಸ್ಥೆಯಾದ ಮ್ಯೂಸಿಕ್ ಅಕ್ಯಾದಮಿ ಅದೇ ವರ್ಷ (1933) ಆ ಹುಡುಗಿಯನ್ನು ಹಾಡಲು ಕರೆಯಿತು. ಅರಿಯಕ್ಕುಡಿಯವರು ಹಾಡುವ ಏರ್ಪಾಟಿದ್ದಿತೆಂದೂ, ಕಾರಣಾಂತರದಿಂದ ಅವರು ಬರಲಾಗದಿದ್ದಾಗ, ಎಂಎಸ್‌ರವರನ್ನು ಕೇಳಿಕೊಂಡರೆಂದೂ ಒಂದು ವಿವರವಿದೆ. ವುಡ್‌ಲ್ಯಾಂಡ್ಸ್ ಹೋಟಲಿನ ಆವರಣದಲ್ಲಿ ದೊಡ್ಡ ಚಪ್ಪರದಲ್ಲಿ ಇವಳ ಕಚೇರಿ. ಹುಡುಗಿ ಹಾಡುವಾಗ ತಾಯಿ ತಂಬೂರಿ ಶ್ರುತಿ ಹಿಡಿಯುವುದು. ಹಿಂದೆ, ತಾಯಿ ವೀಣೆ ನುಡಿಸುವಾಗ ಮಗಳು ಹಾಡುವುದಿದ್ದಿತು; ಈಗ ಅದು ತಿರುಗುಮುರುಗು. ಹುಡುಗಿಯದಾದರೂ ಅಂದಿನದು ಪರಿಪೂರ್ಣವಾದ, ಸಂಪ್ರದಾಯ

ಶುದ್ಧವಾದ ಕಚೇರಿಯೇ. ಸಭೆಯಲ್ಲಿ ನೆರೆದಿದ್ದ ಸಾವಿರಾರು ಜನರಲ್ಲಿ ಟೈಗರ್ ವರದಾಚಾರ್ಯರು, ಚೆಂಬೈ ವೈದ್ಯನಾಥ ಭಾಗವತರು, ಮುತ್ತಯ್ಯ ಭಾಗವತರು, ಕಾರೈಕ್ಕುಡಿ ಸಾಂಬಶಿವಯ್ಯರು ಮೊದಲಾದ ಹಿರಿಯರೂ ಇತರ ರಸಿಕರೊಂದಿಗೆ ಇದ್ದರು. ಹುಡುಗಿಯ ಹಾಡಿನ ಮೋಡಿ ಎಲ್ಲೆಡೆಯೂ ಹರಡಿತು. ಇದೊಂದು ಅಪೂರ್ವ ಅನುಭವ ಎಲ್ಲರಿಗೂ. 'ಗಂಧರ್ವಗಾನವೆಂದರೆ ಇದೇ!' ಎಂದು ಚೆಂಬೈ ವೈದ್ಯನಾಥ ಭಾಗವತರು ಆವೇಶದಿಂದ ಉದ್ಗಾರ ತೆಗೆದರು. ಪಂಡಿತ-ಪಾಮರರೆಲ್ಲರಿಗೆ ಸಮಾನವಾಗಿಯೇ ರುಚಿಸುವ, ಎಲ್ಲರ ಮೈಮರೆಸುವ ಸಂಗೀತ ಇದೆಂದು ಎಲ್ಲರೂ ಒಪ್ಪಿದರು. ಕರ್ನಾಟಕ ಸಂಗೀತವಲಯದಲ್ಲಷ್ಟೇ ಅಲ್ಲ, ಸಾಂಸ್ಕೃತಿಕ ಪರಿಸರದಲ್ಲೆಲ್ಲ ಎಂಎಸ್ ಅವರ ಮಾತೇ! ಆಗಲೇ ಅವರು ಜನಮನವನ್ನು ಗೆದ್ದುಬಿಟ್ಟರು. ಆಗ ಅವರಿಗಿನ್ನೂ ಹದಿನಾರು ವರ್ಷ ವಯಸ್ಸು. 'ಸಂಗೀತಕಲಾನಿಧಿ'ಯಾಗಲು ಮೂವತ್ತಾರು ವರ್ಷಗಳ ಮೊದಲೇ!

೬

ಮಗಳನ್ನು ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧಳನ್ನಾಗಿಸಬೇಕೆಂಬ ಷಣ್ಮುಖವಡಿವು ಹಂಬಲ ಈಗ ಬಹುಮಟ್ಟಿಗೆ ಈಡೇರಿತು. ಇನ್ನು ಮುಂದೆ ಅವಳ ಸಂಗೀತ ಉದ್ಯಮಕ್ಕೆ ಮಧುರೆಗಿಂತ ಚೆನ್ನೈ ಹೆಚ್ಚು ಅನುಕೂಲವಾದೀತೆಂದು ಬಗೆದು ತಾಯಿ-ಮಕ್ಕಳು ಮಧುರೆಯನ್ನು ಬಿಟ್ಟು ಚೆನ್ನೈ ನಗರದ ಪರಶ್ವಾಕಂನಲ್ಲಿ ಮನೆ ಮಾಡಿಕೊಂಡರು. ಈ ಮನೆಗೆ ಹತ್ತಿರದಲ್ಲೇ ಎಗ್ಮೋರಿನಲ್ಲಿ ವೀಣಾ ಧನಮ್ಮಾಳ್ ಅವರು ಇದ್ದುದು. ವೀಣಾವಿದುಷಿಯಾಗಿದ್ದ ಷಣ್ಮುಖವಡಿವು (ಷಣ್ಮುಖಮ್ಮಾಳ್) ಈ ಸಂಗೀತಸರಸ್ವತಿಯನ್ನು ಬಲ್ಲವರಾಗಿದ್ದರು. ವೀಣಾ ಧನಂ ಅವರದ್ದು ದೊಡ್ಡ ಕುಟುಂಬ. ಮೊದಲ ಮಗಳು ಜಯಮ್ಮಾಳ್; ಆಕೆಯ ಮಗಳು ನೃತ್ಯದಲ್ಲಿ, ಅಭಿನಯದಲ್ಲಿ ಹೆಸರಾಂತ ತಂಜಾವೂರು ಬಾಲಸರಸ್ವತಿ. ಎರಡನೆಯ ಮಗಳು ಕಾಮಾಕ್ಷಿ; ಆಕೆಯ ಮಕ್ಕಳು ಪ್ರಖ್ಯಾತ ಗಾಯಕಿಯರಾದ ತಂಜಾವೂರು ಬೃಂದಾ ಮತ್ತು ಮುಕ್ತಾ.



ವೀಣಾ ಧನಮ್ಮಾಳ್

ಇವರ ಸಂಪರ್ಕ, ಸ್ನೇಹ ಮಧುರೆಯಿಂದ ಬಂದ ಸುಬ್ಬುಲಕ್ಷ್ಮಿಗೆ ಹೊಸದೊಂದು ಆಯಾಮವನ್ನೇ ತೆರೆಯಿತು, ಆಕೆಯ ಸ್ವಭಾವವನ್ನೇ ಕೊಂಚಮಟ್ಟಿಗೆ ಮಾರ್ಪಡಿಸಿತು. ಶೃಂಗಾರ, ಹಾಸ್ಯರಸಗಳು ಆಕೆಯಲ್ಲಿ ಈಗ ಮೂಡಿಕೊಂಡವು. ನಗುನಗುತ್ತ, ಕಳೆಮುಖದಿಂದ ಎಲ್ಲರೊಂದಿಗೆ ಓಡಿಯಾಡುತ್ತ, ಸಂಕೋಚವನ್ನು ಕೈಬಿಟ್ಟು, ಸರಸವಾಗಿ ಸರಳವಾಗಿರಲು ಮೊದಲು ಮಾಡಿದರು. ಮುಗ್ಧಪ್ರಕೃತಿಯೇನೋ ಮರೆಯಾಗಲಿಲ್ಲ; ಅದು ಬದುಕಿನುದ್ದಕ್ಕೂ ಇದ್ದಿತೆನ್ನಿ. ಆದರೆ ನವತಾರುಣ್ಯದ ರೂಪಸಿ ಈಗ ಆಕೆ. ಮತ್ತೆ, ಬಾಲಸರಸ್ವತಿಯಿಂದ, ಬೃಂದಮ್ಮನಿಂದ ಜಾವಳಿಗಳನ್ನೂ ಪದಗಳನ್ನೂ ಕಲಿತರು: ಈವರೆಗೆ ಅದಕ್ಕೆ ಅವಕಾಶವಿರಲಿಲ್ಲ. ಮಧುರೆಯಲ್ಲಿದ್ದಾಗ ಶ್ರೀಮದ್ಗಾಂಭೀರ್ಯದ ಪರಿಸರ, ತಾಯಿಯ ಸ್ವಭಾವವೂ ಗಂಭೀರವೇ, ಆಕೆ ನಕ್ಕದ್ದನ್ನೇ ಯಾರೂ ಅರಿಯರು! ಸಾಧನೆಯ ಗೀಳು ಬೇರೆ. ಮಗಳ ಮೇಲೆ ಸರ್ಪಕಾವಲು. ಇಂಥ ಹಿನ್ನೆಲೆಯಿಂದ ಹೊರಬಂದು ಉಸಿರಾಡುವಂತಾಯಿತು ಎಂಎಸ್‌ಗೆ.

ತರುಣ ಸದಾಶಿವಂ ಅವರನ್ನು ಕಾಣಲು ಬಂದದ್ದು 1936ರ ಜೂನ್ 30 ರಂದು. ತಮ್ಮ ಮಿತ್ರ ಕೃಷ್ಣಮೂರ್ತಿ ಸಂಪಾದಕರಾಗಿದ್ದ 'ಆನಂದ ವಿಕಟನ್' ಪತ್ರಿಕೆಯ ದೀಪಾವಳಿಮಲರ್ ವಿಶೇಷಾಂಕಕ್ಕೆ ಎಂಎಸ್ ಮೇಲೆ ಲೇಖನವೊಂದನ್ನು ಬರೆಯಿಸುವ ಉದ್ದೇಶದಿಂದ ಸದಾಶಿವಂ ಬಂದದ್ದು. ಮುಂದಣ ಸಂದರ್ಶನಗಳು ಮುಂದುವರೆದುವು. ಇಬ್ಬರೂ ಪರಸ್ಪರ ಮೆಚ್ಚಿಕೊಂಡಂತೆ ತೋರಿತು. ಇದು ತಾಯಿ ಷಣ್ಮುಖಮ್ಮಾಳಿಗೆ ಸರಿಕಾಣಲಿಲ್ಲ. ಮಗಳನ್ನು ಶ್ರೀಮಂತ ಚೆಟ್ಟಿಯಾರನೊಬ್ಬ ಮದುವೆಮಾಡಿಕೊಳ್ಳುವನೆಂಬ ನಿರೀಕ್ಷೆಯಿದ್ದವರು ಅವರು. ಉದ್ಯೋಗವಿಲ್ಲದೆ ಅಲೆಯುತ್ತಿದ್ದ ಸದಾಶಿವಂ ಕೈಹಿಡಿದುಬಿಟ್ಟರೆ ಮಗಳ ಭವಿಷ್ಯವೆಲ್ಲ ಹಾಳಾದೀತು ಎಂದು ಬೆದರಿ, ಇದ್ದಕ್ಕಿದ್ದಂತೆ ಚೆನ್ನೈ ಬಿಡದಿಯನ್ನು ಬಿಟ್ಟು ಮಧುರೆಗೆ ಮಕ್ಕಳೊಂದಿಗೆ ಹಿಂದಿರುಗಿಬಿಟ್ಟರು.

ಮಗಳಿಗೆ ಸರಿಯಾದ ಸಂಬಂಧವೊಂದನ್ನೂ ಶ್ರಮವಹಿಸಿ ಕಂಡುಹಿಡಿದರು. ರಾಮನಾಥಪುರ ಸಂಸ್ಥಾನದ ಅರಸನ ನಂಟನೊಬ್ಬ ಈ ಹುಡುಗಿಯನ್ನು ಮದುವೆಯಾಗಲು ಒಪ್ಪಿದ. ಆದರೆ ಅಲ್ಲಿಯವರೆಗೆ ನಮ್ರತೆಯ ಪುತ್ಥಳಿಯಾಗಿದ್ದ ಕುಂಜಮ್ಮ ತಾನು ಮದುವೆಯಾಗಲು ಸಿದ್ಧವಾಗಿಲ್ಲವೆಂದು ಖಂಡಿತವಾಗಿ ತಿಳಿಸಿಬಿಟ್ಟಳು. ತಾಯಿಯ ಆಸೆ ಮಣ್ಣುಗೂಡಿತು. ಅನಂತರ ಸ್ವಲ್ಪ ಸಮಯದಲ್ಲೇ ಎಂಎಸ್ ಗುಟ್ಟಾಗಿ ಮಧುರೆಯಿಂದ ರೈಲಿನಲ್ಲಿ ಹೊರಟು ಚೆನ್ನೈ ಸೇರಿದಳು. ಮುಂದೆ ಸದಾಶಿವಂ ಅವರ ಮನೆಯಲ್ಲೇ ವಾಸ.

ಕಾಣೆಯಾದ ಹುಡುಗಿಯನ್ನು ಹುಡುಕುತ್ತ ಷಣ್ಮುಖಮ್ಮಾಳ್ ಮಗ ಶಕ್ತಿವೇಲನನ್ನು ಚೆನ್ನೈಗೆ ಕಳುಹಿಸಿದಳು. ತನ್ನ ತಂಗಿ ಸದಾಶಿವಂ ಮನೆಯಲ್ಲಿರುವುದನ್ನೂ, ಅವಳು 'ಸೇವಾಸದನ'ವೆಂಬ ತಮಿಳು ಚಲಚ್ಚಿತ್ರದಲ್ಲಿ ಅಭಿನಯಿಸಲು ಸಿದ್ಧವಾಗಿರುವುದನ್ನೂ ಅರಿತುಕೊಂಡು ತಾಯಿಗೆ ತಿಳಿಸಿದಾಗ ಅವರಿಗೆ ಮುಗಿಲೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಚಲಚ್ಚಿತ್ರವೆಂದರೆ ಆಕೆಗೆ ದಿಗಿಲು. ತಾನೇ 'ಸಂಗೀತ ಲವಕುಶ' ಎಂಬ ಚಿತ್ರದಲ್ಲಿ ಅಗಸಗಿತ್ತಿಯ ಸಣ್ಣದೊಂದು ಪಾತ್ರವನ್ನು ನಿರ್ವಹಿಸಿದ್ದರಾಗಿ ಚಲಚ್ಚಿತ್ರದಲ್ಲಿ ಕೆಲಸಮಾಡುವ ಜನರೆಲ್ಲ ದುಷ್ಟರು, ನೀತಿಗೆಟ್ಟವರು, ನಿಷ್ಕರುಣೆಗಳು ಎಂಬ ನಿರ್ಧಾರಕ್ಕೆ

ಬಂದಿದ್ದರು. ಮಗಳು ಚಲಚ್ಚಿತ್ರದಲ್ಲಿ ಪಾತ್ರವಹಿಸುವುದು ಆಕೆಗೆ ಏನೇನೂ ಸಮ್ಮತಿಯಿರದು. ಸದಾಶಿವಂ ಎಂದರೆ ಅವನೊಬ್ಬ ಘಾತುಕ, ದುರಾಚಾರಿ, ಭ್ರಷ್ಟ ಎಂದೇ ಆಕೆಯ ಕಲ್ಪನೆ. ಸದಾಶಿವಂಗೂ ಷಣ್ಮುಖವಡಿವು ಎಂದರೆ ಅಷ್ಟೇ ಆಗ್ರಹ. ಆದರೆ, ಚಲಚ್ಚಿತ್ರದಲ್ಲಿ ಮಗಳು ಅಭಿನಯಿಸಲು ತಾಯಿ ಒಪ್ಪಿದ್ದರೆಂದೂ, ಚಿತ್ರದ ನಿರ್ದೇಶಕರಾಗಿದ್ದ ಕೆ. ಸುಬ್ರಹ್ಮಣ್ಯಂ ಇವರಿಗೆ ಪರಿಚಿತರೆಂದೂ, ನಟಿಯೂ ಅವರ ಹೆಂಡತಿಯೂ ಆದ ಎಸ್. ಡಿ. ಸುಬ್ಬುಲಕ್ಷ್ಮಿ ತಮ್ಮೂರಿನವರೇ ಆಗಿದ್ದುದರಿಂದ ತಾಯಿಗೇನು ಆತಂಕವಿರಲಿಲ್ಲವೆಂದೂ ಒಂದು ವಿವರವಿದೆಯೆನ್ನಿ. ಅದು ಹೇಗಾದರಿರಲಿ, ಹಿಂದಣ ವಿವರವನ್ನು ಮುಂದರಿಸೋಣ.

ಇಬ್ಬರಿಗೂ ಒಂದು ಹಣಾಹಣಿಯೇ ನಡೆದುಹೋಯಿತು. ಜಗಳ ಕೋರ್ಟುಕಚೇರಿಗಳನ್ನೂ ಹತ್ತಿತಂತೆ. ಎಂಎಸ್ ಏನೋ ನೆಮ್ಮದಿಯಿಂದ ಚೆನ್ನೈನಲ್ಲಿ ಇದ್ದುಬಿಟ್ಟರು. ಮಧುರೆಗೆ ಹಿಂದಿರುಗುವ ಮನಸ್ಸು ಅವರಿಗಿರಲೇ ಇಲ್ಲ. ತಾಯಿ ನಿರಾಶಳಾಗಿ, ಹತಾಶಳಾಗಿ ಮಧುರೆಗೆ ಹಿಂದಿರುಗಿ, ಏಕಾಂತದಲ್ಲಿ ತಪಸ್ವಿನಿಯಂತೆ ಇರಬೇಕಾಯಿತು. ಇನ್ನೇನು ಸಂಗೀತವೂ ಸೊರಗಿತು, ಕುಂಜಮ್ಮನೂ ಕಾಣೆಯಾದಳು; ಬದುಕಿರಬೇಕೆಂಬ ಬಯಕೆಯೂ ದೂರವಾಯಿತು! ಕಡೆಯ ಮಗಳು ವಡಿವಾಂಬಾಳೇನೋ ಕೊಯಮತ್ತೂರಿನ ಭಾಷ್ಯಂ ಅಯ್ಯಂಗಾರೆಂಬ ಶ್ರೀಮಂತ ರಸಿಕನನ್ನು ಮದುವೆಯಾದಳು. ಆದರೆ ತನ್ನ ಇಪ್ಪತ್ತೆರಡನೆಯ ವಯಸ್ಸಿನಲ್ಲೇ ಪ್ರಾಣಬಿಟ್ಟಳು; ಡಬಲ್ ನ್ಯುಮೋನಿಯ ಕಾರಣವಾಯಿತು ಎಂದು ಒಂದು ಸೂಚನೆ; ಆತ್ಮಹತ್ಯೆ ಮಾಡಿಕೊಂಡಳು ಎಂದು ಇನ್ನೊಂದು. ಯಾವುದು ದಿಟವೋ ತಿಳಿಯದು. ಆಕೆ ತುಂಬ ರೂಪವತಿ, ಪ್ರತಿಭಾಶಾಲಿನಿಯಾದ ವಯಲಿನ್, ವೀಣಾವಾದಕಿ. ಎಂಎಸ್ ಪಡೆದ ಪ್ರಖ್ಯಾತಿಯನ್ನು ಕಂಡು ಕರುಬಿ, ಮತ್ಸರದಿಂದ ಮನಸ್ಸನ್ನು ಕಹಿಮಾಡಿಕೊಂಡಿದ್ದಳೆಂದು ಹೇಳುತ್ತಾರೆ. ಅಂತೂ ಷಣ್ಮುಖವಡಿವು ಕನಸೆಲ್ಲ ಮಣ್ಣುಗೂಡಿತು. ಎಂಎಸ್ ಮತ್ತೆ ತಾಯಿಯತ್ತ ಸುಳಿಯಲೇ ಇಲ್ಲ! ಮಗಳು ಕುಂಜಮ್ಮನನ್ನು ಮುಂದೆ ತರಬೇಕೆಂದೇ ಆಕೆ ಬದುಕಿದ್ದುದು; ಮಗಳೇನೋ ಮುಂದೆ ಬಂದಳು. ತಾಯಿ ಮುಂದೆ ಬದುಕಿದ್ದರೂ ಅದು ಬದುಕಿನ ವೇಷ ತೊಟ್ಟ ಸಾವು ಅಷ್ಟೆ.

ಎಂಎಸ್ 1938ರ ಸುಮಾರಿನಲ್ಲಿ ಮಧುರೆಯನ್ನು ಗುಟ್ಟಿನಲ್ಲಿ ಬಿಟ್ಟು ಚೆನ್ನೈ ಸೇರಿಕೊಂಡಮೇಲೆ ತಾಯಿಯತ್ತ ಮತ್ತೆ ಅಡಿಯಿಡಲಿಲ್ಲ, ಕಣ್ಣು ಹೊರಳಿಸಲಿಲ್ಲ. ತಾಯಿ ತೀರಿಕೊಂಡದ್ದು 1962ರಲ್ಲಿ. ಇಪ್ಪತ್ತುನಾಲ್ಕು ವರ್ಷಗಳ ಕಾಲ ತಾಯಿ-ಮಗಳ ನೇರ ಸಂಪರ್ಕವಿಲ್ಲ. ಕೆಲವರು ಎಂಎಸ್ ಮೇಲೆ ದೂರು ಹೊರಿಸುವುದುಂಟು. ತನ್ನ ಇರವಿಗೆ, ಬೆಳವಣಿಗೆಗೆ, ಸಂಗೀತ ಸಂಸ್ಕಾರಕ್ಕೆ, ಪ್ರತಿಭಾಪ್ರಸಾರಕ್ಕೆ ಕಾರಣವಾಗಿ ಹಗಲಿರುಳು ಅದೊಂದೇ ಹವ್ಯಾಸವಾಗಿ, ದುಡಿದು ಬಾಳನ್ನು ಸವೆಸಿಕೊಂಡ ತಾಯಿಯನ್ನು ಹೀಗೆ ಕೈಬಿಡುವುದು ಸರಿಯೆ? ಬಡತನ, ರೋಗ, ದುಗುಡ, ದುಮ್ಮಾನಗಳಿಗೆ ಪಕ್ಕಾಗಿ ಅರೆಜೀವವಾಗಿದ್ದ ತಾಯಿಯನ್ನು ಕಲ್ಲೆದೆಯಿಂದ ಮರೆಯುವುದುಂಟೆ? ಮೂವರು ಮಕ್ಕಳಲ್ಲಿ ಅತಿಯಾದ ಮಮತೆಯಿದ್ದುದು ಈ ಕುಂಜಮ್ಮನ ಮೇಲೆ ಅಲ್ಲವೆ? ಆದರೆ ಸಂದರ್ಭದ ಒತ್ತಡವನ್ನು ಅರಿತುಕೊಳ್ಳಬೇಕು. ಎಂಎಸ್ ಅವರನ್ನು ತಮ್ಮ ಕಪಿಮುಷ್ಟಿಯಲ್ಲಿರಿಸಿಕೊಂಡಿದ್ದ ಸದಾಶಿವಂ ಷಣ್ಮುಖವಡಿವು ಎಂದರೆ ಉರಿದುಬೀಳುತ್ತಿದ್ದರು. ಅವಳ ಮಗ (ಎಂಎಸ್ ಅಣ್ಣ) ಶಕ್ತಿವೇಲ್ ಮೇಲೆ ಯುದ್ಧವನ್ನೇ ಹೂಡಿದ್ದರು. ತಾಯಿ-ಅಣ್ಣ ಇಬ್ಬರಿಗೂ ಸದಾಶಿವಂ ಎಂದರೆ ಅಷ್ಟೇ ಸಿಟ್ಟು. ಸಂಧಾನಕ್ಕೆ ಎಡೆಯೇ ಇರಲಿಲ್ಲ. ಇಂಥ ದುಷ್ಟನ ಕೈಹಿಡಿದು ತಮ್ಮನ್ನು ದೂರಮಾಡಿದಳೆಂದು ಕುಂಜಮ್ಮನ ಮೇಲೂ ಮುನಿಸು. ಹೀಗಿರುವಾಗ ಎಂಎಸ್ ಮಧುರೆಯಲ್ಲಿ ತೌರುಮನೆಗೆ ಹೋಗಿ ಬರುವುದಾದರೂ ಹೇಗೆ? ತಾಯಿಯ ಕಡೆಗಾಲದಲ್ಲಿ ನೆರವಾಗುವುದಾದರೂ ಹೇಗೆ?

ತಾಯಿಯ ಮೇಲೆ ಪ್ರೀತಿಯಿರಲಿಲ್ಲವೆಂದಲ್ಲ. ಆದರೆ ಅದರ ಅಭಿವ್ಯಕ್ತಿ ಸಾಧ್ಯವಿರದೆ ಒಳಗೇ ಅದೆಷ್ಟು ನೋವನ್ನನುಭವಿಸಿದರೋ ಯಾರು ಬಲ್ಲರು? ತಾಯ ಮೇಲಣ ಒಲವು, ಗಂಡನ ಕಟ್ಟುಪಾಡು ಎರಡರ ನಡುವೆ ಸಿಕ್ಕು ಯಾವ ಯಾತನೆಯನ್ನು ನುಂಗಿಕೊಂಡರೋ? ಚೆನ್ನೈನ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯ ನಲವತ್ತುಮೂರನೆಯ ಸಮ್ಮೇಳನದಲ್ಲಿ ಎಂಎಸ್ ಅಧ್ಯಕ್ಷ ಭಾಷಣ ಮಾಡುತ್ತ, ಮೊದಲಲ್ಲೇ "ನನ್ನ ಪ್ರೀತಿಯ ತಾಯಿ, ನನ್ನ ಮೊದಲ ಗುರು ಶ್ರೀಮತಿ ಷಣ್ಮುಖವಡಿವು ಅವರ ಚೇತನಕ್ಕೆ ನನ್ನ

ಸಾಷ್ಟಾಂಗನಮಸ್ಕಾರಗಳನ್ನು ಸಲ್ಲಿಸುತ್ತೇನೆ" ಎಂದು ತುಂಬಿದ ಹೃದಯದಿಂದ ನುಡಿದರು. ಮತ್ತೆ ತಮಗೆ ಸಂದ ಪುರಸ್ಕಾರಗಳಲ್ಲಿ ಪರಮೋಚ್ಚವೆನಿಸಿದ, ಗಂಡ ಸದಾಶಿವಂ ಕಣ್ಮರೆಯಾದ ಮೇಲೆ ತಮ್ಮ ಕಡೆಗಾಲದಲ್ಲಿ ಲಭಿಸಿದ, 'ಭಾರತರತ್ನ' ಪ್ರಶಸ್ತಿ 1998ರಲ್ಲಿ ಬಂದಾಗ "ಇದು ನನ್ನ ಪ್ರೀತಿಯ ತಾಯಿಯ ಆಶೀರ್ವಾದದಿಂದ ಬಂದದ್ದು" ಎಂದು ಗದ್ಗದಕಂಠದಿಂದ ಹೇಳಿದರು.

"ಹಿಂದೆ ಆಗಿಹೋದುದನ್ನು ಕುರಿತು ಈಗ ಚಿಂತಿಸಲೇಕೆ? ಇಂದು ಏನು ಪ್ರಸಕ್ತವೋ ಅಷ್ಟು ಮಾತ್ರ ನೋಡಬೇಕು. ಎಲ್ಲವೂ ಭಗವಂತ ಸಂಕಲ್ಪಿಸಿದಂತೆ ನಡೆಯುತ್ತದೆ. ನಮ್ಮದೇನಿದೆ?" ಇದು ಎಂಎಸ್ ಅವರದ್ದೇ ಮಾತು.

ತಾಯಿ ತೀರಿಕೊಂಡು ಹನ್ನೆರಡು-ಹದಿಮೂರು ವರ್ಷಗಳಾದ ಮೇಲೆ ಮಗ (ಎಂಎಸ್ ಅಣ್ಣ) ಶಕ್ತಿವೇಲ್ ತೀರಿಕೊಂಡರು. ಹೇಗೆ, ಎಲ್ಲಿ ಎಂಬುದು ತಿಳಿಯದು. ಸುದ್ದಿ ಎಂಎಸ್‌ಗೆ ತಿಳಿದದ್ದು ಸದಾಶಿವಂ ತಿಳಿದಮೇಲೆ ಐದಾರು ದಿನಗಳ ನಂತರವೇ! ಅದು ಏಕೆಂಬುದೂ ತಿಳಿಯದು. ಆಗ ಎಂಎಸ್ 'ಕಲ್ಕಿ ಗಾರ್ಡನ್ಸ್'ನಲ್ಲಿ ವೈಭವದಿಂದ ಇರುತ್ತಿದ್ದ ಕಾಲ; ಆದರೆ 'ಕಲ್ಕಿ' ಕಾರ್ಯಾಲಯದಲ್ಲಿ ಗೊಂದಲವೇರ್ಪಟ್ಟು 'ಕಲ್ಕಿ ಗಾರ್ಡನ್ಸ್' ಬಿಡದಿಯನ್ನು ಬಿಡುವ ಸಂದರ್ಭವೂ ಸನ್ನಿಹಿತವಾಗಿದ್ದಿತು. ಮಧುರೆಯಲ್ಲಿನ ಮನೆಯಲ್ಲಿ ಷಣ್ಮುಖವಡಿವು ಒಬ್ಬರೇ ಇರುತ್ತಿದ್ದರು; ಮಗ ಬೇರೆಲ್ಲಿಯೋ ಇರುತ್ತಿದ್ದರು. ಈಗ ಎಂಎಸ್‌ಗೆ ತೌರುಮನೆಯು ಬರಿದಾಗಿಬಿಟ್ಟಿತು. ತನ್ನವರೆಂದು ಹೇಳಿಕೊಳ್ಳುವವರು ಯಾರೂ ಇರಲಿಲ್ಲ. ಈ ದುಗುಡವೇನೋ ಅವರನ್ನು ಆವರಿಸಿದ್ದುದು ದಿಟ. ಆಗಾಗ ಅದರ ಪ್ರಸ್ತಾಪ ಮಾಡುತ್ತಿದ್ದರಂತೆ. 1998ರಲ್ಲಿ ತೀವ್ರಬೇನೆಯಿಂದ ಬಳಲುತ್ತಿದ್ದಾಗ ಮತ್ತೆ ಮತ್ತೆ 'ಅಮ್ಮ', 'ಅಪ್ಪ', 'ಅಣ್ಣ' ಎಂದು ಕನವರಿಸುತ್ತಿದ್ದರಂತೆ. ಚಿಕ್ಕಂದಿನ ನೆನಪು ಅವರನ್ನು ಕಾಡುತ್ತಲೇ ಇದ್ದಿರಬೇಕು.

ಪರಿಚ್ಛೇದ ಮೂರು

ಸಂತಗಾಯಕಿಯ ಸಿದ್ಧತೆ

೧

ಸದಾಶಿವಂ ಕಣ್ಣಿಗೆ ಎಂಎಸ್ ಮೊಟ್ಟಮೊದಲು ಬಿದ್ದಾಗ (ಎಂದರೆ 1936ರ ಜೂನ್ 30) ಇಪ್ಪತ್ತು ವರ್ಷದ ಚೆಲುವೆ; ಸಿರಿಕಂಠದ ಗಾಯಕಿಯೆಂದು ಆಗಲೇ ಹೆಸರಾಗಿದ್ದವಳು. ಮದುವೆಯಾದದ್ದು ನಾಲ್ಕು ವರ್ಷಗಳ ನಂತರ (1940ರ ಜುಲೈ 10). ಈ ನಡುವೆ ತಾಯಿಯೊಡನೆ ಎಂಎಸ್ ಮಧುರೆಯಿಂದ ಚೆನ್ನೈಗೆ ಬಂದದ್ದು, ತಾಯಿ ಚೆನ್ನೈನಿಂದ ಮಗಳನ್ನೂ ಅಟ್ಟಿಕೊಂಡು ಮಧುರೆಗೆ ಹಿಂದಿರುಗಿದುದು, ಮಗಳು ತಾನೊಬ್ಬಳೆ ಮಧುರೆಯನ್ನು ಬಿಟ್ಟು ಚೆನ್ನೈಗೆ ಬಂದುದು, ಸದಾಶಿವಂ ಜೊತೆಗೆ ತಿರುವಳ್ಳಿಕ್ಕೇಣಿಯ ಮನೆಯಲ್ಲಿ ನೆಲೆಸಿದುದು ಇಷ್ಟು ಅಂಕಗಳು ಮುಗಿದಿದ್ದವು. ಇದೊಂದು ಸ್ವಾರಸ್ಯದ ನಾಟಕವೇ. ಸದಾಶಿವಂಗೆ ಆಗಲೆ ಮದುವೆಯಾಗಿದ್ದು (1930ರ ಸುಮಾರಿಗೆ), ಎಳೆಯ ಇಬ್ಬರು ಹೆಣ್ಣು ಮಕ್ಕಳೂ ಇದ್ದವು. ಮದುವೆಯಲ್ಲಿ ಹದಿನಾರು ವರ್ಷದವಳಾದ ಪಾರ್ವತಿ (ಅಪೀತಕುಚಾಂಬಾಳ್) (ಸದಾಶಿವಂ ಹೆಂಡತಿ) ಸುಖ ಕಾಣದೆ ತೌರುಮನೆಯನ್ನು ಸೇರಿ, ಅಲ್ಲಿ ಬೇನೆಯಿಂದಲೋ ಬಾವಿಗೆ ಬಿದ್ದೋ 1939ರಲ್ಲಿ ತೀರಿಕೊಂಡಳು.ಗಂಡನಿಗೂ ತನಗೂ ನಡುವೆ ಬಂದ ಎಂಎಸ್ ಇದಕ್ಕೆ ಕಾರಣರಾದರೆಂದು ಬೇರೆ ಹೇಳಬೇಕಾಗಿಲ್ಲ. ಆಕೆ ತೀರಿಕೊಂಡ ಹೊಸದರಲ್ಲೇ ಸದಾಶಿವಂ ಚೆನ್ನೈ ನೆರೆಯ

ತಿರುನೀರ್ಮಲೈ ಗುಡಿಯಲ್ಲಿ ಎಂಎಸ್‌ರನ್ನು ಮದುವೆಯಾದುದು ಈ ಘಟ್ಟದಲ್ಲಿ ಕಡೆಯ ಅಂಕ. ಅದಕ್ಕೆ ಮೊದಲೇ ಸದಾಶಿವಂ 'ಆನಂದ ವಿಕಟನ್' ಪತ್ರಿಕೆಯ ಉದ್ಯೋಗವನ್ನೂ ಬಿಟ್ಟಿದ್ದರು. ಅಲ್ಲಿದ್ದುದು ಒಂದೆರಡು ವರ್ಷಗಳಷ್ಟೇ; ಎಂಎಸ್ ಪರಿಚಯವಾದುದು ಆ ಉದ್ಯೋಗದ ಪ್ರಯೋಜನ. ಅನಂತರ 1938ರಲ್ಲಿ ತಮ್ಮದೇ ಆದ ಚಂದ್ರಪ್ರಭಾ ಸಿನಿ(ಮೂವಿ)ಟೋನ್ ಚಲಚ್ಚಿತ್ರ ಉದ್ಯಮವನ್ನು ಆರಂಭಿಸಿದರು. ಎಂಎಸ್ ಸಂಪರ್ಕ ಮೊದಲಾಗಿ ಎರಡು ವರ್ಷಗಳ ನಂತರ; ಮದುವೆಗೆ ಎರಡು ವರ್ಷಗಳ ಮೊದಲು. ಸದಾಶಿವಂ ಫ್ರೆಡರಿಕ್ ಜಿ. ನಟೇಶಯ್ಯರೆಂಬ ಸಾಹಸಿಯ ಜೊತೆಗೆ (ರೈಲ್ವೆ ಉದ್ಯೋಗದಲ್ಲಿದ್ದು ಮೇಲಧಿಕಾರಿಗಳ ಒಲುಮೆಗಾಗಿ, ತನ್ನ ಅಭ್ಯುದಯಕ್ಕಾಗಿ, ಕ್ರೈಸ್ತನಾಗಿ ಮತಾಂತರಗೊಂಡು, ಮತ್ತೆ ಹಿಂದುವಾಗಿ ಹಿಂದಿರುಗಿದವರು) 'ಸೇವಾಸದನ'ವೆಂಬ ಚಲಚ್ಚಿತ್ರವನ್ನು ತಯಾರಿಸುವುದರಲ್ಲಿದ್ದರು. ಎಂಎಸ್ ಸಂಪರ್ಕದ ಸ್ಫೂರ್ತಿ ಕಾರಣವಿದ್ದೀತು. ಮುನ್‌ಷಿ ಪ್ರೇಮಚಂದರ ಹಿಂದಿ ಕತೆಯನ್ನು ಅಂಬುಜಮ್ಮಾಳ್ ಎಂಬಾಕೆ ತಮಿಳಿಗೆ ಅನುವಾದ ಮಾಡಿ 'ಆನಂದ ವಿಕಟನ್' ಪತ್ರಿಕೆಯಲ್ಲಿ ನೀಳ್ಗತೆಯಾಗಿ ಪ್ರಕಟಿಸಿದ್ದರು. ಇದೇ ಈ ಚಲಚ್ಚಿತ್ರಕ್ಕೆ ವಸ್ತುವಾಯಿತು.



ಎಂಎಸ್

ಚಿತ್ರದ ನಿರ್ದೇಶನಕ್ಕೆ ಗೊತ್ತುಮಾಡಲ್ಪಟ್ಟವರು ಹಿಂದೆಯೇ ಉಲ್ಲೇಖಕ್ಕೆ ಬಂದಿರುವ ಕುಂಭಕೋಣದ ಕೆ. ಸುಬ್ರಹ್ಮಣ್ಯಂ; ನಟಿ ಮಧುರೆಯ ಎಸ್. ಡಿ. ಸುಬ್ಬುಲಕ್ಷ್ಮಿಯ ಗಂಡ. ಎಂಎಸ್ ಅದರಲ್ಲಿ ಅಭಿನಯಿಸಬೇಕೆಂದು ಸದಾಶಿವಂ ಹಟ. ಸುಬ್ರಹ್ಮಣ್ಯಂ ಅನುಮಾನಪಟ್ಟು ಕಡೆಗೆ ಒಪ್ಪಿದರು. ಮೊದಲಾಗಿ, ಇದು ಎಂಎಸ್‌ಗೇ ಒಲ್ಲದ ಕೆಲಸ. ತಾಯಿಯಂತೆ ಅವರೂ ಚಲಚ್ಚಿತ್ರಗಳ ವಿರೋಧಿಯೇ. ಒಲ್ಲೆನೆಂದು ಗೋಗರೆದರು. ಆದರೆ ಸದಾಶಿವಂ ಒತ್ತಡಕ್ಕೆ ವಿಧಿಯಿಲ್ಲದೆ ಮಣಿಯಬೇಕಾಯಿತು. ಎರಡನೆಯದಾಗಿ, ಅಭಿನಯದ ವಿಚಾರ ಅವರಿಗೆ ಏನೇನೂ ತಿಳಿಯದು. ಅವರಿಗೆ ಅಭಿನಯದ ಮೊದಲ ಪಾಠಗಳನ್ನು ಕಲಿಸಲು ನಿರ್ದೇಶಕ ಸುಬ್ರಹ್ಮಣ್ಯಂ, ನಟಿ ಎಸ್. ಡಿ. ಸುಬ್ಬುಲಕ್ಷ್ಮಿ ತುಂಬಾ ಹೆಣಗಬೇಕಾಯಿತು. ಅಂತೂ ಇಂತೂ ಎಂಎಸ್ ನಟಿಯಾಗಿ (ಸುಮತಿ) ತೆರೆಯ ಮೇಲೆ ಕಾಣಿಸಿಕೊಳ್ಳುವಂತಾಯಿತು.

ಆಗ ಎಂಎಸ್ ಸದಾಶಿವಂ ಮನೆಯಲ್ಲೇ ಇರುತ್ತಿದ್ದರು, ಮದುವೆಯಾಗದೆ. ಮನೆಯಲ್ಲಿ ಇಬ್ಬರು ಎಳೆಯ ಮಕ್ಕಳು, ಮನೋರೋಗಕ್ಕೆ ತುತ್ತಾಗಿ ಪರಿತಪಿಸುತ್ತಿದ್ದ ಹೆಂಡತಿ, ಸೋದರರು, ಇತರ ನೆಂಟರು, ವಯಸ್ಸಾದ ತಾಯಿ. ಎಂಎಸ್‌ರನ್ನು ಹೊರಗೆ ಹಾಕುವಂತೆ ಹಿರಿಯರೆಲ್ಲ ಹೇಳಿದರು; ಯಾರ ಮಾತನ್ನೂ ಕೇಳುವವರಲ್ಲ ಸದಾಶಿವಂ. ಈ ಪರಿಸ್ಥಿತಿಯಲ್ಲಿ ಎಂಎಸ್ ನಡೆದುಕೊಂಡ ಬಗೆ ದಿಟಕ್ಕೂ ಅನ್ಯಾದೃಶವಾದುದು. ಮನೆಯಲ್ಲಿರುವಾಗ ಮನೆಯಲ್ಲಿದ್ದ ಎಲ್ಲರನ್ನೂ ತನ್ನವರೆ ಎಂಬಂತೆ ಕಂಡುಕೊಂಡು, ಎಲ್ಲರ ಅನುಕೂಲ-ಹಿತಗಳನ್ನು ಗಮನಿಸಿ ಮನೆಯ ಕೆಲಸಗಳನ್ನೆಲ್ಲ ನೋಡಿಕೊಂಡು, ಸಮಾಧಾನಚಿತ್ತರಾಗಿ ಇರುತ್ತಿದ್ದರು. ಆ ಮನೆಯಲ್ಲಿ ಆಕ್ರೋಶ, ಬೇಸರ, ಕಣ್ಣೀರು, ಹೊಟ್ಟೆಯುರಿ ಎಲ್ಲವೂ ಕುಣಿದಾಡುತ್ತಿರುವಾಗ, ಶಾಂತಿಯೇ ಮೈವೆತ್ತು ಬಂದಂತೆ ಇದ್ದವರು ಅವರೊಬ್ಬರೇ. ಸದಾಶಿವಂ ತಾಯಿ ಮಂಗಳಾಂಬಾಳ್ ಮಗನಿಗೆ ಎಷ್ಟೋ ಬುದ್ಧಿವಾದ ಹೇಳಿದರು, ಮಗ ಕೇಳದಿದ್ದಾಗ ಬೇಸತ್ತು "ನಿನ್ನ ಪಾಡು, ಏನಾದರೂ ಮಾಡಿಕೋ, ನಾನಂತೂ ಇಲ್ಲಿ ಇರುವುದಿಲ್ಲ!" ಎಂದು ಗಂಟು-ಮೂಟೆ ಕಟ್ಟಿ ಕಾಶಿಗೆ ಹೊರಟುಬಿಟ್ಟರು. ಹೊರಡುವ ಮುನ್ನ ಎಂಎಸ್ ಅವರನ್ನೇ ಕರೆದು, "ಅಮ್ಮಾ, ನಿನಗೆ ಎಲ್ಲವೂ ತಿಳಿದಿದೆ. ನೀನೇ

ಇನ್ನು ಮನೆಯನ್ನು ನೋಡಿಕೊಳ್ಳಬೇಕು. ಅಂಬಿ (ಸೋದರಳಿಯ) ಕಾಲೇಜಿಗೆ ತಪ್ಪದೆ ಹೋಗುವಂತೆ ನೋಡಿಕೋ. ಹೆಣ್ಣು ಮಕ್ಕಳಿಗೆ (ರಾಧಾ, ವಿಜಯಾ)ಮದುವೆ ಮಾಡಿಸು. ನೀನು ದೈವಭಕ್ತಿಯಿರುವವಳು. ಹಬ್ಬ-ಹುಣ್ಣಿಮೆಗಳು ಮನೆಯಲ್ಲಿ ಪದ್ಧತಿಯಂತೆ ನಡೆಯುವಂತೆ ನೋಡಿಕೋ. ನಮ್ಮ ಮನೆಯಲ್ಲಿ ನವರಾತ್ರಿ ಕೋಲ ಮತ್ತು ವರಲಕ್ಷ್ಮೀವ್ರತ ಎರಡನ್ನು ಮಾಡುವ ವಾಡಿಕೆಯಿಲ್ಲ; ನೆನಪಿನಲ್ಲಿಟ್ಟುಕೋ. ಎಲ್ಲವೂ ನಿನಗೆ ಸೇರಿದ್ದು" ಎಂದು ಪ್ರೀತಿಯಿಂದಲೇ ಹೇಳಿಹೋದರು.



ನಾಟ್ಯಾಚಾರ್ಯ ವಳುವೂರು ರಾಮಯ್ಯಪಿಳ್ಳೆ

ಅವರು ಹೇಳಿದ್ದನ್ನು ಎಂಎಸ್ ಚಚು ತಪ್ಪದೆ ನಡೆಸಿದರು. ಮಕ್ಕಳನ್ನು ಚೆನ್ನಾಗಿ ನೋಡಿಕೊಂಡರು. ಹುಣ್ಣಿಮೆಯ ರಾತ್ರಿ ಮಕ್ಕಳನ್ನೆಲ್ಲ ಸುತ್ತ ಕೂರಿಸಿಕೊಂಡು ವೆತ್ತಕೊಳಂಬು ಮೊದಲಾದ ತಿನಿಸುಗಳನ್ನು ಕೈತುತ್ತು ಹಾಕುವುದು. ಎಲ್ಲರಿಗೂ ಎಂಎಸ್ ತಾಯಿಯೇ ಆಗಿಬಿಟ್ಟರು. ಸದಾಶಿವಂ ಮೊದಲ ಮಗಳು ರಾಧಾ ಆಗ ಎರಡು ವರ್ಷದ ಮಗು. ಅವಳಿಗೆ ಸಂಗೀತ ಕಲಿಸಿ, ತನ್ನೊಂದಿಗೆ ಹಾಡಲು ತಯಾರುಮಾಡಿದರು. ಮುಂದೆ ಅವಳು

ಎಂಎಸ್‌ಗೆ ನೆಚ್ಚಿನ ಸಂಗಾತಿಯಾದಳು, ವೇದಿಕೆಯ ಮೇಲೆ ಮಾತ್ರವಲ್ಲದೆ ಬದುಕಿನಲ್ಲೂ ನೆರವಾದಳು. ಎಂಎಸ್ ಅವಳಿಗೆ ನರ್ತನವನ್ನೂ ಪಾಠ ಹೇಳಿಸಿದರು, ಸುಪ್ರಸಿದ್ಧ ನಾಟ್ಯಾಚಾರ್ಯರಾಗಿದ್ದ ವಳುವೂರು ರಾಮಯ್ಯಪಿಳ್ಳೆಯ ಬಳಿ. ರಾಧಾ ಮತ್ತು 'ಕಲ್ಕಿ' ಕೃಷ್ಣಮೂರ್ತಿಯ ಮಗಳು ಆನಂದಿ ಇಬ್ಬರೂ ಕಲಿಯುತ್ತಿರುವಾಗ ತಾವೂ ಪಕ್ಕದಲ್ಲೇ ಕೂತಿದ್ದು ಭರತನಾಟ್ಯವನ್ನೆಲ್ಲ ಪರೋಕ್ಷವಾಗಿ ಕಲಿತರು. ಅದರ ಮರ್ಮವನ್ನೆಲ್ಲ ಅರಿತುಕೊಂಡರು. ಹೊಸತನ್ನು ಕಲಿಯುವ ಆಸೆ ಅವರಿಗೆ. ರಾಧಾ ಅಭಿನಯಕ್ಕೆ ತಾವು ಹಾಡುತ್ತಲೂ ಇದ್ದರು. ಅವಳಿಗೆ ಮದುವೆಯನ್ನೂ ಮಾಡಿಸಿದರು; ಮುಂದೆ ಆಕೆ ರಾಧಾ ವಿಶ್ವನಾಥ್ ಆದರು. ಬಹಳ ವರ್ಷಗಳ ನಂತರ ಆಕೆ ಭೀಕರವಾದ ಬೇನೆಯೊಂದಕ್ಕೆ (ಮೆನನ್‌ಜೈಟಿಸ್) ತುತ್ತಾಗಿಬಿಟ್ಟುದು, ಎಂಎಸ್‌ಗೆ ಸಹಿಸಲಾರದ ದುಗುಡವಾಯಿತು. ಅವಳನ್ನೂ ಅವಳ ತಂಗಿ ವಿಜಯಾನನ್ನೂ ತಮ್ಮ ಮಕ್ಕಳಂತೆಯೆ ನೋಡಿಕೊಂಡರು. ರಾಧಾ ಎಂಎಸ್ ಒಂದಿಗೆ ಐವತ್ತು ವರ್ಷಗಳು 'ಪಿನ್‌ಪಾಟು' ಹಾಡುತ್ತಿದ್ದರು. ಎಂಎಸ್ ಸಂಗೀತಾವಧಿಯ ಕಡೆಯ ಹನ್ನೆರಡು ವರ್ಷಗಳು ಎಂಎಸ್ ಒಬ್ಬರೇ ಹಾಡಬೇಕಾಯಿತು.

೨

ಎರಡನೆಯ ಎಂಎಸ್ ಚಿತ್ರ 'ಶಕುಂತಲೆ'. ಮಹಾಕವಿ ಕಾಳಿದಾಸನ ಸುಪ್ರಸಿದ್ಧ ಸಂಸ್ಕೃತ ನಾಟಕವನ್ನಧಿಕರಿಸಿದ್ದು. ವೈ. ವಿ. ರಾವ್ ಎಂಬ ಪ್ರತಿಭಾಶಾಲಿಯ ನಿರ್ದೇಶನ; ಪಾಪನಾಶಂ ಶಿವನ್ (1890-1973) ಅವರ ಸಂಗೀತ ನಿರ್ದೇಶನ. ಸುಪ್ರಸಿದ್ಧ ಗಾಯಕ ಜಿ. ಎನ್. ಬಾಲಸುಬ್ರಹ್ಮಣ್ಯಂ (1910-1965) ಅವರೇ ದುಷ್ಯಂತ; ಎಂಎಸ್ ಶಕುಂತಲೆ; 'ಕೋಕಿಲಗಾನ ಮಧುರೆ ಎಂ. ಎಸ್. ಸುಬ್ಬುಲಕ್ಷ್ಮಿ.' ಎಲ್ಲಿಸ್ ಆರ್ ಡಂಗನ್ ಎಂಬ ಅಮೇರಿಕನ್ ತಜ್ಞನ ನೆರವಿನಿಂದ ಸಿದ್ಧವಾದ ಈ ಚಿತ್ರದಲ್ಲಿ ಟಿ. ಜಿ. ರಾಘವಾಚಾರಿ ಎಂಬ ಮೇಧಾವಿ (ತಮಿಳು, ಸಂಸ್ಕೃತ, ಇಂಗ್ಲಿಷ್ ಮೂರೂ ಭಾಷೆಗಳನ್ನು ಚೆನ್ನಾಗಿ ಬಲ್ಲಾತ) ಸಂಭಾಷಣೆಗಳನ್ನು ಬರೆದಿದ್ದರು. ಒಟ್ಟಿನಲ್ಲಿ

ಯಶಸ್ವಿಯಾದ ಈ ಚಿತ್ರದಲ್ಲಿ ಎಂಎಸ್ ಮತ್ತು ಜನಪ್ರಿಯ ತರುಣ ಸಂಗೀತ ವಿದ್ವಾಂಸ ಜಿ. ಎನ್. ಬಾಲಸುಬ್ರಹ್ಮಣ್ಯಂ (ಜಿಎನ್‌ಬಿ) ಅವರು ಶೃಂಗಾರದ ಚೌಕಟ್ಟಿನಲ್ಲಿ ಹತ್ತಿರ ಬಂದದ್ದು ಸದಾಶಿವಂನ ಕಸಿವಿಸಿಗೆ ಕಾರಣವಾಯಿತಂತೆ. ಇದರ ಅಳುಕು, ಆತಂಕ ಇದ್ದಿತಾಗಿ ಜಿಎನ್‌ಬಿ ಬದಲು ಆರ್. ಪಾರ್ಥಸಾರಥಿಯನ್ನೋ ವಿ. ವಿ. ಶಠಕೋಪನ್‌ರನ್ನೋ (ಇಬ್ಬರೂ ಚೆಲುವರು, ಗಾಯಕರು) ಆರಿಸಿಕೊಳ್ಳಬೇಕೆಂದು ಸದಾಶಿವಂ ಆಗ್ರಹಪಡಿಸಿದ್ದರೆಂದೂ, ಅದು ಕೈಗೂಡಲಿಲ್ಲವೆಂದೂ ಹೇಳುತ್ತಾರೆ. ಅಂತೂ ಈ ಚಿತ್ರ 1940 ರಲ್ಲಿ ಹೊರಬಂದಿತು; ಅದೇ ವರ್ಷ ಸದಾಶಿವಂ ಎಂಎಸ್‌ರನ್ನು ಮದುವೆಯಾಗಿಬಿಟ್ಟರು.

ಇದಾದ ಎಂಟು ತಿಂಗಳುಗಳಲ್ಲೇ ಮೂರನೆಯ ತಮಿಳು ಚಿತ್ರ 'ಸಾವಿತ್ರಿ' ಸಿದ್ಧವಾಯಿತು. ಅದರಲ್ಲಿ ಎಂಎಸ್ ಅಭಿನಯಕ್ಕೆ ಇನ್ನೊಂದು ತಿರುವು. ಶಕುಂತಲೆಯಲ್ಲಿನ ಶೃಂಗಾರ ಇರದೆ, ನಾರದರ ಭಕ್ತಿ ಇದ್ದಿತು. ಮುಂದಿನ ಮೀರೆಗೆ ಸಿದ್ಧತೆಯಾಗಿ; ಎರಡನೆಯ ಅಂಕಕ್ಕೆ ನಾಂದಿಯಾಗಿ.

ಅದಕ್ಕೆ ರಾಯಲ್ ಟಾಕೀ ಎಂಬ ಮಧುರೆಯ ವಿತರಣ ಸಂಸ್ಥೆಯವರು ಆರ್ಥಿಕ ನೆರವನ್ನು ನೀಡಿದ್ದರು. ವೈ. ವಿ. ರಾವ್ ನಿರ್ದೇಶಕ. ನಾಯಕಿಯ ಪಾತ್ರ ಮರಾಠೀ ಚಲಚ್ಚಿತ್ರರಂಗದ ಪ್ರಖ್ಯಾತ ತಾರೆ ಶಾಂತಾ ಆಪ್ಟೆಯವರದ್ದು. ಎಂಎಸ್ ನಾರದರ ಪಾತ್ರವಹಿಸಿದ್ದರು. ಗಂಡುಪಾತ್ರವೆಂಬ ಇರಸುಮುರಸು ಅವರಿಗೂ ಸದಾಶಿವಂಗೂ ಇದ್ದಿತಾದರೂ, ಅಲ್ಲಿ ಅವರ ಗಾಯನವೇ ಮುಖ್ಯವಾಗಿದ್ದಿತಾಗಿ, ಚಿತ್ರ ಯಶಸ್ವಿಯಾಯಿತು. ಆಗ ಹಾಡಿದ ರಾಗಮಾಲಿಕೆಗಳು, ಸದಾಶಿವಬ್ರಹ್ಮೇಂದ್ರರ ಕುರಂಜಿರಾಗದ 'ಬ್ರೂಹಿ ಮುಕುಂದೇತಿ' ತುಂಬ ಜನಪ್ರಿಯವಾದುವು. ಈ ಚಿತ್ರದಿಂದ ಎಂಎಸ್‌ಗೆ ಬಂದ ಒಂದು ಲಕ್ಷ ರೂಪಾಯಿಗಳ ನೆರವಿನಿಂದ ಸದಾಶಿವಂ 'ಕಲ್ಕಿ' ಪತ್ರಿಕೆಯನ್ನು ಆರಂಭಿಸಿದರು (1941ರ ಆಗಸ್ಟ್ ತಿಂಗಳಲ್ಲಿ); ತಮ್ಮ ಮಿತ್ರರೂ, 'ಆನಂದ ವಿಕಟನ್' ಪತ್ರಿಕೆಯ ಜನಪ್ರಿಯ ಸಂಪಾದಕರೂ, 'ಕಲ್ಕಿ'ಯೆಂಬ ಹೆಸರಿನಿಂದ ಬರೆಯುತ್ತಿದ್ದವರೂ ಆಗಿದ್ದ ಆರ್. ಕೃಷ್ಣಮೂರ್ತಿ ಇದರ ಸಂಪಾದಕರಾದರು. ಎರಡು ತಿಂಗಳ ನಂತರ 'ಸಾವಿತ್ರಿ' ಹೊರಬಂದಿತು.

ಇದರ ನಿರ್ಮಾಣವು ಕಲ್ಕತ್ತೆಯ 'ನ್ಯೂ ಥಿಯೇಟರ್ಸ್'ನಲ್ಲೇ ನಡೆಯಿತು. ಆಗ ಎಂಎಸ್ ಅವರ ಹಾಡುಗಳನ್ನು ಮೆಚ್ಚಿಕೊಂಡವರಲ್ಲಿ ಪಂಕಜ ಮಲ್ಲಿಕ್, ಪಹಾಡಿ ಸನ್ಯಾಲ್, ಕಾನನಬಾಲಾ, ಕೆ. ಎಲ್. ಸೈಗಲ್ ಮೊದಲಾದವರಿದ್ದರು. ಆದರೆ ಇಲ್ಲಿನ ಸಂಗೀತ 'ಫಿಲ್ಮಿ' ಎಂಬ ಗೋತ್ರಕ್ಕೆ ಸೇರಿದ್ದಿತು.



ಎಂಎಸ್

ಎಂಎಸ್ ಚಲಚ್ಚಿತ್ರದ ಒತ್ತಡದಿಂದ ಬಿಡಿಸಿಕೊಳ್ಳಲು ಹಾತೊರೆಯುತ್ತಿದ್ದ ಕಾಲದಲ್ಲಿ ವ್ಯವಹಾರ ವಿಚಕ್ಷಣರಾದ ಸದಾಶಿವಂ ಎಂಎಸ್ ಅವರಿಗೊಂದು ರಾಷ್ಟ್ರವ್ಯಾಪಕವಾದ ಯಶಸ್ಸನ್ನು ಗಳಿಸಿಕೊಡಬೇಕೆಂದು ನಿರ್ಧರಿಸಿದರು. ಇಲ್ಲಿಯವರೆಗೂ ಅವರ ಪ್ರತಿಭೆ ಹರಡಿದ್ದುದು ತಮಿಳುನಾಡಿನಲ್ಲಿ ಮತ್ತು ನೆರೆಯ ನಾಡುಗಳಲ್ಲಷ್ಟೆ. 'ಸೇವಾಸದನ' ತಮಿಳು ಮೂಲದ್ದು; 'ಶಕುಂತಲೆ' ಸಂಸ್ಕೃತ ನಾಟಕವನ್ನಾಧರಿಸಿದ್ದರೂ ತಮಿಳು ಸಂಸ್ಕೃತಿಯ ಕಳೆಯೇ ಅದರಲ್ಲಿದ್ದುದು; ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ ಅವರ ನಟನೆ, ತವಮಣಿಯ ನೃತ್ಯ ಇತ್ಯಾದಿ. 'ಸಾವಿತ್ರಿ'ಯೂ ಹೆಚ್ಚೂಕಡಮೆ ದಕ್ಷಿಣ ಭಾರತಕ್ಕೇ ಮೀಸಲು. ಆದರೆ, 'ಶಕುಂತಲೆ' ಯಾದ ಎಂಎಸ್ ಶೃಂಗಾರನಾಯಕಿ,

'ಸಾವಿತ್ರಿ'ಯ ನಾರದರಾಗಿ ಭಕ್ತಶಿರೋಮಣಿ. ಈ ಪರಿವರ್ತನೆಯನ್ನು ಪೂರ್ಣಗೊಳಿಸಿ, ಶೃಂಗಾರವನ್ನು ಸಂಪೂರ್ಣವಾಗಿ ಅಳಿಸಿ ಹಾಕಿ ಭಕ್ತಿಭಾವವನ್ನು ಎಂಎಸ್ ಪಾಲಿಗೆ ಊರ್ಜಿತಗೊಳಿಸುವ ಅಗತ್ಯವನ್ನು ಸದಾಶಿವಂ ಕಂಡುಕೊಂಡರು. ಎಂಎಸ್ ಪ್ರಖ್ಯಾತಿಯನ್ನು ತಮಿಳುನಾಡಿನಿಂದ ಹೊರಗೂ, ಅದರಲ್ಲೂ ಉತ್ತರ ಭಾರತದಲ್ಲಿ, ಹರಡಬೇಕೆಂದು ಹೊರಟರು. ಅದಕ್ಕಾಗಿ ದೇಶದಾದ್ಯಂತ ಸಂತಶ್ರೇಣಿಯಲ್ಲಿ ಅಗ್ರಗಣ್ಯ ಮಹಿಳೆಯಾದ, ಜನಪ್ರಿಯಳೂ ಅಧ್ಯಾತ್ಮಸಂಪನ್ನಳೂ ಸರ್ವಸಂಮಾನ್ಯಳೂ ಆದ ಮೀರಾಬಾಯಿ (ಹದಿನಾರನೆಯ ಶತಮಾನದ ರಾಜಸ್ಥಾನೀ ಭಕ್ತೆ)ಯನ್ನು ಕುರಿತಂತೆ ಒಂದು ಚಿತ್ರವನ್ನು ತಯಾರಿಸುವ ಹಂಚಿಕೆಯನ್ನು ಹಾಕಿಕೊಂಡರು. ಎಂಎಸ್ ಭಕ್ತ ಮೀರೆಯಾಗಬೇಕು, ಸಂತಳಾಗಿ ಮೆರೆಯಬೇಕು, 'ಶಕುಂತಲೆ'ಯಿಂದ ತಲೆಯೆತ್ತಿಕೊಂಡಿರಬಹುದಾದ ಕುಖ್ಯಾತಿಯನ್ನು ಜನ ಮರೆಯಬೇಕು ಎಂಬುದು ಅವರ ಉದ್ದೇಶವಾಗಿತ್ತು.

ಹಿಂದಣ ಚಿತ್ರಗಳನ್ನು ನಿರ್ದೇಶಿಸಿದ ವೈ. ವಿ. ರಾವ್ 1938ರಷ್ಟು ಹಿಂದೆಯೆ ಇದೇ ವಸ್ತುವನ್ನು ಕುರಿತು ಚಿತ್ರವೊಂದನ್ನು ತಯಾರಿಸಿದ್ದರು; ಆದರೆ ಅದು ಯಶಸ್ಸು ಕಾಣಲಿಲ್ಲ. ಈಗ ಸದಾಶಿವಂ ತಾವೇ ತಮ್ಮ 'ಮೀರಾ' ಚಿತ್ರವನ್ನು ನಿರ್ದೇಶಿಸಿದರು. ಅದೇ ಎಲ್ಲಿಸ್ ಡಂಗನ್ ನೆರವಿಗೆ ಬಂದ. ಈತ ಅಮೇರಿಕ ದೇಶದವನು. ಒಹಾಯೋದಲ್ಲಿ ಹುಟ್ಟಿದಾತ, ಹಾಲಿವುಡ್‌ನಲ್ಲಿ ಬೆಳೆದಾತ. ಅವನಿಗೆ ತಮಿಳು ಭಾಷೆ ಏನೇನೂ ತಿಳಿಯದು. ಆದರೆ ರಂಗಸಿದ್ಧತೆಯಲ್ಲಿ, ಪಾತ್ರಸಜ್ಜಿಕೆಯಲ್ಲಿ, ಭಾವನಿರೂಪಣೆಯಲ್ಲಿ ಪರಿಣತ. ಹಲವು ತಮಿಳು ಚಿತ್ರಗಳನ್ನು ನಿರ್ದೇಶಿಸಿ ಹೆಸರಾಗಿದ್ದ. ಈಗ ಅವನಿಗೆ ತಮಿಳು ತಿಳಿಯದು, ಎಂಎಸ್‌ಗೆ ಇಂಗ್ಲಿಷ್ ಬಾರದು. ಆದರೂ ಅವರಿಬ್ಬರ ನಡುವೆ ವಿಚಾರವಿನಿಮಯ ಹೇಗೋ ತುಂಬ ಸಮರ್ಪಕವಾಗಿದ್ದಿತು, ಸುಲಭವೂ ಆಗಿದ್ದಿತು. ತಮ್ಮ ಸಾಹಿತಿ-ಸಂಪಾದಕ ಮಿತ್ರ 'ಕಲ್ಕಿ' ಕೃಷ್ಣಮೂರ್ತಿಯೇ ಸಂಭಾಷಣೆಗಳನ್ನು ಬರೆದರು. ಸಂಗೀತ ನಿರ್ದೇಶನ ಮಾಡಿದವರು ಪಾಪನಾಶಂ ಶಿವನ್ ಅವರೇ. 'ಮೀರೆ'ಯಾಗಿ ಕಾಣಿಸಿಕೊಳ್ಳುವ ಎಂಎಸ್‌ಗೆ ನಾಯಕನಾಗಲಿ, ಪ್ರತಿನಾಯಕನಾಗಲಿ ಯಾರೂ ಇರದೆ, ಸ್ವತಂತ್ರವಾಗಿ ಸಹಜವಾಗಿ

ಅಭಿನಯಿಸುವ ಅವಕಾಶವಿದ್ದಿತು. ದ್ವಾರಕೆಯ ಬೀದಿಗಳಲ್ಲಿ ಭಜನೆ ಮಾಡುತ್ತ ಹೋಗುವ ಎಂಎಸ್ ದಿಟವಾಗಿ ಭಕ್ತೆ ಮೀರೆಯೇ ಆಗಿಬಿಟ್ಟರು! ಈ ತಮಿಳು ಚಿತ್ರವು 1944ರ ದೀಪಾವಳಿಯಂದು ಹೊರಬಂದಿತು. ಮರುವರ್ಷ ಇದು ಹಿಂದಿಯಲ್ಲೂ ಬೆಳಕು ಕಂಡಿತು. ದಕ್ಷಿಣ ಭಾರತದ ಎಂಎಸ್ ಉತ್ತರ ಭಾರತದ ಮೀರೆಯಾದದ್ದು ಒಂದು ಅಂಕ. ಉತ್ತರ ಭಾರತದಲ್ಲೆಲ್ಲೂ ಎಂಎಸ್ ಹೆಸರಾದರು.

ಸದಾಶಿವಂ ರಾಜಾಜಿಯ ಮೂಲಕ ಮಹಾತ್ಮಾ ಗಾಂಧಿ, ಜವಹರಲಾಲ ನೆಹ್ರು, ಮುಂತಾದ ರಾಷ್ಟ್ರನಾಯಕರ ಪರಿಚಯವನ್ನೂ ಪಡೆದುಕೊಂಡಿದ್ದುದು ಈಗ ನೆರವಿಗೆ ಬಂದಿತು. ನಾಡಿನ ನೇತಾರರು ಎಲ್ಲರೂ ಈ ಚಿತ್ರವನ್ನು ನೋಡಿ ಬೆರಗಾದರು, ಪ್ರಭಾವಿತರಾದರು, ಎಂಎಸ್ ಆರಾಧಕರಾದರು. ಚಿತ್ರದಲ್ಲೇ ಎಂಎಸ್ ಅವರನ್ನು ಕುರಿತು ಶ್ರೀಮತಿ ಸರೋಜಿನಿ ನಾಯ್ಡು ಪ್ರಶಂಸೆಯ ಮಾತುಗಳನ್ನಾಡಿದರು. "ಎರಡು ಗಂಟೆ ಈಕೆಯ ಗಾಯನವನ್ನು ಕೇಳಿದಮೇಲೆ ಈಕೆಯೇ ಮೀರೆ ಎಂಬುದು ಸಿದ್ಧವಾಗುತ್ತದೆ; ಮೀರೆಯೇ ಮತ್ತೆ ಜನ್ಮವೆತ್ತಿ ಬಂದಿದ್ದಾಳೆ" ಎಂದು ನುಡಿದರು. ಚಿತ್ರದಲ್ಲಿನ ಭಜನೆಗಳು ಮಹಾತ್ಮಾ ಗಾಂಧಿಯವರ ಹೃದಯವನ್ನು ಸೂರೆಗೊಂಡವು. ಆವರೆಗೆ ಯಾವ ದಕ್ಷಿಣ ಭಾರತದ ಗಾಯಕನಾಗಲಿ ಗಾಯಕಿಯಾಗಲಿ ಹೀಗೆ ದೇಶದಾದ್ಯಂತ ಪ್ರಸಿದ್ಧರಾದದ್ದಿಲ್ಲ. ಎಂಎಸ್ ಯಶಸ್ಸು (ನಟಿಯಾಗಿ ಅಲ್ಲ, ಗಾಯಕಿಯಾಗಿ) ಪ್ರಾಂತ್ಯವನ್ನು ಮೀರಿ ರಾಷ್ಟ್ರದಲ್ಲಿ ಹರಡಿತು; ಮುಂದೆ ರಾಷ್ಟ್ರವನ್ನು ಮೀರಿ ವಿಶ್ವದಲ್ಲೇ ಅನುರಣಿಸಿತು.

೩

ಈ ಚಿತ್ರವು ಎಂಎಸ್ ಅವರನ್ನು ಸಂತಗಾಯಕಿಯಾಗಿ ಎತ್ತಿ ತೋರಿಸಿತು. ದಿಟವಾಗಿ ಆಕೆಯ ಬದುಕಿನಲ್ಲೇ ಇದೊಂದು ಪರಿವರ್ತನೆಯಾಯಿತು. ತಾನು ಅಭಿನಯಿಸಿದ ಒಂದು ಪಾತ್ರ ಮೀರೆಯದು ಎಂಬುದನ್ನು ಮರೆತರು; ತಾವೇ ದಿಟವಾಗಿ ಮೀರೆಯಾಗಿಬಿಟ್ಟರು. ಹಿಂದೆ ಶಕುಂತಲೆಯಾಗಿದ್ದಾಗಲೂ ತಾನೇ

ಶೃಂಗಾರನಾಯಕಿ ಶಕುಂತಲೆಯಾಗಿಬಿಟ್ಟಿದ್ದರು; ನಿಜಜೀವನದಲ್ಲಿಯೂ ಜಿಎನ್‌ಬಿ ತನ್ನ ದುಷ್ಯಂತನಾಗಬೇಕೆಂದು ಹಂಬಲಿಸಿದ್ದೂ ಉಂಟಂತೆ! ಎಲ್ಲರಿಗೂ ಇದರಿಂದ ಆತಂಕವೇ ಆಯಿತಂತೆ. ಈಗ ಸದ್ಯ ಮೀರೆಗೇನೋ ಯಾವ ಮನುಷ್ಯನಾಯಕನೂ ಇಲ್ಲ! ಭಗವಂತನೇ ಅವಳ ನಾಯಕ. ಅದು ಸದಾಶಿವಂಗೆ ಸಮಾಧಾನ ತಂದಿರಬೇಕು. ಎಳವೆಯಿಂದಲೂ ಎಂಎಸ್ ಮುಗ್ಧ ಭಕ್ತಿಯ ನೆಲೆಯಲ್ಲೇ ಇದ್ದರೂ, ಭಕ್ತಿಭಾವದ ಅಭಿವ್ಯಕ್ತಿಗೆ ಅನುಕೂಲವಾಗುವ ಪ್ರಗಲ್ಭತೆ, ವಯಸ್ಸಿನ ಪರಿಪಾಕ, ಸನ್ನಿವೇಶ, ಪ್ರೇರಣೆ, ಒತ್ತಾಸೆ ಇವೆಲ್ಲವೂ ಇರಬೇಕಷ್ಟೆ? 'ಶಕುಂತಲೆ'ಯಲ್ಲಿ ಅಭಿನಯಿಸುವಾಗ ಇಪ್ಪತ್ತುನಾಲ್ಕು ವರ್ಷದ ನವತಾರುಣ್ಯ; ಶೃಂಗಾರಕ್ಕೆ ಒಲಿದದ್ದು ಸಹಜವೇ. ಸನ್ನಿವೇಶದ ವೈಪರೀತ್ಯದಿಂದ ವಿರಹಾನುಭವ, ಆಸರೆಯ ಒತ್ತಡದಿಂದುಂಟಾದ ಪರಿಪಾಕ, ಪ್ರಸಂಗಗಳ ವಿವೇಕದಿಂದ ಒದಗಿದ ಪ್ರೇರಣೆ ಇವು ಭಕ್ತಿಯತ್ತ ಅವರನ್ನು ತಿರುಗಿಸಿದುವು.

ತನ್ನ ತಾಯಿಯೊಂದಿಗೆ ಮಧುರೆಯಿಂದ ಚೆನ್ನೈಗೆ ಬಂದು ನೆಲೆಸಿದ್ದಾಗ ವೀಣಾ ಧನಮ್ಮಾಳ್ ಮೊಮ್ಮಗಳು, ತನ್ನ ಓರಗೆಯವಳು, ಬಾಲಸರಸ್ವತಿಯ ಸ್ನೇಹವಾಗಿದ್ದಿತು. ಮನೆತನದಲ್ಲಿ ಹಿಂದಿನಿಂದ ಬಂದ ನರ್ತನಕಲೆಯನ್ನು ಎರಡು ಮೂರು ತಲೆಮಾರುಗಳಲ್ಲಿ ಕೈಬಿಟ್ಟು ಸಂಗೀತವನ್ನು ಹಿಡಿದುದು ಬಾಲಸರಸ್ವತಿಯ ತಾಯಿ ಜಯಮ್ಮನಿಗೆ ಸರಿಕಾಣದೆ, ಮಗಳನ್ನು ನರ್ತಕಿಯಾಗಿ ಉಜ್ಜುಗಿಸಿದ್ದರು. ಬಾಲಸರಸ್ವತಿಗೆ ಸಂಗೀತದಲ್ಲೂ ನರ್ತನದಲ್ಲೂ ಸಮಾನವಾದ ಪ್ರತಿಭೆ. ಎರಡೂ ಪ್ರಕಾರಗಳಲ್ಲಿ ಭಾವಪೂರ್ಣವಾಗಿ ತೊಡಗಿದಾಕೆ. ಪಂದನಲ್ಲೂರು ಕಂದಪ್ಪನ ಬಳಿ ಶಿಷ್ಯವೃತ್ತಿ ಮಾಡಿ ತನ್ನ ಎಳನೆಯ ವಯಸ್ಸಿನಲ್ಲಿ ಕಾಂಚೀಪುರದ ಗುಡಿಯೊಂದರಲ್ಲಿ ರಂಗಪ್ರವೇಶ ಮಾಡಿದರು. ಚೆನ್ನೈನ ಮ್ಯೂಸಿಕ್ ಅಕ್ಯಾದಮಿಯ ಅಧ್ಯಕ್ಷಿಣಿಯಾದ ವರ್ಷ (1973) ಆಕೆ ಹಾಡಿದ ಯದುಕುಲ ಕಾಂಭೋಜಿಯ ಆಲಾಪನೆ, ಮೂವನಲ್ಲೂರು ಸಭಾಪತಿ ಅಯ್ಯರ್ ಅವರ ಪದಕ್ಕೆ ಮಾಡಿದ ಅಭಿನಯವನ್ನು ಯಾರೂ ಮರೆಯಲಾರರು. ಇವರು ಎಂಎಸ್ ಅಂತೆಯೇ ದೇವದಾಸಿ ಪಂಗಡಕ್ಕೆ ಸೇರಿದವರು. ದೇವದಾಸಿಯೆಂಬ ಹೆಮ್ಮೆ ಅವರಿಗಿದ್ದಿತು. ಅದನ್ನು ಕುರಿತಂತೆ ಅವರಿಗೆ ಅಳುಕು, ಕೀಳರಿಮೆಯೇನು ಇರಲಿಲ್ಲ. ಶೃಂಗಾರ ರಸವನ್ನು ಅವರು ಹೀನಾಯವಾಗಿ

ಕಾಣಲಿಲ್ಲ. ಭರತನಾಟ್ಯವನ್ನು 'ಶುದ್ಧಿ'ಗೊಳಿಸಲೆತ್ನಿಸಿದ ಕಲಾಕ್ಷೇತ್ರದ ರುಕ್ಮಿಣಿ ಆರುಂಡೇಲರನ್ನು ವಿರೋಧಿಸಿದಾಕೆ ಇವರು. ಸಹಜ ಶೃಂಗಾರವನ್ನು ಭರತನಾಟ್ಯದಿಂದ ದೂರಯಿರಿಸುವ ಅವರ ಹವಣಿಕೆ ಆಕೆಗೆ ಸರಿಕಾಣಲಿಲ್ಲ. ಶೃಂಗಾರರಸ ಭಕ್ತಿಭಾವಕ್ಕೆ ಹೊರತಾದುದೇನಲ್ಲ; ಭಕ್ತಿಗೂ ಶೃಂಗಾರವೇ ಆಸರೆ ಎಂಬುದನ್ನು ಅಭಿನಯದಿಂದ ತೋರಿಸಿದ ಧೀಮಂತ ನರ್ತಕಿ. ಆಕೆಯ ಸಂಪರ್ಕವನ್ನೂ ಸ್ನೇಹವನ್ನೂ ಪಡೆದಿದ್ದ ಎಂಎಸ್ ತನ್ನ ಭಕ್ತಿಭಾವದ ಬೆಳವಣಿಗೆಯಲ್ಲಿ ಶಕುಂತಲೆಯಲ್ಲಿನ ಶೃಂಗಾರ ಮೊದಲ ಹೆಜ್ಜೆಯೆಂದು ಕಂಡುಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಶಕುಂತಲೆಯ ಮುಂದಿನ ಹಂತ ಮೀರೆಯದೇ. ಆದರೆ ಶಕುಂತಲೆಯಲ್ಲೇ ಎಂಎಸ್ ನಿಲ್ಲಲಿಲ್ಲ ಎಂಬುದು ಗಮನಾರ್ಹವಾದುದು.



ಎಂಎಸ್

ಚಲಚ್ಚಿತ್ರ ಪ್ರಪಂಚದೊಂದಿಗೆ 1938ರಲ್ಲಿ ಆರಂಭವಾದ ಎಂಎಸ್ ಸಂಪರ್ಕ 1945ರ ವೇಳೆಗೆ ಮುಗಿಯಿತು. 'ಸೇವಾಸದನ'ವೆಂಬ ಸಾಮಾಜಿಕ ಚಿತ್ರ, 'ಶಕುಂತಲೆ'ಯೆಂಬ ಶೃಂಗಾರ ಚಿತ್ರ, 'ಸಾವಿತ್ರಿ'ಯೆಂಬ ಪೌರಾಣಿಕ

ಚಿತ್ರ, 'ಮೀರಾ' ಎಂಬ ಆಧ್ಯಾತ್ಮಿಕ ಚಿತ್ರ, ಹೀಗೆ ನಾಲ್ಕು ಚಿತ್ರಗಳಲ್ಲಿ ಹಣ, ಹೆಸರು ಒದಗಿಬಂದುದಲ್ಲದೆ ಜನಾನುರಾಗ, ಶಿಷ್ಯಸಂಮಾನಗಳೂ ಬಂದುವು. ಮುಖ್ಯವಾಗಿ ಅವರ ಬದುಕಿನಲ್ಲೇ ಒಂದು ವಿಕಾಸವುಂಟಾಯಿತು. ಪ್ರಮುಖವಾಗಿ ಆಕೆ ಗಾಯಕಿ ಎಂಬುದು ಸಿದ್ಧವಾಯಿತು. ಇನ್ನು ಮುಂದೆ ಗಾಯನದಲ್ಲೇ ತನ್ನನ್ನು ತೊಡಗಿಸಿಕೊಳ್ಳುವ ಸಂಕಲ್ಪ ಅವರಲ್ಲಿ ಮೂಡಿಕೊಂಡಿತು. ಅದನ್ನು ಸದಾಶಿವಂ ಕೂಡ ಒಪ್ಪಿದರು. ಅವರ ಗುರುವಾದ ರಾಜಾಜಿಯೂ ಸದಾಶಿವಂಗೆ ಇದೇ ಉಪದೇಶ ಮಾಡಿದ್ದರು. ತೆರೆಯ ಮೇಲಣ ಮೀರೆ ದಿಟವಾದ ಬದುಕಿನಲ್ಲೂ ಕಂಡುಕೊಂಡದ್ದು ಚಲಚ್ಚಿತ್ರದ ಅಂಕ ಮುಗಿಯಿತು, ಸಂತಗಾಯಕಿಯ ಅಂಕ ಆರಂಭವಾಯಿತು.

ಳ

ಇದಕ್ಕೆ ಹೊಂದಿಕೊಂಡಂತೆ ಸದಾಶಿವಂ ಅವರ 'ಕಲ್ಕಿ' ಪತ್ರಿಕೆಯ ಉದ್ಯಮ ಬಲಗೊಂಡು ಅದಕ್ಕೆಂದೇ ಬೇರೊಂದು ಸುವ್ಯವಸ್ಥಿತ ನೆಲೆಯನ್ನು ಒದಗಿಸಲು 'ಕಲ್ಕಿ ಗಾರ್ಡನ್ಸ್' ಬಂಗಲೆ (ಪೂನಮಲ್ಲಿ ಹೈ ರೋಡಿನಲ್ಲಿ ಗುರುಸ್ವಾಮಿ ಮೊದಲಿಯಾರ್ ರಸ್ತೆಯಲ್ಲಿ) ಸಿದ್ಧವಾಯಿತು. ಮೊದಲು ಈ ಬಂಗಲೆಯಲ್ಲಿದ್ದ ನ್ಯಾಯಮೂರ್ತಿ ಬದ್ರುದ್ದೀನ್ ತಯಾಬ್ಜಿ (1887ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು) ಅವರ ಅತಿಥಿಯಾಗಿ ಮಹಾತ್ಮಾ ಗಾಂಧಿ ಇಲ್ಲಿ ಕೆಲಕಾಲ ತಂಗಿದ್ದರಂತೆ. ಈ ಬಂಗಲೆಯ ಪಕ್ಕದಲ್ಲಿದ್ದ ನವರೋಜಿ ಗಾರ್ಡನ್ಸ್ ಆವರಣವನ್ನೂ ಸೇರಿಸಿಕೊಂಡು ಸದಾಶಿವಂ ಅವರ 'ಕಲ್ಕಿ ಗಾರ್ಡನ್ಸ್' ತಲೆಯೆತ್ತಿಕೊಂಡಿತು. ಎರಡು ಎಕರೆಗಳಿಗಿಂತಲೂ ಹೆಚ್ಚು ಹರವಿನ ಜಾಗ ಇದು. ಎರಡು ಲಕ್ಷ ರೂಪಾಯಿಗಳಿಗೆ 1947ರಲ್ಲಿ ಸದಾಶಿವಂ ಇದನ್ನು ಕೊಂಡರು. ರಾಜಾಜಿ ಬಂದು ಹರಸಿದರು. ಇದಾದ ಕೆಲವೇ ತಿಂಗಳುಗಳಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಯಿತು. ರಾಜಾಜಿ ಗೌರ್ನರ್ ಜನರಲ್ ಆದರು. ಸದಾಶಿವಂ ಅದೃಷ್ಟದ ಬಾಗಿಲು ತೆರೆಯಿತು. ಮುಂದೆ ಮೂವತ್ತು ವರ್ಷಗಳ ಕಾಲ ಈ 'ಕಲ್ಕಿ ಗಾರ್ಡನ್ಸ್' 'ಕಲ್ಕಿ' ಪತ್ರಿಕೆಯ ಕಾರ್ಯಾಲಯ ಮಾತ್ರವಲ್ಲದೆ

ರಾಜಕಾರಣ ಪ್ರಸಂಗಗಳ ಕೇಂದ್ರವೂ ಆಯಿತು. 1947ರ ನವೆಂಬರ್ ತಿಂಗಳಲ್ಲಿ 'ಮೀರಾ' ಚಿತ್ರದ ಹಿಂದೀ ಸಂಸ್ಕರಣ ದಿಲ್ಲಿಯ 'ಪ್ಲಾಜಾ ಸಿನೆಮಾ' ಮಂದಿರದಲ್ಲಿ ಪ್ರದರ್ಶನಗೊಂಡಾಗ ಪ್ರಧಾನಿ ನೆಹ್ರು ಅವರೇ ಬಾಗಿಲ ಬಳಿ ನಿಂತು ಬಂದವರನ್ನು ಸ್ವಾಗತಿಸುತ್ತಿದ್ದರಂತೆ. ಮೌಂಟ್‌ಬ್ಯಾಟನ್ ದಂಪತಿಗಳು, ಅಧ್ಯಕ್ಷ ರಾಜೇಂದ್ರ ಪ್ರಸಾದರು, ಸರ್ವೆಪಲ್ಲಿ ರಾಧಾಕೃಷ್ಣನ್, ಸರೋಜಿನಿ ನಾಯ್ಡು ಮೊದಲಾದ ಗಣ್ಯರು ನೆರೆದಿದ್ದರು. ಯಾವ ನಾಯಕರೇ ಆಗಲಿ ಚೆನ್ನೈಗೆ ಬಂದಾಗ 'ಕಲ್ಕಿ ಗಾರ್ಡನ್ಸ್'ಗೆ ಭೇಟಿಕೊಡುವುದು ಪದ್ಧತಿಯಾಗಿಬಿಟ್ಟಿತು. ಅಂಥವರ ಸತ್ಕಾರಕ್ಕೆ ಸದಾಶಿವಂ ಸರ್ವಸಮರ್ಪಕವಾದ ವ್ಯವಸ್ಥೆಯನ್ನೂ ಮಾಡಿದ್ದರು. ಆರು ಮಂದಿ ಅಡುಗೆಯವರು, ಇಪ್ಪತ್ತು ಜನ ತೋಟದ ಮಾಲಿಗಳು, ಮಕ್ಕಳ ಆಟಕ್ಕೆಂದು 'ಗೋಕುಲ', ಬಂದವರಿಗೆಲ್ಲ ಬದಾಂ ಹಲ್ವಾ, ಕೇಸರಿಭಾತು, ಮೊಸರುಒಡೆ, ಇಂಥ ಉಪಚಾರ. ದಿನವೂ ಮೂವತ್ತು ಜನರ ಊಟ ಮಾಮೂಲಾಗಿಬಿಟ್ಟಿತು. ಆದರೆ ಇಷ್ಟು ದೊಡ್ಡ ಆವರಣದಲ್ಲಿ ಸದಾಶಿವಂ ಇರುತ್ತಿದ್ದುದು ಸಣ್ಣದೊಂದು ಕೋಣೆಯಲ್ಲಿ; ಇನ್ನೊಂದು ಅಂಥದೇ ಸಣ್ಣ ಕೋಣೆ ಎಂಎಸ್ ನಿವಾಸಸ್ಥಳ.

ಇಲ್ಲಿ 'ಕಲ್ಕಿ' ಕಾರ್ಯಾಲಯ ವಿಭಾಗದಲ್ಲಿ ಎಲ್ಲಕ್ಕೂ ಒಡೆಯರಾದ, ಸೂತ್ರಧಾರಿಯಾದ ಸದಾಶಿವಂ ತಮ್ಮ ಆಫೀಸಿನಲ್ಲಿ ತಮ್ಮ ಕುರ್ಚಿಯ ಹಿಂಬದಿಯ ಗೋಡೆಯ ಮೇಲೆ ಎಂಎಸ್ ಅವರ ದೊಡ್ಡದೊಂದು ಭಾವಚಿತ್ರವನ್ನು ಹಾಕಿದ್ದರು. ಇದರ ಹಿನ್ನೆಲೆ ಈಕೆ ತಮ್ಮ ಪತ್ನಿಯೆಂದಲ್ಲ, 'ಕಲ್ಕಿ' ಪತ್ರಿಕೆಯ ಅಧಿಕೃತ ಡೈರೆಕ್ಟರ್ ಎಂಬ ಕಾರಣದಿಂದ ಎಂದು ಅವರೇ ವಿವರಿಸುತ್ತಿದ್ದರಂತೆ. ಎಂಎಸ್ ಚಲಚ್ಚಿತ್ರ ನಟಿಯಾಗಿ ('ಸಾವಿತ್ರಿ'ಯಲ್ಲಿ ನಾರದರಾಗಿ) ಪಡೆದುಕೊಂಡ ಸಂಭಾವನೆಯೇ 'ಕಲ್ಕಿ' ಪತ್ರಿಕೆಯ ಮೂಲಧನ; ಆದ್ದರಿಂದ ಅವರು ಡೈರೆಕ್ಟರ್ ಆಗಿ ನೇಮಕಗೊಂಡದ್ದು ಸಹಜವೇ. ಆದರೆ ಎಂಎಸ್ ಯಾರೊಂದಿಗೂ ಒಮ್ಮೆಯೂ ಈ ವಿಚಾರವನ್ನು ಪ್ರಸ್ತಾಪಿಸಿದ್ದಿಲ್ಲ!

ಎಂಎಸ್ ಮತ್ತು ಸದಾಶಿವಂ ಬಹುಮಟ್ಟಿಗೆ ಪ್ರವಾಸದಲ್ಲಿರುತ್ತಿದ್ದ ಕಾಲ ಅದು. ಎಂಎಸ್ ಸಂಗೀತ ಸಾಧನೆಗೂ ವಿಶಿಷ್ಟವಾದ ಕಾಲ. ರಾಜಾಜಿಯ ಸಲಹೆಯಂತೆ, ಎಂಎಸ್ ಸಂಗೀತವು ದಾನಧರ್ಮಗಳಿಗೆ ಮೀಸಲಾದ ಕಾಲವೂ

ಅದೇ. ಮಹಾತ್ಮಾ ಗಾಂಧಿಯವರ ಕೋರಿಕೆಯಂತೆ ಕಸ್ತೂರಬಾ ಸ್ಮಾರಕ ನಿಧಿಗೆ ಎಂಎಸ್ ಕಚೇರಿಗಳಿಂದ ಎಂಬತ್ತು ಸಾವಿರ ರೂಪಾಯಿಗಳು ಸಂದವು. ತಮ್ಮ ಕಚೇರಿಗಳಿಂದಲೇ ಎಂಎಸ್ ಒಂದು ಕೋಟಿಯಷ್ಟು ಹಣವನ್ನು ಅಗತ್ಯವಿದ್ದ ಸಂಸ್ಥೆಗಳಿಗೆ ದಾನಮಾಡಿದರು. 1944ರಿಂದ 1987ರವರೆಗೆ ಇನ್ನೂರ ನಲವತ್ತುನಾಲ್ಕು ಕಚೇರಿಗಳನ್ನು ದಾನಧರ್ಮಗಳಿಗೆಂದೇ ಕೊಟ್ಟರು; ಒಮ್ಮೊಮ್ಮೆ ವರ್ಷದಲ್ಲಿ ಹದಿನಾರು ಕಚೇರಿಗಳು. ಮತ್ತೆ ಅವರ ಗಾಯನದ ಧ್ವನಿಮುದ್ರಿಕೆಗಳೂ ಡಿಸ್ಕ್‌ಗಳೂ ಕೆಸೆಟ್‌ಗಳೂ ಹತ್ತು ಭಾಷೆಗಳಲ್ಲಿ ಹೊರಹೊಮ್ಮಿದವು. ಇವಕ್ಕೆಲ್ಲ ಅವರಿಗೆ ನೆರವಾಗುತ್ತಿದ್ದವರು ಕಡೆಯನಲ್ಲೂರು ವೆಂಕಟರಾಮನ್. ಎಚ್‌ಎಂವಿ ಧ್ವನಿಮುದ್ರಣ ಸಂಸ್ಥೆಯಿಂದ ಅವರಿಗೆ ಪ್ರತಿವರ್ಷವೂ ಹತ್ತರಿಂದ ಇಪ್ಪತ್ತು ಲಕ್ಷ ರೂಪಾಯಿಗಳ ವರಮಾನವಿದ್ದಿತು. ಅದನ್ನೆಲ್ಲ ಹೀಗೆಯೆ ದಾನಮಾಡಿಬಿಡುತ್ತಿದ್ದರು.



ಕಂಚಿ ಪರಮಾಚಾರ್ಯರು
(ಶ್ರೀ ಚಂದ್ರಶೇಖರೇಂದ್ರ ಸರಸ್ವತೀಸ್ವಾಮಿಗಳು)

ಈ ಅವಧಿಯಲ್ಲಿಯೇ (1947-1977) ಹಲವು ಹಿರಿಯ ಸಂಗೀತ ವಿದ್ವಾಂಸರು ಎಂಎಸ್ ಅವರ ನಿಕಟಸಂಪರ್ಕಕ್ಕೆ ಬಂದರು. ಎಂಎಸ್ ಅವರಿಗೆ ಹಲವಾರು ಸಂಸ್ಥೆಗಳಿಂದ ಪುರಸ್ಕಾರಗಳೂ, ಸರಕಾರದಿಂದ ಪ್ರಶಸ್ತಿಗಳೂ

ಬಂದುದು. ಅವರಿಗೆ ದೇಶವಿದೇಶಗಳಿಂದ ಕರೆಗಳು ಬಂದುದೂ ಆಗಲೇ. ಎಂಎಸ್‌ಗೆ ರಾಜಾಜಿಯ ನಿಕಟ ಸಂಪರ್ಕ, ಕಂಚಿ ಪರಮಾಚಾರ್ಯರ ಮಾರ್ಗದರ್ಶನ ದೊರೆತದ್ದು 'ಕಲ್ಕಿ ಗಾರ್ಡನ್ಸ್' ಕಾಲದಲ್ಲಿಯೇ. ಪುಟ್ಟಪರ್ತಿಯ ಸಾಯಿಬಾಬಾ ಇಲ್ಲಿಗೊಮ್ಮೆ ಬಂದಿದ್ದರು. ಇಲ್ಲಿ ಊಟ ಮಾಡುವಾಗ ಎಂಎಸ್ ಅವರೇ ಬಡಿಸಿದರಂತೆ. ಭಾರತ ಸರ್ಕಾರದಿಂದ ತಮಗೆ 'ಲೈಫ್‌ಟೈಂ ಅಚೀವ್‌ಮೆಂಟ್ ಅವಾರ್ಡ್' ಪ್ರಶಸ್ತಿಯಿಂದ ಬಂದ ಹದಿನಾಲ್ಕು ಲಕ್ಷರೂಪಾಯಿಗಳನ್ನು ಕಾಂಚೀಪುರಂ ಬಳಿ ಒರಿರುಕ್ಕೈ ಗ್ರಾಮದಲ್ಲಿ ಯೋಜಿತವಾದ 'ಕಂಚೀಮಹಾಸ್ವಾಮಿ ಮಣಿಮಂಡಪ'ಕ್ಕೆ ದಾನಮಾಡಿಬಿಟ್ಟರು. ಸ್ವಾಮಿಗಳ ರಚನೆಯಾದ 'ಮೈತ್ರೀಂ ಭಜತ' ಎಂಬುದನ್ನು ಯುಎನ್ ಸಭೆಯಲ್ಲಿ (ನ್ಯೂಯಾರ್ಕ್) ಹಾಡಿ ರಚನೆಗೂ ಸಭೆಗೂ ಸನ್ನಿವೇಶಕ್ಕೂ ಘನತೆಯನ್ನು ತಂದುಕೊಟ್ಟರು.

ಸದಾಶಿವಂ ಮತ್ತು ಎಂಎಸ್ ಮಹಾತ್ಮಾ ಗಾಂಧಿಯವರಿಗೆ ಪರಿಚಿತರಾದುದು ರಾಜಾಜಿ ಮೂಲಕವಾಗಿ. ಮಹಾತ್ಮರು ಎಂಎಸ್ ಗಾಯನವನ್ನು ತುಂಬ ಮೆಚ್ಚಿಕೊಂಡಿದ್ದರು. 'ಭಜನೆಗಳನ್ನು ಅನೇಕರು ಹಾಡುತ್ತಾರೆ. ಆದರೆ ಎಂಎಸ್‌ನಂತೆ ಭಜನೆಗಳಲ್ಲಿ ತಮ್ಮನ್ನೇ ಮರೆಯುವವರು, ತನ್ಮಯರಾಗುವವರು ವಿರಳ' ಎಂದು ಹೇಳುತ್ತಿದ್ದರು. ಆಕೆಯ ಗಾಯನದಲ್ಲಿನ ಭಕ್ತಿಭಾವಕ್ಕೆ ಅವರು ಮಾರುಹೋಗಿದ್ದರು. 'ಸಾವಿತ್ರಿ' ಚಿತ್ರಣಕ್ಕೆಂದು 1941 ರಲ್ಲಿ ಎಂಎಸ್, ಸದಾಶಿವಂರೊಂದಿಗೆ ಕಲ್ಕತ್ತೆಗೆ ಪ್ರಯಾಣಮಾಡುವಾಗ, ದಾರಿಯಲ್ಲಿ ನಾಗಪುರದಲ್ಲಿಳಿದು ಮಹಾತ್ಮರ ವರ್ಧಾಗ್ರಾಮಕ್ಕೆ ಹೋಗಿಬಂದರು. ಅಲ್ಲಿ ಸಂಜೆ ಪ್ರಾರ್ಥನಾಸಭೆ ನಡೆಯುತ್ತಿದ್ದಿತು. ಇವರು ಹೋಗಿ ದೂರ ಕುಳಿತುಕೊಂಡರು. ಒಡನೆಯೇ ಗಾಂಧೀಜಿ ಅವರನ್ನು ಕಂಡು, ಹತ್ತಿರ ಬರಹೇಳಿ, ಭಜನೆಗಳನ್ನು ಹಾಡುವಂತೆ ಎಂಎಸ್‌ಗೆ ಹೇಳಿದರು. ಮುಂದೆ 1947ರ ಅಕ್ಟೋಬರ್ ಎರಡರಂದು ಮಹಾತ್ಮರ ಹುಟ್ಟುಹಬ್ಬದಲ್ಲಿ ಕೆಲವೇ ದಿನಗಳ ಮೊದಲು ದಿಲ್ಲಿಗೆ ಎಂಎಸ್ ಬಂದು ರಾಮಧುನ್ ಹಾಡಬೇಕೆಂದು ಬಯಸಿದ್ದರು. ಮತ್ತೆ ಮೀರಾಭಜನೆಯಾದ 'ಹರಿ ತುಂ ಹರೋ' ಎಂಬ ಹಾಡನ್ನು ಅವರಿಂದ ಕೇಳಬೇಕೆಂದೂ ಹೇಳಿಕಳುಹಿಸಿದ್ದರು. ತನಗೆ ಅದು

ಬಾರದೆಂದೂ, ಪಾಠ ಮಾಡಲು ಕಾಲ ಸಾಲದೆಂದೂ ಇನ್ನೊಂದನ್ನು ಹಾಡುವೆನೆಂದಾಗ ಮಹಾತ್ಮರು "ನೀನು ಅದನ್ನು ಗದ್ಯದಲ್ಲಿ ಹೇಳಿದರೂ ಸರಿ; ನಿನ್ನಿಂದಲೇ ಅದನ್ನು ಕೇಳಬೇಕು" ಎಂದರಂತೆ!

ಎಂಎಸ್ ಅವರ ಆಣತಿಯನ್ನು ಮನ್ನಿಸಿ, ವಾದ್ಯವೃಂದವನ್ನೂ ಸ್ವರಸಂಯೋಜಕರನ್ನೂ ಕರೆಯಿಸಿಕೊಂಡು, ಪಯಾನೋ ವೈದ್ಯನಾಥನ್ ಅವರ ನೆರವಿನಿಂದ ಹಲವಾರು ಧಾಟಿಗಳನ್ನು ಹೆಣೆಯಿಸಿ, ಕಡೆಗೊಂದು ಸಮರ್ಪಕವೆಂದು ಕಂಡ ರೀತಿಯನ್ನು ನಿರ್ಧರಿಸಿದಾಗ ಅರ್ಧ ರಾತ್ರಿಯಾಗಿದ್ದಿತು. ಮರುದಿನ ಸಂಜೆ ದಿಲ್ಲಿಯಲ್ಲಿ ಅದು ಮಹಾತ್ಮರ ಪ್ರಾರ್ಥನಾಸಭೆಯಲ್ಲಿ ಪ್ರಸಾರವಾಗಬೇಕಿದ್ದಿತು. ಎಂಎಸ್ ಅವರು ತಾವೇ ಖುದ್ದಾಗಿ ಹೋಗಲು ಸಾಧ್ಯವಾಗದೆ, ಧ್ವನಿಮುದ್ರಿಕೆಯನ್ನು ಕಳುಹಿಸುವ ಏರ್ಪಾಟುಮಾಡಿ ಕೊಂಡಿದ್ದರು. ಆಕಾಶವಾಣಿ ಕೇಂದ್ರದಲ್ಲಿ ಅದು ನಡೆಯಬೇಕಾಗಿದ್ದಿತು. ಅರ್ಧರಾತ್ರಿಯ ನಂತರ ಅದು ನಡೆದು, ಮುಂಜಾನೆ ವಿಮಾನದಲ್ಲಿ ಅದನ್ನು ದಿಲ್ಲಿಗೆ ಕಳುಹಿಸಲಾಯಿತು. ಆ ಸಂಜೆ ಪ್ರಾರ್ಥನಾಸಭೆಯಲ್ಲಿ ಆಲಿಸಿದವರೆಲ್ಲ ಆನಂದಪಟ್ಟರು.

ಮುಂದೆ ಕೆಲವೇ ತಿಂಗಳುಗಳಲ್ಲಿ 1948ರ ಜನವರಿ 30ರಂದು ಎಂಎಸ್ ತಮ್ಮ ಮನೆಯಲ್ಲಿ ತಂಜಾವೂರಿನಿಂದ ರೇಡಿಯೋನಲ್ಲಿ ಬರುತ್ತಿದ್ದ ತಿರುವಯ್ಯಾರಿನ ತ್ಯಾಗರಾಜ ಆರಾಧನೆಯ ಸಂಗೀತ ವಿನಿಕೆಗಳನ್ನು ಕೇಳುತ್ತ ಕುಳಿತಿದ್ದಾಗ, ಕೇಂದ್ರದವರು ಪ್ರಸಾರವನ್ನು ನಡುವೆ ನಿಲ್ಲಿಸಿ ಮಹಾತ್ಮರು ಹುತಾತ್ಮರಾದ ಸುದ್ದಿಯನ್ನು ತಿಳಿಸಿ ಎಂಎಸ್ ಅವರೇ ಹಾಡಿದ್ದ 'ಹರಿ ತುಂ ಹರೋ' ಮೀರಾಭಜನೆಯನ್ನು ಪ್ರಸಾರಮಾಡಿದರು. ಇದನ್ನು ಕೇಳಿದ ಎಂಎಸ್‌ಗೆ ಒಡನೆಯೇ ಸ್ಮೃತಿತಪ್ಪಿತು. ಮುಂದೆ ಹಲವು ದಿನಗಳ ಕಾಲ ಮಂಕಾಗಿಬಿಟ್ಟರು. ಮಹಾತ್ಮರಿಗೆ ಪ್ರಿಯವಾಗಿದ್ದ 'ವೈಷ್ಣವಜನತೋ' ಎಂಬ ನರಸೀಮೆಹ್ತಾ ಹಾಡನ್ನೂ ಅವರು ಪಯಾನೋ ವೈದ್ಯನಾಥನ್ ನೆರವಿನಿಂದ ಅಭ್ಯಾಸಮಾಡಿ ಮಹಾತ್ಮರ ಮುಂದೆ ಹಾಡಬೇಕೆಂದುಕೊಂಡಿದ್ದರು!

೫

ಚಲಚ್ಚಿತ್ರದ ನಂಟು ತಾಯಿ ಷಣ್ಮುಖವಡಿವು, ಮಗಳು ಎಂಎಸ್ ಇಬ್ಬರಿಗೂ ಆಗದು. ಮಗಳಿಗೆ ಕೂಡದೆಂದು ತಾಯಿ, ತನಗೇ ಬೇಡವೆಂದು ಮಗಳು. ಆದರೆ ಈ ನಂಟನ್ನು ಒಡಮೂಡಿಸಿದ ಸದಾಶಿವಂ ಮಗಳಿಗೆ ಬೇಕಾದವರು, ಆದ್ದರಿಂದ ತಾಯಿಯ ವಿರಸದಲ್ಲಿ ಪಾಲ್ಗೊಳ್ಳುವಂತಿಲ್ಲ. ಸ್ವಭಾವಕ್ಕನುಗುಣವಾಗಿ ಎಂಎಸ್ ಸರಸವಾಗಿಯೇ ಸಮಸ್ಯೆಯನ್ನು ಪರಿಹರಿಸಿಕೊಂಡರು. ಅವರದ್ದು ಹೇಗೂ ಅನುರಾಗದ ದಾಂಪತ್ಯಕ್ಕಿಂತ ಹೆಚ್ಚಾಗಿ ಅನುಕೂಲದಾಂಪತ್ಯ. ಮಗಳಿಗೆ ಸಂಗೀತದಲ್ಲಿ ಸಹಜವಾದ ಪ್ರವೃತ್ತಿ, ಪ್ರತಿಭೆ, ಆಸಕ್ತಿಗಳಿರುವುದನ್ನು ತಾಯಿ ಗಮನಿಸಿ ಆಕೆ ಸಂಗೀತಕ್ಷೇತ್ರದಲ್ಲೇ ಮುಂದುವರಿಯಬೇಕು, ಮೇಲೇರಬೇಕು, ಮನ್ನಣೆಪಡೆದುಕೊಳ್ಳಬೇಕೆಂದು ಬಯಸಿದುದು ಸರಿಯೇ. ಚಲಚ್ಚಿತ್ರರಂಗ ಇದಕ್ಕೆ ಅಡ್ಡಿಯಾದೀತೆಂದು ಆಕೆ ಬೆದರಿದುದೂ ಸರಿಯೇ. ಆದರೆ ವಾಸ್ತವವಾಗಿ ಹಾಗಾಗಲಿಲ್ಲ. ಚಿತ್ರದಲ್ಲಿ ನಟಿಯಾದರೂ ಮಗಳ ಅಭಿನಯವನ್ನೇನು ಯಾರೂ ಮೆಚ್ಚಿಕೊಳ್ಳಲಿಲ್ಲ. ಎಲ್ಲರೂ ಒಲಿದದ್ದು ಆಕೆಯ ಗಾಯನಕ್ಕೇ. ಮತ್ತೆ, ತಾಯಿಯ ಎಣಿಕೆಗಿಂತ, ನಿರೀಕ್ಷೆಗಿಂತ, ಊಹೆಗಿಂತ ಎಷ್ಟೋ ಪಟ್ಟು ಮಿಗಿಲಾಗಿ ಸಂಗೀತದಲ್ಲಿ ಮೇಲೇರಿದರು, ಮನ್ನಣೆ ಪಡೆದುಕೊಂಡರು, ಲೋಕವಿಖ್ಯಾತರಾದರು. ಚಲಚ್ಚಿತ್ರವೇನು ಇದಕ್ಕೆ ಅಡ್ಡಿಬರಲಿಲ್ಲ; ನೆರವೇ ಆಯಿತು.

ಚಲಚ್ಚಿತ್ರರಂಗದಲ್ಲಿ ಆಕೆ ಹೆಚ್ಚು ಕಾಲ ನಿಲ್ಲಲೂ ಇಲ್ಲ. ಅಭಿನಯಿಸಿದ್ದು ನಾಲ್ಕೇ ಚಿತ್ರಗಳಲ್ಲಿ. ನಿರ್ದೇಶಕರೂ ನಟರೂ ಚಿತ್ರಣಕ್ಕೆ ಸಂಬಂಧಪಟ್ಟ ಎಲ್ಲರೂ ಆಕೆಯನ್ನು ಗೌರವದಿಂದಲೇ ಕಂಡುಕೊಂಡರು. ಯಾವ ಬಗೆಯ ಅಪಖ್ಯಾತಿಗೂ ಪಕ್ಕಾಗಲಿಲ್ಲ. ಚಿತ್ರರಂಗದಿಂದ ದೂರಬರುವ ವೇಳೆಗೆ ಆಕೆಯ ಕೀರ್ತಿ ಎಲ್ಲೆಡೆ ಹರಡಿಕೊಂಡಿದ್ದಿತು; ಮೀರಾಳಂತೆ ಅವರೂ ಸಂತಗಾಯಕಿಯೆಂದು ಖ್ಯಾತಿವೆತ್ತರು. ಚಲಚ್ಚಿತ್ರದಲ್ಲಿ ಪಾಲ್ಗೊಂಡು ಆಕೆ ಯಾವ ನಿಂದನೆಗಾಗಲಿ, ಯಾರ ಕುಹಕಕ್ಕಾಗಲಿ, ಏನು ಹೀನಾಯಕ್ಕಾಗಲಿ ಎಡೆಮಾಡಿಕೊಡಲಿಲ್ಲ ಮಾತ್ರವಲ್ಲ, ಎಲ್ಲರ ಆದರಕ್ಕೆ, ಗೌರವಕ್ಕೆ, ಪ್ರಶಂಸೆಗೆ, ಸಂಭಾವನೆಗೆ

ಪಾತ್ರರಾದರು. ಅವರ ಸಂಗೀತದಂತೆಯೇ ವ್ಯಕ್ತಿತ್ವವೂ ಕಳೆತುಂಬಿ ರಾರಾಜಿಸುತ್ತಿದ್ದಿತು.

ಚಲಚ್ಚಿತ್ರರಂಗದ ನಟಿಯರಲ್ಲಿ ಎಂಎಸ್‌ಗೆ ಮುಂಚೆ, ಎಂಎಸ್ ನಂತರ, ಅನೇಕ ಹೆಸರಾಂತ ಪ್ರತಿಭಾವಂತ ಗಾಯಕಿಯರಿದ್ದರು. ಆದರೆ ಅವರಲ್ಲಿ ಯಾರಿಗೂ ಈ ಬಗೆಯ ಪ್ರಖ್ಯಾತಿ ಒದಗಿಬರಲಿಲ್ಲ. ಆಕೆಯ ಸಂಗೀತದಲ್ಲಿದ್ದ ಭಾವಶುದ್ಧಿ, ವ್ಯಕ್ತಿತ್ವದಲ್ಲಿದ್ದ ಭಕ್ತಿಭಾವ ಬೇರೆ ಯಾರಿಗೂ ಇರದಿದ್ದುದೇ ಕಾರಣ. ಚಿತ್ರದಲ್ಲಿ ಅಭಿನಯಿಸುವ ಬಯಕೆ ಎಂಎಸ್‌ಗೇನು ಇರಲಿಲ್ಲ, ಹಾಗಾಗಿ ಅಭಿನಯಿಸಿದ್ದರಿಂದ ಅದರ ಪ್ರಭಾವವೇನು ಅವರ ಮೇಲೆ ಆಗಲಿಲ್ಲ. 'ಇರಬೇಕು, ಇರದಿರಬೇಕು' ಎಂಬಂತೆ ಇದ್ದುಬಿಟ್ಟರು. ಸದಾಶಿವಂ ಒತ್ತಾಯ; ಅದಕ್ಕೆ ಎದುರಾಗಿ ಹೋಗುವ ಪ್ರಕೃತಿ ಇವರದಲ್ಲ. ಮೊದಲೇನೋ ವಿರೋಧಿಸಿದರು, ಅನಂತರ ಒಪ್ಪಿಕೊಂಡರು. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ' ಎಂದು ಒಳಗೇ ಅಂದುಕೊಂಡಿರಬೇಕು. ಗೋವಿಂದನ ದಯೆ ಮೀರಾ ಚಿತ್ರದ ಮೂಲಕ ಇಳಿದುಬಂದಿತು; ಅನಂತರ ರಾಜಾಜಿ ಸಲಹೆಯ ಮೂಲಕ ತೋರಿಕೊಂಡಿತು. ಅಭಿನಯದ ಅಂಕವೇನೋ ಮುಗಿಯಿತು; ಗೋವಿಂದನ ದಯೆ ಮಾತ್ರ ಮುಂದುವರೆಯಿತು.

'ಶಕುಂತಲೆ' ಚಿತ್ರದಲ್ಲಿ ಒಂದು ವಿಷ್ಕಂಭಕ. ಜಿಎನ್‌ಬಿಯೊಂದಿಗೆ ಪ್ರಣಯ ಪ್ರಸಂಗ. ಅದು ಅರಳಗೊಡದೆ, ಎಂಎಸ್ ದಾರಿತಪ್ಪದಂತೆ ಮಾಡಿದ್ದೂ ದೇವರ ದಯೆಯೇ. ಆಕೆಗೆ ಆಸರೆಯಾಗಿ ನಿಂತಿದ್ದವರು ಸದಾಶಿವಂ. ತನ್ನದೇ ಬಯಕೆಯಿಂದ, ಉತ್ಸಾಹದಿಂದ, ಉದ್ಯಮಯೋಜನೆಯಾಗಿ ಚಲಚ್ಚಿತ್ರರಂಗಕ್ಕೆ ಆಕೆಯನ್ನು ತೊಡಗಿಸಿದರು; ಗುರು ರಾಜಾಜಿ ಸೂಚಿಸಿದಂತೆ ಆಕೆಯನ್ನು ಚಲಚ್ಚಿತ್ರರಂಗದಿಂದ ಬಿಡಿಸಿಯೂಬಿಟ್ಟರು. ತೊಡಗಿಸಿದಾಗಲೂ ಬಿಡಿಸಿದಾಗಲೂ ಎಂಎಸ್ ಹಿತವೇ ಅವರ ಮನಸ್ಸಿನಲ್ಲಿದ್ದುದು. ಈ ನಡುವೆ ಸಣ್ಣದೊಂದು ಸುಂಟರಗಾಳಿಯಂತೆ ಎದ್ದುಕೊಂಡ ಪ್ರಣಯ ಅಪ್ಪರಲ್ಲೇ ಅಡಗಿಹೋದುದು ಒಂದು ದೈವಲೀಲೆಯೇ. ಎಂಎಸ್‌ಗೆ ಸದಾಶಿವಂ ಉಳಿದುದು, ಸದಾಶಿವಂಗೆ ಎಂಎಸ್ ಉಳಿದುದು ಇಬ್ಬರಲ್ಲೂ ದೈವಭಕ್ತಿಯನ್ನು ಬೇರೂರಿಸಿತು ಎಂದು ಬೇರೆ ಹೇಳಬೇಕಾಗಿಲ್ಲ. ಎಂಎಸ್‌ದೇನೋ

ಮೊದಲಿಂದ ಸಾತ್ತ್ವಿಕಸ್ವಭಾವ, ಮುಗ್ಧಭಾವ. ಸದಾಶಿವಂ ಹಾಗಲ್ಲ; ಜಾಣ, ಚಾಣಾಕ್ಷ, ವ್ಯವಹಾರದಕ್ಷ. ಅವರಿಗೆ ಆರಂಭದಲ್ಲಿ ದೈವದತ್ತ ಒಲವೇನು ಇದ್ದಂತೆ ತೋರುವುದಿಲ್ಲ. ಅನಂತರ ಮೂಡಿಕೊಂಡುದೂ ತೋರಿಕೆಗಾಗಿ, ಆಡಂಬರಕ್ಕಾಗಿ, ವ್ಯವಹಾರಕ್ಕಾಗಿ ಎಂದೇ ತೋರುತ್ತದೆ. ಎಂಎಸ್ ಪ್ರಭಾವದಿಂದಲೇ ಅದು ಬರುಬರುತ್ತ ಆಳಕ್ಕೆ ಇಳಿದುದು, ನೈಜವಾದುದು. ದೇವರು ಒಲಿದರೆ ಎಲ್ಲ ತನಗೆ ಅನುಕೂಲವಾಗಿಯೇ ನಡೆಯುತ್ತದೆ ಎಂಬುದನ್ನು ಅವರು ಕಂಡುಕೊಂಡರು. ಕಂಚಿ ಪರಮಾಚಾರ್ಯರ ಸಂಪರ್ಕ ಇದನ್ನು ದೃಢಪಡಿಸಿತು. ಆ ಸಂಪರ್ಕವೂ ದೈವಲೀಲೆಯೇ.



ಎಂಎಸ್

ನಾಲ್ಕು ಚಲಚ್ಚಿತ್ರಗಳಲ್ಲಿ ಎಂಎಸ್ ಹಾಡುವಾಗ 'ಸೇವಾಸದನ'ದಲ್ಲಿ ಅದು ಯಾವ ಬಗೆಯದೋ ತಿಳಿಯದು, ಚಿತ್ರದ ಪ್ರತಿಯ ಉಳಿಕೆಯೇ ಇಲ್ಲವಂತೆ. ಇನ್ನು 'ಶಕುಂತಲೆ'ಯಲ್ಲಿ ಚೆಲುವಿನ ಹೊನಲು, ಇಂಪಾದ ಗಾಯನ; ಹಾಡಿಗಿಂತ ಅಭಿನಯದ ಪಾತ್ರವೇ ಪ್ರಮುಖ. ಪ್ರಣಯವೇ ವಸ್ತುವಾದುದರಿಂದ ಶೃಂಗಾರರಸಕ್ಕೆ ಹೆಚ್ಚು ಒತ್ತು. ಅಲ್ಲಿ ಭಕ್ತಿಯಾಗಲಿ ಭಾವಶುದ್ಧಿಯಾಗಲಿ

ಪ್ರಸಕ್ತವಾಗಲಾರದು. ಸಂಗೀತಕ್ಕಿಂತ ಹೆಚ್ಚಾಗಿ ಅನುರಾಗ-ಅಭಿನಯಗಳು. ಅಷ್ಟಕ್ಕೆ ಅನುಕೂಲವಾಗುವ ಭಾವ. ಅದೇನು ಶುದ್ಧವಾದುದಂತೂ ಅಲ್ಲ. 'ಸಾವಿತ್ರಿ'ಯ ನಾರದರಾಗಿ ಹಾಡುವಾಗ ಭಕ್ತಿಯಿರದಿದ್ದರೆ ಹೇಗೆ? ಆದರೆ ತಾನು ಹೆಣ್ಣು, ಪಾತ್ರ ಗಂಡು. ಭಕ್ತಿ ತೋರಿಕೊಳ್ಳುವಾಗ ಇಕ್ಕಟ್ಟು. ವ್ಯಕ್ತಿತ್ವ ಒಂದು, ಅಭಿನಯ ಇನ್ನೊಂದು. ಪಾತ್ರದಲ್ಲಿ ತಾದಾತ್ಮ್ಯವಂತೂ ಬರಲಾರದು. ಅದೇ, 'ಮೀರಾ'ದಲ್ಲಿ ಮೀರೆಯೇ ತಾನಾಗಿ ಹಾಡುವಾಗ ತನ್ಮಯತೆಯ ಗುಂಗಿನಲ್ಲಿ ಭಕ್ತಿಭಾವ ಶುದ್ಧವಾಯಿತು, ಸಹಜವಾಯಿತು. ಅಲ್ಲಿ ನಾಯಕಿಯು ಏಕಾಕಿನಿ; ಸಂಗೀತದ ಲಕ್ಷ್ಯ ಭಗವಂತನೇ. ಆದುದರಿಂದ ಮನುಷ್ಯ ವ್ಯವಹಾರದ ತೋರಿಕೆಯ ಅಗತ್ಯವಿರದು. ಅಭಿನಯವಾದರೂ ತನ್ನದೇ ವ್ಯಕ್ತಿತ್ವದ ಸಹಜ ಅಭಿವ್ಯಕ್ತಿಯೇ ಆಗಿಬಿಟ್ಟಿತು!

೬

ಸಂಪ್ರದಾಯ ಸಂಗೀತವಿದ್ವಾಂಸರು ತಮಿಳು ಚಲಚ್ಚಿತ್ರ ತೆರೆಯ ಮೇಲೆ ಕಾಣಿಸಿಕೊಂಡುದು ಅಪುರೂಪವೇನಲ್ಲ. ಜನಪ್ರಿಯ ಗಾಯಕರೂ, ಸ್ಫುರದ್ರೂಪಿಯೂ ಆಗಿದ್ದ ವಿ. ವಿ. ಶಠಕೋಪನ್ 1931ರಷ್ಟು ಹಿಂದೆಯೇ 'ವೇಣುಗಾನಂ' ಎಂಬ ಚಿತ್ರದಲ್ಲಿ ನಟಿಸಿದ್ದರು. ಮುಂದೆ ಅವರು 'ನವಯುವನ್' (1937) ಮತ್ತು 'ಮದನಕಾಮರಾಜನ್' (1941) ಚಿತ್ರಗಳಲ್ಲಿ ನಟಿಸಿದರು. 1933ರ ಸುಮಾರಿಗೆ ನಂಬೂರು ವಡಗರ್ರೈ ಸುಬ್ಬಯ್ಯ ಭಾಗವತರು ('ನಂದನಾರ್'), ಎನ್. ರಾಜಂ ('ಸೀತಾಕಲ್ಯಾಣ'), 1934ರಲ್ಲಿ ಜಿ. ಎನ್. ಬಾಲಸುಬ್ರಹ್ಮಣ್ಯಂ ('ಭಾಮಾವಿಜಯಂ') ಇವರು ತೆರೆಯ ಮೇಲೆ ತೋರಿಕೊಂಡರು; ಅದೇ ವರ್ಷ ಎಂ. ಕೆ. ತ್ಯಾಗರಾಜ ಭಾಗವತರು ('ಪವಳಕ್ಕೊಡಿ'ಯಲ್ಲಿ) ಕಾಣಿಸಿಕೊಂಡು ಸಿನಿಮಾ ಸಂಗೀತವನ್ನು ಜನಪ್ರಿಯವಾಗಿಸಿದರು. ಎನ್. ರಾಜಂ (ವೀಣಾ ಬಾಲಚಂದರ್ ಅವರ ಸೋದರ) ಅವರ ತಂದೆ ವಿ. ಸುಂದರಂ ಅಯ್ಯರು ವೃತ್ತಿಯಲ್ಲಿ ವಕೀಲರಾದರೂ 'ಸೀತಾಕಲ್ಯಾಣ'ವೆಂಬ ಚಿತ್ರದಲ್ಲಿ ಮಗ ರಾಜಂನೊಂದಿಗೆ ನಟಿಸಿದರು. ಎಂಎಸ್‌ರೊಂದಿಗೆ 'ಶಕುಂತಲೆ'ಯಲ್ಲಿ (1940) ನಾಯಕ ಪಾತ್ರವನ್ನು ವಹಿಸಿದ

ಜಿ. ಎನ್. ಬಾಲಸುಬ್ರಹ್ಮಣ್ಯಂ ಅದಲ್ಲದೆ, ಮೊದಲೇ ಮೇಲೆ ಹೇಳಿದ 'ಭಾಮಾವಿಜಯ', 'ಸತಿ ಅನುಸೂಯ' (1937), 'ರುಕ್ಮಾಂಗದನ್' (1946) ಮತ್ತು 'ಉದಯನ-ವಾಸವದತ್ತಾ' (1946) ಚಿತ್ರಗಳಲ್ಲಿ ಕಾಣಿಸಿಕೊಂಡರು. ಅಲ್ಲಿಂದ ಮುಂದೆ ಚಲಚ್ಚಿತ್ರರಂಗವನ್ನು ಬಿಟ್ಟರು.

ಎಂಎಸ್ 'ಸೇವಾಸದನ'ದಲ್ಲಿ ಅಭಿನಯಿಸಿದ ವರ್ಷವೇ (1938) ಅವರಿಗೆ ಗುರುಸ್ಥಾನದಲ್ಲಿದ್ದ ಮುಸಿರಿ ಸುಬ್ರಹ್ಮಣ್ಯ ಅಯ್ಯರು 'ಸಂತ ತುಕಾರಾಮ' ಚಿತ್ರದಲ್ಲಿ ನಾಯಕಪಾತ್ರ ವಹಿಸಿದ್ದರು. ಚಲಚ್ಚಿತ್ರಕ್ಷೇತ್ರದಲ್ಲಿರುವವರ ಬಗ್ಗೆ ಬೇಸರಬಂದು ಒಂದೇ ಚಿತ್ರಕ್ಕೆ ಸಾಕು ಮಾಡಿಕೊಂಡರು. ಎಂಎಸ್ ಅವರಿಗೆ ನೆರವಾದವರಲ್ಲಿ ಪಾಪನಾಶಂ ಶಿವನ್ ಚಲಚ್ಚಿತ್ರರಂಗಕ್ಕೆ ತುಂಬ ಹೊಂದಿಕೊಂಡವರು. ಸುಮಾರು ಎಪ್ಪತ್ತು ತಮಿಳು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಲ್ಲದೆ ತಾವೇ ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರು ('ಭಕ್ತಕುಚೇಲ' 1936, 'ತ್ಯಾಗಭೂಮಿ' 1939, 'ಭಕ್ತ ಚೇತ' 1940, 'ಕುಬೇರ ಕುಚೇಲ' 1943). ಎಂಎಸ್ ಅವರಿಗೆ ವಯಲಿನ್ ಪಕ್ಕವಾದ್ಯ ನುಡಿಸುತ್ತಿದ್ದ ಮೈಸೂರು ಟಿ. ಚೌಡಯ್ಯ ತಾವೇ 'ವಾಣಿ' (1943) ಎಂಬ ಚಿತ್ರವನ್ನು ತಯಾರಿಸಿ, ಅದರಲ್ಲಿ ತಮ್ಮ ಮಿತ್ರರಾದ ಚೆಂಬೈ ವೈದ್ಯನಾಥ ಭಾಗವತರಿಗೂ ಒಂದು ಪಾತ್ರವನ್ನು ಕೊಟ್ಟರು; ಅದು ಬರಿಯ ಸಂಗೀತಗಾರರಾಗಿ ಅಷ್ಟೆ! ಪಾಲಕ್ಕಾಡು ಮಣಿ ಅಯ್ಯರು ಅವರಿಗೆ ಅಲ್ಲಿ ಮೃದಂಗವಾದಕರು!

ಎಂಎಸ್‌ಗೆ ಕೆಲವು ಕೃತಿಗಳನ್ನು ಕಲಿಸಿ ಅವರಿಗೆ ನೆರವಾದ ಸಂಗೀತವಿದ್ವಾಂಸರಲ್ಲೂ ಕೆಲವರು ಚಲಚ್ಚಿತ್ರರಂಗದ ಅನುಭವವನ್ನು ಪಡೆದಿದ್ದರು; ಪಾಲಕ್ಕಾಡು ಕೆ. ವಿ. ನಾರಾಯಣಸ್ವಾಮಿ ('ಕಣ್ಣಪ್ಪ ನಾಯನಾರ್' 1938), ತುರೈಯೂರು ರಾಜಗೋಪಾಲಶರ್ಮಾ ('ಚಂದ್ರಸೇನ'), ಕಳಕ್ಕಾಡು ರಾಮನಾರಾಯಣಯ್ಯರು ('ರಾಮದಾಸ್' 1948). ಎಂಎಸ್ ಅವರು ಜನಪ್ರಿಯವನ್ನಾಗಿಸಿದ 'ಜಗದೋದ್ಧಾರನ' ಎಂಬ ಕನ್ನಡ ಹಾಡನ್ನು ಮೊದಲು ಹಾಡಿ ಧ್ವನಿಮುದ್ರಣ ಮಾಡಿಸಿದವರು ನಮ್ಮ ಬಿ. ಎಸ್. ರಾಜಯ್ಯಂಗಾರ್. ಎಂಎಸ್ ಇವರ ಧ್ವನಿಮುದ್ರಿಕೆಯನ್ನು ಕೇಳಿಯೇ ಸ್ಫೂರ್ತಿಗೊಂಡದ್ದು. ಇವರೂ ನಟರಾಗಿದ್ದವರೇ ('ಭಕ್ತ ಪ್ರಹ್ಲಾದ' 1967).

ಚಲಚ್ಚಿತ್ರದಲ್ಲಿ ನಟಿಸುವ ಅನುಭವ ಹಿರಿಯ ವಿದ್ವಾಂಸರಿಗೂ ಇದ್ದಿತು. ಮಹಾರಾಜಪುರಂ ವಿಶ್ವನಾಥಯ್ಯರು 'ನಂದನಾರ್' (1935) ಚಿತ್ರದಲ್ಲಿ, ಮದಿರಿಮಂಗಳಂ ನಟೇಶಯ್ಯರು 'ಭಕ್ತ ಶ್ರೀ ತ್ಯಾಗರಾಜ' (1937) ಚಿತ್ರದಲ್ಲಿ, ಎಂ. ಬಾಲಮುರಳೀಕೃಷ್ಣ ('ಭಕ್ತ ಪ್ರಹ್ಲಾದ' 1967) ಚಿತ್ರದಲ್ಲಿ, ನಾಗಸ್ವರ ಚಕ್ರವರ್ತಿ ಟಿ. ಎನ್. ರಾಜರತ್ನಂಪಿಳ್ಳೆ 'ಕಾಲಮೇಗಂ' (1940, ಇಲ್ಲಿಯೂ ಇವರ ನಾಗಸ್ವರವಾದನವೇ ಇದ್ದಿತು) ಚಿತ್ರದಲ್ಲಿ, ತಿರುವೆಂಗಾಡು ಸುಬ್ರಹ್ಮಣ್ಯಪಿಳ್ಳೆ ('ಅಮ್ಮಂಜಿ') ಚಿತ್ರದಲ್ಲಿ, ವಿಂಚಿಮೂರಿ ವರದರಾಜಯ್ಯಂಗಾರರು 'ಲವಂಗಿ' (1946) ಚಿತ್ರದಲ್ಲಿ, ಟಿ. ಎನ್. ಶೇಷಗೋಪಾಲನ್ 'ತೋಡಿರಾಗಂ' (1983) ಚಿತ್ರದಲ್ಲಿ, ಎಂ. ಕೆ. ತ್ಯಾಗರಾಜ ಭಾಗವತರು ಏಳು ಚಿತ್ರಗಳಲ್ಲಿ (1934 ರಿಂದ 1943 ರವರೆಗೆ) ಎಂ. ಎಂ. ದಂಡಪಾಣಿ ದೇಶಿಕರು ಐದು ಚಿತ್ರಗಳಲ್ಲಿ (1936 ರಿಂದ 1939ರವರೆಗೆ), ಹೊನ್ನಪ್ಪ ಭಾಗವತರು ಕನ್ನಡದ 'ಕೃಷ್ಣಲೀಲಾ' (1947) ಚಿತ್ರದಲ್ಲಿ, ಶೀರ್ಕಾಳಿ ಗೋವಿಂದರಾಜನ್ (ಹನ್ನೊಂದು ಚಿತ್ರಗಳಲ್ಲಿ, 1968 ರಿಂದ 1987ರವರೆಗೆ) ಇವರನ್ನು ಉಲ್ಲೇಖಿಸಬಹುದು.

ಸ್ತ್ರೀಯರಲ್ಲಿ ಪ್ರಮುಖರಾದ ಅಭಿನೇತ್ರಿ ಕೆ. ಬಿ. ಸುಂದರಾಂಬಾಳ್. ಅವರು 'ನಂದನಾರ್' ಚಿತ್ರದಲ್ಲಿ ಮಹಾರಾಜಪುರಂ ವಿಶ್ವನಾಥಯ್ಯರೊಂದಿಗೆ ಪಾತ್ರವಹಿಸಿದ್ದು ಸ್ವಾರಸ್ಯವಾಗಿದೆ. ಈಕೆ ಗಂಡುಪಾತ್ರವನ್ನು (ನಂದನಾರ್) ವಹಿಸಿದ್ದರು; ಮಹಾರಾಜಪುರಂ ಒಬ್ಬ ಬ್ರಾಹ್ಮಣ ಜಮೀನುದಾರ. ಅವನು ನಂದನಾರಿಗೆ (ಎಂದರೆ ಸುಂದರಾಂಬಾಳಿಗೆ) ಕಾಲುಮುಟ್ಟಿ ನಮಸ್ಕಾರ ಮಾಡುವ ದೃಶ್ಯ ಬರುತ್ತದೆ. ಇದು ಇಬ್ಬರಿಗೂ ಇರಸುಮುರಸು. ಮಹಾರಾಜಪುರಂ ಸುಂದರಾಂಬಾಳ ಕಾಲು ಹಿಡಿಯುವುದು ಹೇಗೆ? ಇದನ್ನು ಹೇಗೋ ಜಾಣತನದಿಂದ ಪರಿಹರಿಸಿಕೊಂಡರು. ಬ್ರಾಹ್ಮಣನು ಸಂತ ನಂದನಾರರ ಕಾಲನ್ನು ಹಿಡಿದನು; ಒಡನೆಯೇ ಸುಂದರಾಂಬಾಳ್ ಬ್ರಾಹ್ಮಣನ ಕಾಲನ್ನು ಹಿಡಿದಳು! ಇದಲ್ಲದೆ ಈ ಪ್ರತಿಭಾಶಾಲಿನಿ ಇನ್ನೂ ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದರು. 'ಅವ್ವಯಾರ್' (1953) ಪ್ರಖ್ಯಾತವಾಯಿತು. ಇನ್ನೊಬ್ಬಳು ಗಾಯಕಿ-ನಟಿ ಎನ್. ಸಿ. ವಸಂತಕೋಕಿಲಂ. ಆರು ಚಿತ್ರಗಳಲ್ಲಿ

ಕಾಣಿಸಿಕೊಂಡರು. ಈಕೆ 1942 ರಿಂದ 1950 ರವರೆಗೆ ಜನಾನುರಾಗವನ್ನು ಗಳಿಸಿದರು ('ಗಂಗಾವತಾರ'1942 – 'ಕೃಷ್ಣವಿಜಯ'1950). ಇನ್ನೊಬ್ಬ ಹೆಸರಾಂತ ಗಾಯಕಿ ಎಂ. ಎಲ್. ವಸಂತಕುಮಾರಿ (ಜಿಎನ್‌ಬಿ ಶಿಷ್ಯರಲ್ಲಿ ಅಗ್ರಗಣ್ಯೆ) 'ರಾಜಮುಕ್ತಿ' ಅಥವಾ 'ಕೃಷ್ಣಭಕ್ತಿ' (1948) ಎಂಬ ಚಿತ್ರದಲ್ಲಿ ಅಭಿನಯಿಸಿ, ಬೇಸರಗೊಂಡು ಚಲಚ್ಚಿತ್ರವನ್ನು ಮತ್ತೆಂದೂ ಸೇರುವುದಿಲ್ಲವೆಂದು ಪ್ರತಿಜ್ಞೆ ಮಾಡಿಬಿಟ್ಟರು! ಡಿ. ಕೆ. ಪಟ್ಟಮ್ಮಾಳ್ 'ವೀಟು' ಎಂಬ ಚಿತ್ರಕ್ಕೆ ಹಿನ್ನೆಲೆಯ ಗಾಯನಗಳನ್ನು ಒದಗಿಸಿದ್ದಾರೆ.

ಆದರೆ ಹೆಂಗಳೆಯರಲ್ಲಿ ಯಾರೂ ಎಂಎಸ್ ಮಟ್ಟವನ್ನು ಮುಟ್ಟಲಿಲ್ಲ. ಅವರೇನು ಉತ್ತಮ ನಟಿಯೆಂದು ಹೆಸರಾಗಲಿಲ್ಲ. ಕೆ. ಬಿ. ಸುಂದರಾಂಬಾಳ್ ಅವರಿಗಿಂತ ಎಷ್ಟೋ ಪಾಲು ಒಳ್ಳೆಯ ಅಭಿನೇತ್ರಿ. ಆದರೆ ಭಾವಪೂರ್ಣವಾಗಿ ಹಾಡುವುದರಲ್ಲಿ ಎಂಎಸ್‌ರನ್ನು ಬಿಟ್ಟರೆ ಬೇರೊಬ್ಬರಿಲ್ಲ.



ಎಂಎಸ್

ಪರಿಚ್ಛೇದ ನಾಲ್ಕು

ಸಂಗೀತ ಸಾಮ್ರಾಜ್ಞಿ

೧

ಭಾರತದ ಪ್ರಧಾನಿಯಾಗಿದ್ದ ಪಂಡಿತ ಜವಹರಲಾಲ ನೆಹ್ರು ಎಂಎಸ್ ಅವರನ್ನು ಕುರಿತು ಒಮ್ಮೆ ಹೇಳಿದ ಮಾತು ಪ್ರಸಿದ್ಧವಾಯಿತು– "ನಾನೇನು ಮಹಾ, ಒಬ್ಬ ಪ್ರಧಾನಿಯಷ್ಟೆ. ನೀವಾದರೋ ಸಂಗೀತ ಸಾಮ್ರಾಜ್ಞಿ!" ಇದು ಸರಿಯೇ. ಆದರೆ ಇದು ರಸಿಕನೊಬ್ಬನ ಎಣಿಕೆ. ಸಂಗೀತವೇನೋ ಸಾಮ್ರಾಜ್ಯವೇ; ತ್ಯಾಗರಾಜಸ್ವಾಮಿಗಳು 'ರಾಮಭಕ್ತಿಸಾಮ್ರಾಜ್ಯ' ಎಂದ ಅರ್ಥದಲ್ಲಿ. ಮಹಾತ್ಮಾ ಗಾಂಧೀಜಿಯವರು ನಾಡಿನ ಸಂಸ್ಕೃತಿಗೆ ನೆಹ್ರುಗಿಂತ ಹತ್ತಿರವಾಗಿದ್ದವರು. ಅವರು ಎಂಎಸ್ ವಿಚಾರವಾಗಿ ಹೇಳಿದ್ದು ಜನಮನದ ಅನಿಸಿಕೆಯೇ. ಅವರು ಮನು ಗಾಂಧಿಗೆ ಹೇಳಿದ ಮಾತು – "ಸುಬ್ಬುಲಕ್ಷ್ಮಿ ಹಾಡುವಾಗ ದೈವಕ್ಕೆ ಹತ್ತಿರವಾಗಿಬಿಡುತ್ತಾರೆ." ಇದು ನಮ್ಮ ಸಂಸ್ಕೃತಿಯ ನಾಡಿಯನ್ನು ಹಿಡಿದ ಸಂತನೊಬ್ಬನ ಮಾತು.

ಎಂಎಸ್ ತಮ್ಮ ಬಾಳಿನಲ್ಲೆಂದೂ ಸಾಮ್ರಾಜ್ಞಿಯಂತೆ ಇದ್ದವರಲ್ಲ, ನಡೆದುಕೊಂಡವರಲ್ಲ. ಸಂಗೀತವನ್ನೆಂದೂ ತಮಗೆ ಅಧೀನವೆಂದಾಗಲಿ, ತಮ್ಮ ಸ್ವತ್ತೆಂದಾಗಲಿ ಭಾವಿಸಿಕೊಂಡವರಲ್ಲ. ಸಂಗೀತ ಸೇವೆ ತನ್ನಿಂದ ನಡೆಯಬೇಕೆಂದು ನಂಬಿದ್ದವರು. ಈ ಸಂದರ್ಭದಲ್ಲಿ ನನ್ನ ಗುರುಗಳು ಹಿಂದಣಕಾಲದ ವೈಣಿಕರೊಬ್ಬರ ವಿಚಾರ ಹೇಳುತ್ತಿದ್ದುದು ನೆನಪಿಗೆ ಬರುತ್ತದೆ. ಈ ವಿದ್ವಾಂಸರು

ವೀಣೆ ನುಡಿಸುತ್ತಿರುವಾಗ ಸೊಗಸಾದ ನುಡಿಕಾರ ಬಂದರೆ, ಹೆಮ್ಮೆಯಿಂದ "ಹಾಗೆ ನುಡಿಯೇ, ಮುಂಡೆ!" ('ಅಷ್ಟ ಪಲುಕವೇ, ಮುಂಡ!') ಎಂದು ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದರಂತೆ. ತಾವು ದೊರೆ, ವೀಣೆ ತಮ್ಮ ಊಳಿಗದಲ್ಲಿರುವ ದಾಸಿ ಎಂದು ಅವರ ಭಾವನೆ. ಹಲವು ಸಂಗೀತಗಾರರಿಗೆ ಇದೇ ಕಲ್ಪನೆಯಿರುವುದನ್ನು ಕಾಣಬಹುದು, ತಮ್ಮ ಭೋಗಕ್ಕೆ ಸಂಗೀತವೊಂದು ಸಾಧನವಷ್ಟೆ. ಸಂಗೀತದ ಮೇಲೆ ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸಿಕೊಳ್ಳುವ ಹಂಬಲ ಹಲವರಿಗೆ. ತಮಗಾಗಿ ಸಂಗೀತ, ಸಂಗೀತಕ್ಕಾಗಿ ತಾವಲ್ಲ ಎನ್ನುವ ಎಣಿಕೆ.

ಇದಕ್ಕೆ ವಿಲಕ್ಷಣವಾಗಿ ತಮ್ಮ ಗುರುಗಳಾದ ವೈಣಿಕ ಶಿಖಾಮಣಿ ಶೇಷಣ್ಣನವರ ವಿಚಾರವನ್ನು ನನ್ನ ಗುರುಗಳು ಹೇಳುತ್ತಿದ್ದರು. ಶೇಷಣ್ಣನವರು ಮತ್ತೆ ಮತ್ತೆ ಹೇಳುತ್ತಿದ್ದರಂತೆ – "ನನ್ನ ಶಕ್ತಿಯಿದ್ದಷ್ಟು ನಾನು ನುಡಿಸಬಲ್ಲೆ; ವೀಣೆಯ ಸಾಮರ್ಥ್ಯಕ್ಕೆ ಸರಿಯಾಗಿ ನುಡಿಸುವ ಯೋಗ್ಯತೆ ನನಗೆಲ್ಲಿ ಬಂತು?" ಎಂದು. ವೀಣೆ ಅವರ ಪಾಲಿಗೆ ದೇವತೆ, ತಾಯಿ, ಸರಸ್ವತಿ; ಸಂಗೀತವೆನ್ನುವುದು ಒಂದು ಭಗವತ್ ಕೈಂಕರ್ಯ, ದೇವರಪೂಜೆ. ಎಂಎಸ್ ಅವರದ್ದು ಇದೇ ದೃಷ್ಟಿ. ಸಂಗೀತಸಾಮ್ರಾಜ್ಯವೆಂದರೆ ರಾಮಭಕ್ತಿಸಾಮ್ರಾಜ್ಯವೇ. ಕರ್ಣಾಟಕ ಸಂಗೀತದ ಮೂಲಸ್ತರ ಅದೇ ತಾನೆ? ಪುರಂದರದಾಸರೇ 'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ ಹರಿ, ತಾಳನೋ!' ಎನ್ನಲಿಲ್ಲವೆ? ಪ್ರೇಮವೆಂದರೆ ಭಗವದ್‌ಭಕ್ತಿಯೇ. ಈ ಪ್ರಣಾಳಿಕೆಯನ್ನು ನಂಬಿ ಅದರಂತೆ ನಡೆದುಕೊಂಡವರು ಎಂಎಸ್. ಇವರ ಪಾರಮ್ಯಕ್ಕೆ ಇದೇ ಕಾರಣ. ಭಕ್ತಿಯೇ ಸಂಗೀತದ ಜೀವಾಳ ಎಂದು ಕಾಣಿಸಿದವರು ಅವರು. ಸಂಗೀತವೆನ್ನುವುದು ಸನ್ಮಾರ್ಗ, ಭಕ್ತಿಯಿರದಿದ್ದರೆ ಸನ್ಮಾರ್ಗವಿರದು ಎಂಬ ತ್ಯಾಗರಾಜಸ್ವಾಮಿಗಳ ಮಾತನ್ನು ('ಭಕ್ತಿ ವಿನಾ ಸನ್ಮಾರ್ಗಮು ಗಲದು') ಮನಸ್ಸಿನಲ್ಲಿ ಎಡೆಬಿಡದೆ ಇರಿಸಿಕೊಂಡಿದ್ದರು.

ಅವರು ಕಲಿತ ಹಾಡುಗಳ ಸಂಖ್ಯೆ ಎರಡು ಸಾವಿರದ ಐನೂರನ್ನೂ ಮೀರಿದ್ದಿತು. ಒಂದೊಂದು ಹಾಡನ್ನು ಕಲಿತಮೇಲೂ, ಒಡನೆಯೇ ಮನೆಯಲ್ಲಿ ದೇವರಕೋಣೆಗೆ ಹೋಗಿ ತಮ್ಮ ಇಷ್ಟದೈವಗಳ ಮುಂದೆ ಕೂತು ಹಾಡುವರು.

ಹೀಗೆ ದೇವರಿಗೆ ಸಮರ್ಪಣೆಯಾದ ನಂತರವೇ ಇತರರೆದುರು ಹಾಡುವುದು. ಈ ಪದ್ಧತಿಯನ್ನು ಅವರು ಎಂದೂ ತಪ್ಪಿಸಲಿಲ್ಲವಂತೆ. ಹಾಡುಗಳನ್ನು ಕಲಿಯುವಾಗಲೂ ಅವರು ತೋರಿಸುತ್ತಿದ್ದ ಶ್ರದ್ಧೆ ಅನ್ಯಾದೃಶವಾಗಿದ್ದಿತು. ಭಕ್ತಿಭಾವ ಪ್ರಕಟವಾಗಿ ತೋರಿಕೊಳ್ಳುವುದು ಸಾಹಿತ್ಯದಲ್ಲೇ; ಹಾಡಿನ ಮಾತುಗಳನ್ನು, ಅವುಗಳ ತಾತ್ಪರ್ಯ-ಇಂಗಿತಗಳನ್ನು ಬಲ್ಲವರಿಂದ ಚೆನ್ನಾಗಿ ಅರಿತುಕೊಳ್ಳುವರು. ಸಂಗೀತ ಭಾಗವನ್ನೂ ಅಷ್ಟೇ ನಿಷ್ಠೆಯಿಂದ ಮನದಟ್ಟು ಮಾಡಿಕೊಳ್ಳುವರು. ಇಡೀ ಕೃತಿಯು ಮನೋಗತವಾಗಿ ಕಂಠಗತವಾದಮೇಲೇ ಸಭೆಯಲ್ಲಿ ಅದರ ವಿನಿಕೆ. ಪುಸ್ತಕವನ್ನೊ ಬರಹದ ಹಾಳೆಗಳನ್ನೊ ಎದುರಿಗಿರಿಸಿಕೊಂಡು ಹಾಡುವುದು ಸರಿಯಲ್ಲವೆಂದು ಅವರ ಎಣಿಕೆ.

'ವೆಂಕಟೇಶ ಸುಪ್ರಭಾತ' ಅವರ ಜನಪ್ರಿಯ ಮುದ್ರಿಕೆಗಳಲ್ಲಿ ಒಂದಷ್ಟೆ. ಅದನ್ನು ಅವರು ಅನಂತಶಯನಂ ಅಯ್ಯಂಗಾರರೆಂಬ ಸಂಸ್ಕೃತಪಂಡಿತರಿಂದ ಸುಮಾರು ಒಂದು ವರ್ಷಕಾಲ ಪಾಠ ಹೇಳಿಸಿಕೊಂಡರು. ಅರ್ಥ ತಿಳಿದುಕೊಂಡರು, ಉಚ್ಚಾರಣೆಯನ್ನು ಕಲಿತು ಗಟ್ಟಿಮಾಡಿಕೊಂಡರು. ಸಂಪೂರ್ಣವಾಗಿ ಅವರಿಗೆ ಅದು ಮನದಟ್ಟಾದಮೇಲೇ ಧ್ವನಿಮುದ್ರಣಕ್ಕೆ ತೊಡಗಿದುದು. ಸುಮಾರು ಹತ್ತು ಭಾಷೆಗಳಲ್ಲಿ ಅವರು ಹಾಡುಗಳನ್ನು ಹಾಡುತ್ತಿದ್ದರು. ಪ್ರತಿಯೊಂದು ಹಾಡನ್ನೂ ಹೀಗೆಯೇ ಅರ್ಥ ತಿಳಿದುಕೊಂಡು, ಆ ಭಾಷೆಯ ಉಚ್ಚಾರಣೆಯನ್ನೂ ಅರಿತುಕೊಂಡು ಹಾಡುವರು. ಸಾಹಿತ್ಯಕ್ಕೆ ಸ್ವಲ್ಪವೂ ಸ್ಖಾಲಿತ್ಯ ಬರದಂತೆ ಎಚ್ಚರವಹಿಸುವರು. ಹಾಡಿನ ಭಾವಕ್ಕೆ ಭಂಗಬರದಂತೆ ಹಾಡುವರು. ಅವರಿಗೆ ಮ್ಯಾಗ್ಸಸೇ ಪ್ರಶಸ್ತಿ ಬಂದಾಗ (1974ರಲ್ಲಿ) ಅವರು ಹೇಳಿದ್ದು– "ಸಂಗೀತಕ್ಕಿರುವ ಪ್ರಯೋಜನ ಒಂದೇ–ಭಗವಂತನೊಂದಿಗೆ ಸಂಪರ್ಕವನ್ನು ಸಾಧಿಸಿಕೊಳ್ಳುವುದು."

'ನಮ್ಮ ಸಂಗೀತದಲ್ಲಿ ಭಕ್ತಿಯೇ ರಸ' ಎನ್ನುವುದು ಅವರ ವಿನಿಕೆಗಳಲ್ಲಿ ಎದ್ದುಕಾಣುತ್ತಿದ್ದ ವಿವರ. ಅವರ ಕಡೆಗಾಲದಲ್ಲಿ ಅವರ ಬರಹವೊಂದನ್ನು ಶ್ರೀಮತಿ ಲಕ್ಷ್ಮೀ ವಿಶ್ವನಾಥನ್ ಉಳಿಸಿಕೊಂಡಿದ್ದಾರೆ. "ತಾಯಂದಿರು ಮಕ್ಕಳಿಗೆ ಸಂಗೀತದಲ್ಲಿ ಆಸಕ್ತಿಯನ್ನು ಹುಟ್ಟಿಸಬೇಕು. ಹಾಗೆ ಮಾಡಿದರೆ ನಾಡಿನಲ್ಲಿ

ಸಂಗೀತ ಹರಡುತ್ತದೆ. ಅದರಿಂದ ಭಕ್ತಿ ಹರಡುತ್ತದೆ. ಅದರಿಂದ ನಮ್ಮ ಜನ ಒಳ್ಳೆಯ ಬದುಕನ್ನು ಬಾಳುತ್ತಾರೆ" ('ನಾಟ್ಟಿಲ್ ಸಂಗೀತಂ ಪೆರುಗುಂ. ಅದಾವದು ಭಕ್ತಿ ಪೆರುಗುಂ...') ಇದು ಅವರ ದೃಷ್ಟಿ. ಭಕ್ತಿಯನ್ನು ಬೇರೂರಿಸಲು ಸಂಗೀತವೊಂದು ಸಾಧನ. ಅವರ ಬದುಕಿನಲ್ಲಿ ಭಕ್ತಿ ಹಾಸುಹೊಕ್ಕಾಗಿ ಸೇರಿಕೊಂಡಿದ್ದಿತು. ತ್ಯಾಗರಾಜರ ಕೀರ್ತನೆಗಳನ್ನು ಹಾಡುವಾಗ, ಕಡೆಯಲ್ಲಿ 'ತ್ಯಾಗರಾಜ' ಎಂಬ ಅಂಕಿತ ಬಂದೊಡನೆ ಕೈಜೋಡಿಸಿ ತಲೆಬಾಗಿಸಿ ಕಣ್ಣುಮುಚ್ಚಿ ನಮಸ್ಕರಿಸುವ ಹಳೆಯ ಸಂಪ್ರದಾಯವನ್ನೆಂದೂ ಅವರು ಬಿಡಲಿಲ್ಲ. ಮೊದಲಿಂದ ಕಡೆಯವರೆಗೂ ವಿನಿಕೆಯಲ್ಲಿ ಎದ್ದುಕಾಣುವ ರಸ ಅದು. ಒಡಲಲ್ಲಿ ತುಂಬಿ ಬಂದ ಭಕ್ತಿಭಾವ, ಎಡೆಬಿಡದ ಸಾಧನೆಯಿಂದ ಒದಗಿಬಂದ ಸ್ವರಶುದ್ಧಿ, ಶ್ರುತಿಶುದ್ಧಿ, ಲಯಶುದ್ಧಿಗಳು, ಇವುಗಳೊಂದಿಗೆ ಹೃದಯದಲ್ಲಿ ಅರಳಿಕೊಂಡ ದೈವಶ್ರದ್ಧೆಯ ಬೆಳಕು ಅವರ ಮುಖಮಂಡಲವನ್ನೇ ಬೆಳಗುತ್ತಿದ್ದಿತು. ಆ ಸೌಮ್ಯ, ಸಾತ್ತ್ವಿಕ, ಶಾಂತ, ಮಂದಹಾಸದ ಮುಖಮುದ್ರೆ ಯಾರನ್ನಾದರೂ ಬೆರಗುಗೊಳಿಸುತ್ತಿದ್ದಿತು, ಸೆಳೆದುಕೊಳ್ಳುತ್ತಿದ್ದಿತು. ಭಕ್ತಿಯ ನೆಲೆ ಅವರ ಸಂಗೀತಕ್ಕೂ ವ್ಯಕ್ತಿತ್ವಕ್ಕೂ ಸಮಾನವಾಗಿಯೇ ಮೆರುಗನ್ನು ನೀಡಿತು.

ಯುಎನ್ ಕೇಂದ್ರವಿದ್ದ ನ್ಯೂಯಾರ್ಕಿನಲ್ಲಿದ್ದಾರೆ; 1966ರ ಅಕ್ಟೋಬರ್ 22 ರಂದು. ಮರುದಿನ ಆ ಮಹಾಸಭೆಯಲ್ಲಿ ಇವರ ವಿನಿಕೆಯಾಗಬೇಕು. ಆ ಮುಂಜಾನೆಯೇ ಅವರ ಗಂಟಲು ತೊಂದರೆಕೊಡತೊಡಗಿತು; ಮಾತನಾಡುವುದೂ ಕಷ್ಟವಾಯಿತು. ಇನ್ನು ಮರುದಿನ ಹಾಡುವುದು ಹೇಗೆ? ಸುತ್ತಮುತ್ತ ಎಲ್ಲರಿಗೂ ಆತಂಕ; ಎಂಎಸ್ ಅವರಿಗೂ ಆತಂಕವೇ. ಒಡನೆಯೇ ಅವರು ತಮಗೆ ದೈವಸ್ಥಾನದಲ್ಲಿದ್ದ ಕಂಚಿ ಪರಮಾಚಾರ್ಯರ ಚಿತ್ರವೊಂದನ್ನು ಕೈಯಲ್ಲಿ ಹಿಡಿದು, ಧ್ಯಾನದಲ್ಲಿ ತೊಡಗಿದರು. ಇಪ್ಪತ್ತು ಗಂಟೆಗಳಷ್ಟು ಕಾಲ ಇದು ನಡೆಯಿತಂತೆ. ಗಂಟಲು ಸರಿಹೋಯಿತು; ಶಾರೀರ ಎಂದಿನಂತೆ ಕಳೆಗೊಂಡಿತು. ಕಂಚಿ ಪರಮಾಚಾರ್ಯರೇ ರಚಿಸಿದ್ದ ಸಂಸ್ಕೃತ ಹಾಡೊಂದನ್ನು ಹಾಡಿದರು; ವಸಂತದೇಸಾಯರು ಅದಕ್ಕೆ ಸ್ವರಸಂಯೋಜನೆ ಮಾಡಿದ್ದರು. ಜಗತ್ತಿನಲ್ಲಿ ಶಾಂತಿ ನೆಲಸಲೆಂದು ಸಂದೇಶ ಈ ರಚನೆಯದು ('ಮೈತ್ರೀಂ ಭಜತ').

ಮತ್ತೊಮ್ಮೆ ವಿನಿಕೆಯ ಹಿಂದಿನ ದಿನ ಸ್ಪಾಂಡಿಲೈಟಿಸ್ ಬೇನೆಯಿಂದ ತೋಳನೋವು ಸಹಿಸಲಾರದಷ್ಟು ತೊಂದರೆ ಕೊಟ್ಟಿತು. ಅವರ ಜ್ಯೋತಿಷಿ ಕವಿಸ್ಸೇರಿ ಸುಬ್ರಹ್ಮಣ್ಯಂ ಅವರನ್ನೂ ಕೇಳಿದರಂತೆ, ಮರುದಿನ ತಮಗೆ ಹಾಡಲಾದೀತೋ ಇಲ್ಲವೋ ಎಂದು. 'ದೈವದ ಮೇಲೆ ಭಾರ ಹಾಕಿ' ಎಂದು ಅವರು ಹೇಳಿದರಂತೆ. ದೈವ ಅವರಿಗೆ ಯಾವಾಗಲೂ ಒಲಿದದ್ದೇ ತಾನೆ? ಹಾಡಲಾಯಿತು, ಎಂದಿನಂತೆ ಜಯಭೇರಿಯೇ. ಬದುಕಿನಲ್ಲಿ ಅವರಿಗೆ ಕಷ್ಟಗಳು ಮತ್ತೆ ಮತ್ತೆ ಬಂದವು. 1982ರಲ್ಲಿ ತಮ್ಮ (ಎಂದರೆ ಸದಾಶಿವಂ ಅವರ) ಮಗಳು ರಾಧಾ, ತಮ್ಮ ಜೊತೆಯಲ್ಲಿ ಐವತ್ತು ವರ್ಷಗಳಿಂದ ಹಾಡುತ್ತಿದ್ದವಳು, ತಾವೇ ಅದಕ್ಕೆ ತಯಾರುಮಾಡಿದ್ದವಳು, ಮೆನಿಂಜೈಟಿಸ್ ರೋಗದಿಂದ ಗಾಸಿಗೊಂಡಾಗ ಅವರಿಗಾದ ದುಃಖಕ್ಕೆ ಎಣೆಯೇ ಇಲ್ಲ. ಆಗ ಅವರು ಹೇಳಿದ ಮಾತು, "ಈ ಕಷ್ಟಗಳೆಲ್ಲ ನಮ್ಮ ದೈವಭಕ್ತಿಯನ್ನು ಪರೀಕ್ಷೆ ಮಾಡುವುದಕ್ಕೆಂದೇ ಬರುತ್ತವೆ" ಎಂಬುದು. ಅವರೇನೋ ಈ ಪರೀಕ್ಷೆಯಲ್ಲಿ ಉತ್ತೀರ್ಣರೇ ಆದರೆನ್ನಿ. ಈ ಬಗೆಯ ಶಾರೀರದ ತೊಂದರೆ ಚೆಂಬೈ ಅವರಿಗೂ ಆಗಿದ್ದಿತು. ಗುರುವಾಯೂರು ಗುಡಿಯಲ್ಲಿ ಧ್ಯಾನಮಾಡಿ ನೀಗಿಸಿಕೊಂಡರು. ಹಾಗೆಯೇ ಪಂಡಿತ ಜಸರಾಜ್, ಸಿದ್ಧೇಶ್ವರೀದೇವಿ, ಕೆ. ಎಲ್. ಸೈಗಲ್ ಇವರ ಅನುಭವಗಳೂ. ಇವೆ.

ತಾಳ್ಳಪಾಕಂ ಅನ್ನಮಾಚಾರ್ಯರ ಕೀರ್ತನೆಗಳಲ್ಲಿ ಮೊದಲು ಅವರು ಕಲಿತದ್ದು 'ಶ್ರೀಮನ್ನಾರಾಯಣ' ಎಂಬುದು. ಅದನ್ನು ಕಲಿತು ಅರಗಿಸಿಕೊಂಡನಂತರ ಮೊಟ್ಟಮೊದಲು ತಿರುಪತಿ (ತಿರುಮಲೆ)ಯಲ್ಲಿ ದೇವರೆದುರು ಹಾಡಬೇಕೆಂದು ಸದಾಶಿವಂ ಸೂಚಿಸಿದರು. ಅದರಂತೆ ಎಂಎಸ್, ರಾಧಾ, ಸದಾಶಿವಂ ಬೆಟ್ಟವೇರಿ ಗುಡಿಯನ್ನು ಸೇರಿ ಗರ್ಭಗುಡಿಯ ಮುಂದೆ ನಿಂತರು. ವೆಂಕಟೇಶ್ವರನ ದಿವ್ಯಮಂಗಳ ವಿಗ್ರಹವನ್ನು ಕಣ್ಣಾರೆ ಕಂಡೊಡನೆ ಎಂಎಸ್‌ಗೆ ಎಚ್ಚರವೇ ತಪ್ಪಿದಂತಾಯಿತು; ಬೇರೊಂದು ಲೋಕಕ್ಕೇ ಸಂದುಬಿಟ್ಟರು. ಎಷ್ಟು ಹೊತ್ತಾದರೂ ಸುತ್ತಣ ಅರಿವು ಬರಲೇ ಇಲ್ಲ. ನಿಂತವರು ಹಾಗೆಯೇ ಮೈಮರೆತಿದ್ದಾರೆ. ಕಡೆಗೆ ಪಕ್ಕದಲ್ಲೇ ನಿಂತಿದ್ದ ಮಗಳು ರಾಧಾ ಹಾಡನ್ನು ಹಾಡುವಂತೆ ತೋಳು ತಿವಿದಳು. ಆಗ ಎಚ್ಚೆತ್ತು ಹಾಡಿದರಂತೆ.

ಅದೊಂದು ದಿವ್ಯಾನುಭವ ಎಂದು ಅವರೇ ನೆನಪಿಗೆ ತಂದುಕೊಳ್ಳುತ್ತಿದ್ದರು. ಅವರ ಭಕ್ತಿಯ ನಿರ್ಭರತೆಗೆ ಇದೊಂದು ನಿದರ್ಶನ.

ಅವರ ಈ ದೈವಭಕ್ತಿಗೆ ಹಿನ್ನೆಲೆಯಲ್ಲಿ ಹಲವು ಪ್ರಸಂಗಗಳಿದ್ದುವು. ಅವುಗಳಲ್ಲಿ ಒಂದು ಅವರು 'ಮೀರಾ' ಚಿತ್ರದಲ್ಲಿ 1947ರಲ್ಲಿ ಅಭಿನೇತ್ರಿಯಾಗಿದ್ದಾಗ ನಡೆದದ್ದು. ಸಂತ ಮೀರಾ ಯಮುನಾ ನದಿಯ ಮೇಲೆ ದೋಣಿಯಲ್ಲಿ ಹೋಗುತ್ತಿರುವಾಗ ದೋಣಿ ಮುಳುಗಿ, ನೀರಿನಲ್ಲಿ ಬಿದ್ದ ಮೀರೆಯನ್ನು ಕೃಷ್ಣನೇ ಅಂಬಿಗನಾಗಿ ತೋರಿಕೊಂಡು ಕಾಪಾಡಿದ ಸಂದರ್ಭ. ಚಿತ್ರಣ ನಡೆಯುತ್ತಿರುವಾಗ, ಎಂಎಸ್ ತಲೆಗೆ ಭಾರಿ ಪೆಟ್ಟಾಗಿ, ಪ್ರಜ್ಞೆ ತಪ್ಪಿದರಂತೆ. ಚಿತ್ರಣದ ಕೆಲಸಗಾರರು ಆಕೆಯನ್ನೆತ್ತಿ ಮೇಲೆ ತಂದು ಮಲಗಿಸಿದರು. ಸುಮಾರು ಹೊತ್ತು ಎಚ್ಚರ ಬಾರದಿದ್ದಾಗ ಎಲ್ಲರಿಗೂ ಆತಂಕವಾದುದು ಸಹಜ. ಆದರೆ ಯಾವ ಗಾಸಿಯೂ ಆಗದೆ ಮತ್ತೆ ಎಚ್ಚರಗೊಂಡು ಚಿತ್ರಣ ಮುಂದುವರೆಯಿತು. ಎಂಎಸ್ ಉಳಿದದ್ದೂ ಕೃಷ್ಣನ ಕೃಪೆಯಿಂದಲೇ ಎಂದು ಎಲ್ಲರೂ ಅಂದುಕೊಂಡರು. ಎಂಎಸ್‌ಗಿದ್ದ ದೈವಶ್ರದ್ಧೆ ಮೀರೆಗಿದ್ದಂತೆಯೇ ನಿಶ್ಚಲವಾಗಿದ್ದಿತು.

ಅವರ ಹಾಡಿಕೆ ಪಂಡಿತಪಾಮರರಿಗೆಲ್ಲ, ದೇಶವಿದೇಶದವರಿಗೆಲ್ಲ ಪ್ರಿಯವಾದುದು ಅದರಲ್ಲಿ ಉಕ್ಕಿ ಹರಿಯುತ್ತಿದ್ದ ಭಕ್ತಿಭಾವದಿಂದಲೇ. ಅಷ್ಟು ತನ್ಮಯತೆಯಿಂದ, ಭಾವಪರವಶರಾಗಿ ಹಾಡುವಾಗ ಯಾರ ಒಡಲು ತಾನೆ ಕರಗದು? ಆ ಮಾಧುರ್ಯಕ್ಕೆ ಯಾರು ತಾನೆ ಮಾರುಹೋಗರು?

೨

ದೈವಭಕ್ತಿಯ ಜೊತೆಜೊತೆಗೇ ಅವರಲ್ಲಿ ಮನೆಮಾಡಿದ್ದುದು ಗುರುಭಕ್ತಿ. ಇವರ ಗುರುಗಳಲ್ಲಿ ಬಾಳಿಗೆ ಬೆಳಕನ್ನು ತಂದುಕೊಟ್ಟ ಕಂಚಿ ಪರಮಾಚಾರ್ಯರು, ಪುಟ್ಟಪರ್ತಿ ಸಾಯಿಬಾಬಾ, ಹೃಷೀಕೇಶದ ಶಿವಾನಂದಸ್ವಾಮಿಗಳು ಇವರು ಉಲ್ಲೇಖಕ್ಕೆ ಬರುತ್ತಾರೆ. ಎಂಎಸ್ ವಿದ್ಯಾಗುರುಗಳಲ್ಲಿ ಪ್ರಮುಖರು ಶೆಮ್ಮಂಗುಡಿ

ಶ್ರೀನಿವಾಸಯ್ಯರು. ಇವರನ್ನು ಸದಾಶಿವಂ ಸಂಧಿಸಿದ್ದು 1933ರ ಸುಮಾರಿಗೆ; ಇಬ್ಬರೂ ಹತ್ತಿರದ ಗೆಳೆಯರಾದರು. ಸದಾಶಿವಂ ಇವರನ್ನು 'ಅಯ್ಯರ್‌ವಾಳ್' ಎಂದೇ ಕರೆಯುತ್ತಿದ್ದು, ಯಾವೊಂದು ಕೆಲಸದಲ್ಲೂ ಇವರ ಸಲಹೆಯನ್ನು ಸ್ವೀಕರಿಸುತ್ತಿದ್ದರು. ತಾಯಿ ಷಣ್ಮುಖವಮ್ಮಾಳೊಂದಿಗೆ ಕುಂಜಮ್ಮ ಹಾಡುತ್ತಿದ್ದುದನ್ನು ಇವರು ಕೇಳಿದ್ದರು. ಇವರು ತಿರುವಾಂಕೂರಿನಲ್ಲಿ ಮಹಾರಾಜಾ ಸ್ವಾತಿತಿರುನಾಳ್ ಕಾಲೇಜಿನ ಪ್ರಾಂಶುಪಾಲರಾಗಿರುವಾಗ ಚೆನ್ನೈಗೆ ಬಂದಾಗಲೆಲ್ಲ ಎಂಎಸ್‌ಗೆ ಕೆಲವು ಕೃತಿಗಳನ್ನು ಪಾಠಹೇಳುವರು. ಚೆನ್ನೈಗೆ ಬಂದಮೇಲಂತೂ ಸದಾಶಿವಂ ಜೊತೆಗೇ ಬಹುಕಾಲ ಇರುತ್ತಿದ್ದರು; ಅವರೊಂದಿಗೆ ಪ್ರವಾಸದಲ್ಲೂ ಸೇರುತ್ತಿದ್ದರು. ಎಂಎಸ್‌ಗೆ ಸಂಗೀತ ಶಿಕ್ಷಣದಲ್ಲೂ ತುಂಬ ನೆರವಾದರು. ಸದಾಶಿವಂ 'ಕಲ್ಕಿ ಗಾರ್ಡನ್ಸ್' ನಲ್ಲಿರುವಾಗ ಒಂದು ಆರ್ಥಿಕ ಸಂಕಟಕ್ಕೆ ಸಿಕ್ಕಿಹಾಕಿಕೊಂಡಿದ್ದ ಸಂದರ್ಭದಲ್ಲಿ, ಕಂಚಿ ಪರಮಾಚಾರ್ಯರ ಆಶೀರ್ವಾದವನ್ನು ಪಡೆದುಕೊಂಡು ಬರುವಂತೆ ಸೂಚಿಸಿದವರು ಶೆಮ್ಮಂಗುಡಿಯವರೇ. ಹಾಗೆ ಆಚಾರ್ಯರಲ್ಲಿ ಹೋದವರು ಪರಮಭಕ್ತರಾಗಿ ನಿಂತರು. ಎಂಎಸ್ ಅವರೂ ಇದರಲ್ಲಿ ಪಾಲ್ಗೊಂಡರು. ಆಚಾರ್ಯರಿಗೂ ಈ ದಂಪತಿಗಳ ಬಗ್ಗೆ ಆದರ-ಅಭಿಮಾನಗಳಿದ್ದುವು.

ಸಂಗೀತದಲ್ಲಿ ಅವರಿಗೆ ಅನೇಕರು ಗುರುಗಳಿದ್ದರು. ತಾಯಿಯೇ ಮೊದಲ ಗುರು. ಅರಿಯಕ್ಕುಡಿಯವರು ಹುಡುಗಿ ಕುಂಜಮ್ಮನಾಗಿದ್ದಾಗಲೇ ಪಾಠ ಹೇಳಿದವರು. ಮುಂದೆ ಮುಸಿರಿ ಸುಬ್ರಹ್ಮಣ್ಯಯ್ಯರು ಅನೇಕ ಕೃತಿಗಳನ್ನು ಕಲಿಸಿದರು; ಕೃತಿಗಳ ಅರ್ಥ, ರಾಗದ ಭಾವ, ನಿರೂಪಣೆಯಲ್ಲಿರಬೇಕಾದ ಗಾಂಭೀರ್ಯ, ಸಾಹಿತ್ಯದಲ್ಲಿ ಸ್ಪಷ್ಟತೆ ಇವುಗಳೆಲ್ಲವನ್ನೂ ಮುಸಿರಿ ಹೇಳಿಕೊಟ್ಟರು. ಅನಂತರ ಶೆಮ್ಮಂಗುಡಿಯವರಂತೂ ಹಲವು ವರ್ಷಗಳ ಒಡನಾಡಿಯಾಗಿ ಆಕೆಯ ಸಂಗೀತಕ್ಕೆ ಮೆರುಗುಕೊಟ್ಟರು ಮತ್ತು ಸ್ವಾತಿ·ತಿರುನಾಳರ ಕೃತಿಗಳನ್ನು ಕಲಿಸಿದರು. ಎಂಎಸ್ 1980ರಲ್ಲಿ ತಿರುಮಲೆ ತಿರುಪತಿ ದೇವಸ್ಥಾನದವರಿಂದ 'ಆಸ್ಥಾನ ವಿದ್ವಾನ್' ಪಟ್ಟಕ್ಕೆ ನೇಮಕಗೊಂಡಾಗ ಆಕೆಯ ಷರತ್ತು, ತನ್ನ ಮೂವರು ಗುರುಗಳಾದ ಮುಸಿರಿ, ಶೆಮ್ಮಂಗುಡಿ ಮತ್ತು ಅರಿಯಕ್ಕುಡಿ ಇವರನ್ನು ಮೊದಲು ಆಸ್ಥಾನ ವಿದ್ವಾಂಸರಾಗಿ ನೇಮಕ ಮಾಡಬೇಕೆಂಬುದು. ದೇವಸ್ಥಾನದವರು

ಒಪ್ಪಿ, ಈ ಮೂವರನ್ನು ನೇಮಕಮಾಡಿದಮೇಲೇ ತಾವು ನೇಮಕಗೊಂಡರು. ಗುರುಭಕ್ತಿಯ ನಿದರ್ಶನವೊಂದನ್ನು ಇಲ್ಲಿ ಕಾಣುತ್ತೇವೆ.

ಇವರಿಗೆ ಗುರುಗಳಾಗಿದ್ದ ಎಂಟು ಮಂದಿ 'ಸಂಗೀತ ಕಲಾನಿಧಿ'ಗಳೆಂದು ಸನ್ಮಾನಿತರಾದರು. ಮೇಲೆ ಕಾಣಿಸಿದ ಮೂವರಲ್ಲದೆ, ತಮಗೆ ಮೊದಲು ಪಲ್ಲವಿ ಪಾಠ ಮಾಡಿದ ಮಳವರಾಯನೆಂಡಾಲ್ ಸುಬ್ಬರಾಮಭಾಗವತರು, ಪಂತುವರಾಳಿ ರಾಗದ 'ಎನ್ನಗಾನು ರಾಮಭಜನ' ಕೃತಿಯನ್ನು ಕಲಿಸಿದ ಜಿ. ಎನ್. ಬಾಲಸುಬ್ರಹ್ಮಣ್ಯಂ, ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಕಲಿಸಿದ ಟಿ. ಎಲ್. ವೆಂಕಟರಾಮಯ್ಯರ್, ತಮಗೆ ವೀಣಾಶಿಕ್ಷಕರಾಗಿದ್ದ ಕೆ. ಎಸ್. ನಾರಾಯಣಸ್ವಾಮಿ, ಅರಿಯಕ್ಕುಡಿಯ ಪಟ್ಟಶಿಷ್ಯರೂ ತಮಗೆ ಕೆಲವು ತ್ಯಾಗರಾಜ ಕೃತಿಗಳನ್ನು ಕಲಿಸಿದವರೂ ಆದ ಪಾಲಕ್ಕಾಡು ಕೆ. ವಿ. ನಾರಾಯಣಸ್ವಾಮಿ, ತಮಗೆ ಪದಗಳನ್ನೂ ಜಾವಳಿಗಳನ್ನೂ ಕಲಿಸಿದ ತಂಜಾವೂರು ಬೃಂದಾ (ವೀಣಾ ಧನಂ ಮೊಮ್ಮಗಳು), ಮತ್ತು ತಾವು ಚಲಚ್ಚಿತ್ರ ನಟಿಯಾಗಿರುವಾಗಲೂ ಅನಂತರವೂ ತಮಗೆ ಹಲವು ತಮಿಳು ಹಾಡುಗಳನ್ನು ಹೇಳಿಕೊಟ್ಟ ಪಾಪನಾಶಂ ಶಿವನ್, ಇವರಲ್ಲದೆ ವೀಣಾ ಬಾಲಚಂದರ್ ಅವರ ಸೋದರ ಎಸ್. ರಾಜಂ ಅವರಿಂದಲೂ ಹಲವು ಕೃತಿಗಳನ್ನು ಕಲಿತರು. ತುರೈಯೂರು ರಾಜಗೋಪಾಲ ಶರ್ಮಾ ಅವರ ಮಾರ್ಗದರ್ಶನವೂ ಇವರಿಗಿದ್ದಿತು. ಮಾಯಾವರಂ ಕೃಷ್ಣಯ್ಯರ್, ಎಸ್. ರಾಮನಾಥನ್, ನೇದನೂರಿ ಕೃಷ್ಣಮೂರ್ತಿ ಇವರೂ ಆಗಾಗ ನೆರವಾದರು. ಅನ್ನಮಾಚಾರ್ಯರ ಕೃತಿಗಳಿಗೆ ಸ್ವರಸಂಯೋಜನೆ ಮಾಡಿಕೊಟ್ಟು, ಹಲವು ಬಗೆಗಳಲ್ಲಿ ಅವರಿಗೆ ಸಹಕಾರ ನೀಡಿದವರು ಕಡಯನಲ್ಲೂರು ವೆಂಕಟರಾಮನ್ ಅವರು.

ಬಾಳಿನುದ್ದಕ್ಕೂ ಸಂಗೀತ ವಿದ್ಯಾರ್ಥಿನಿಯೇ ಆಗಿದ್ದು, ಹಲವು ಕೃತಿಗಳನ್ನು ಹಲವರಿಂದ ಕಲಿಯಲು ಎಂದೂ ಸಿದ್ಧರಾಗಿರುತ್ತಿದ್ದರು. ಕರ್ನಾಟಕ ಪದ್ಧತಿಯ ಸಂಪ್ರದಾಯ ಸಂಗೀತದ ವಿಚಾರ ಆಗಲೇ ಬಂದಿದೆ. ಸದಾಶಿವಂ ಇವರನ್ನು ವಿಶ್ವವಿಖ್ಯಾತ ಗಾಯಕಿಯನ್ನಾಗಿ ಮಾಡುವ ಹಂಬಲವನ್ನು ಹೊಂದಿದ್ದರು. ಅದಕ್ಕೆ ಮೊದಲು ಉತ್ತರ ಭಾರತದಲ್ಲಿ ಎಂಎಸ್ ಜನಪ್ರಿಯ ಗಾಯಕಿಯಾಗಬೇಕೆನ್ನುವ ಹವಣಿಕೆಯಿಂದ, ಹಿಂದೂಸ್ಥಾನೀ ಪದ್ಧತಿಯ



ಪ್ರಖ್ಯಾತ ಹಿಂದೂಸ್ಥಾನೀ ಗಾಯಕಿ ಸಿದ್ಧೇಶ್ವರೀದೇವಿ

ಸಂಪ್ರದಾಯ ಸಂಗೀತದಲ್ಲಿ ಶಿಕ್ಷಣವನ್ನು ದೊರಕಿಸಿಕೊಟ್ಟರು; ಅವರು ನಿರ್ದೇಶಿಸಿದ 'ಮೀರಾ' ಚಿತ್ರದ ಹಿಂದಿ ಸಂಸ್ಕರಣಕ್ಕೂ ಇದರ ಅಗತ್ಯವಿದ್ದಿತು. ಹಿಂದೂಸ್ಥಾನೀ ಸಂಗೀತದ ಅನಭಿಷಿಕ್ತ ಸಾಮ್ರಾಜ್ಞಿ, ವಾರಣಾಸಿಯ ಸಿದ್ಧೇಶ್ವರೀದೇವಿ ಚೆನ್ನೈಗೆ ಬಂದು, ಇವರ ಮನೆಯಲ್ಲೇ ಆರು ತಿಂಗಳು ಬಿಡಾರಹೂಡಿ, ಎಂಎಸ್‌ಗೆ ಮತ್ತು ಮಗಳು ರಾಧಾಗೆ, ಹಲವು ಠುಮ್ರಿ ಗಳನ್ನೂ ಟಪ್ಪಾಗಳನ್ನೂ ಕಲಿಸಿದರು. ಈಕೆಯ ಕ್ರಮ, ಬೆಳಿಗ್ಗೆ ಏಳೂವರೆ ಗಂಟೆಗೆ ಅಭ್ಯಾಸಕ್ಕೆ (ರಿಯಾಜ್) ಕೂಡುವುದು, ಮಧ್ಯಾಹ್ನ ಊಟದ ವೇಳೆಯವರೆಗೂ ಸಾಧನೆ. ಯಮನ್ ರಾಗದ ಮೂಲಸ್ವರಗಳನ್ನು ನೂರೆಂಟುಬಾರಿ ಹಾಡುವುದು; ಜಪಮಾಲೆಯಲ್ಲಿ ಈ ಸಂಖ್ಯೆಯ ಎಣಿಕೆ. ಎಂಎಸ್‌ಗೂ ಇದೇ ಕ್ರಮ ಹಿಡಿಸಿ, ತಮ್ಮ ಎಂಬತ್ತನೆಯ ವಯಸ್ಸಿನವರೆಗೂ, ಆಚರಣೆಯಲ್ಲಿರಿಸಿಕೊಂಡಿದ್ದರು.

ಇದಕ್ಕೆ ಮೊದಲೇ ಅವರು ಶ್ರೀನಿವಾಸರಾವ್ ಎಂಬುವವರಿಂದ ಭಜನೆಗಳನ್ನೂ ಹಿಂದೂಸ್ಥಾನೀ ಸಂಗೀತದ ಪರಿಚಯವನ್ನೂ ಪಡೆದು

ಕೊಂಡಿದ್ದರು. ನಾರಾಯಣರಾವ್ ವ್ಯಾಸ್ ಎಂಬ ಇನ್ನೊಬ್ಬ ಗುರುವಿನಿಂದಲೂ ಹಿಂದೂಸ್ಥಾನೀ ರಾಗಗಳನ್ನು ಕಲಿತಿದ್ದರು. ಮುಂದೆ 1930ರ ಸುಮಾರಿಗೆ ಕಲ್ಕತ್ತೆಯ ದ್ವಿಜೇಂದ್ರಲಾಲ ರಾಯ್‌ರವರಲ್ಲಿ ಕೆಲವು ಖಯಾಲ್‌ಗಳನ್ನು (ಛೋಟಾ)ಖಯಾಲ್, ಝಿಮ್ರಿ, ಮಿಶ್ರಖಮಾಸ್, ತಿಲಕಾಮೋದ್, ಜೋನ್‌ಪುರಿ ರಾಗಗಳಲ್ಲಿ, ಅಭ್ಯಾಸ ಮಾಡಿದರು. ಪಾಂಡಿಚೇರಿಯ ಅರವಿಂದಾಶ್ರಮದ ದಿಲೀಪಕುಮಾರ ರಾಯ್‌ರವರಿಂದ ಭಜನೆ, ರವೀಂದ್ರಸಂಗೀತ, ಗೌಡೀಯ ಪದ್ಧತಿಯ ಸಂಕೀರ್ತನಗಳನ್ನು ಕಲಿತರು. ಬೇಗಂ ಅಖ್ತಾರ್ ತಮ್ಮ ಕಡೆಯ ದಿನಗಳಲ್ಲಿ ಎಂಎಸ್‌ರನ್ನು ಭೇಟಿಮಾಡಿ ಹಿಂದೂಸ್ಥಾನೀ ಸಂಗೀತದ ಮರ್ಮಗಳನ್ನು ತಿಳಿಸಿಕೊಟ್ಟರು.

ಎಂಎಸ್ 1943ರಲ್ಲಿ ಮುಂಬಯಿಯ ವಿಕ್ರಮಾದಿತ್ಯ ಸಂಗೀತ ಸಮ್ಮೇಳನಕ್ಕೆ ಹೋಗಿದ್ದಾಗ, ಇವರ ಶಂಕರಾಭರಣ ರಾಗವನ್ನು ಕೇಳಿ ಆವೇಶ ತಳೆದ ಓಂಕಾರನಾಥ ಠಾಕುರರು ವಿನಿಕೆಯ ನಡುವೆಯೇ ಎದ್ದುಹೋಗಿ ಪ್ರಶಂಸಿಸಿದರು. ಬಡೇಗುಲಾಂ ಅಲಿಖಾನರು 'ಸುಸ್ವರಲಕ್ಷ್ಮಿ ಶುಭಲಕ್ಷ್ಮಿ' ಎಂದರು. ರೋಷನಾರಾ ಬೇಗಂ, ರವಿಶಂಕರ್, ಪನ್ನಾಲಾಲ ಘೋಷ್, ಅಮೀರ್‌ಖಾನ್ ಮುಂತಾದವರು ಮುಕ್ತಕಂಠದಿಂದ ಹೊಗಳಿದರು. ಇವರ ಅರ್ಧಗಂಟೆಯ ಪಂತುವರಾಳಿ (ಅವರ ಪೂರಿಯಾ ಧನಶ್ರೀ) ರಾಗಾಲಾಪನೆಯನ್ನು ಕೇಳಿದ ತೊಂಬತ್ತು ವರ್ಷಗಳ ಗಾಯಕ ಅಲ್ಲಾದಿಯಾಖಾನ್ ಸಂತೋಷಪಟ್ಟು ಹರಸಿದರು. ಎಂಎಸ್ ಅವರಿಗೆ ಬಡೇಗುಲಾಂ ಅಲಿಖಾನ್ ಮತ್ತು ಅಲ್ಲಾದಿಯಾಖಾನ್‌ರ ಸಂಗೀತವೆಂದರೆ ತುಂಬ ಮೆಚ್ಚುಗೆ. ಇವರಿಬ್ಬರೂ ಸಂಗೀತಕ್ಕಾಗಿಯೇ ಜನ್ಮವೆತ್ತಿದವರು. ವೀಣಾ ಧನಂಗೂ ಇವರಿಬ್ಬರ ಗಾಯನವೆಂದರೆ ರುಚಿ. ಬಡೇಗುಲಾಂ ಅಲಿಖಾನ್ ಸಂಗೀತವನ್ನು ಕೇಳಿ ಜಿಎನ್‌ಬಿ ಎದ್ದು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟರಂತೆ! ಎಂಎಸ್ ಸಂಗೀತವೆಂದರೆ ಬಡೇಗುಲಾಂ ಅಲಿಖಾನರಿಗೂ ಹಿತ. 1960ರ ಸುಮಾರಿಗೆ ಆತ ಹೇಳಿದ್ದು : "ಪಟ್ಟಮ್ಮಾಳ್ ಸಂಗೀತ ವೀಣಾವಾದನದಂತೆ, ವಸಂತಕುಮಾರಿಯದು ನಾಗಸ್ವರದಂತೆ, ಎಂಎಸ್‌ದು ನಮ್ಮ ಶೆಹನಾಯ್, ಹೆಚ್ಚೇನು ಹೇಳುವುದು?" ಯಾರಾದರೂ ಎಂಎಸ್

ಬಡೇಗುಲಾಂ ಅಲಿಖಾನ್

ಹೆಸರನ್ನು ಎತ್ತಿದೊಡನೆ ವಿಲಾಯತ್‌ಖಾನರು ಕೈಜೋಡಿಸಿ ಕಣ್ಣುಮುಚ್ಚುವರು. ಎಂಎಸ್ ಸಂಗೀತವನ್ನು ಕಾನನ್‌ಬಾಲಾ ಧ್ವನಿಮುದ್ರಣ ಮಾಡಿಸಿಕೊಂಡರು. ಮುಂಬಯಿಯಲ್ಲಿ ಎಂಎಸ್ ಗಾಯನದ ಧ್ವನಿಮುದ್ರಣ ಆಗುತ್ತಿರುವಾಗ ಲತಾಮಂಗೇಶಕರ್ (ಆಗ ಇನ್ನೂ ಹುಡುಗಿ, ಆದರೂ ಪ್ರಖ್ಯಾತರಾಗುತ್ತಿದ್ದರು) ಅಲ್ಲೇ ಇದ್ದರಂತೆ. ಅವರ ಹಾಡಿಕೆಯೂ ಧ್ವನಿಮುದ್ರಣವಾಗಬೇಕಿದ್ದಿತು, ಕಾಯುತ್ತಿದ್ದರು. ಎಂಎಸ್‌ದಾದ ಮೇಲೆ ಕಾರ್ಯನಿರ್ವಾಹಕರು ಲತಾಮಂಗೇಶಕರರನ್ನು ಕರೆದಾಗ ಆಕೆ "ಇಂಥ ಸಂಗೀತವಾದ ಮೇಲೆ ನನ್ನದೆ? ಖಂಡಿತ ಆಗದು. ಇದನ್ನು ಕೇಳಿದ ಮೇಲೆ ಈಗ ನನಗೆ ಹಾಡುವ ಧೈರ್ಯ ಇಲ್ಲ. ನಾಳೆ ಆಗಲಿ!" ಎಂದುಬಿಟ್ಟರಂತೆ.

ಮೊದಲು ಕಲಿತದ್ದು ಮೀರಾ ಭಜನೆಗಳಾದರೂ ಮುಂದೆ ತುಲಸಿದಾಸ, ಸೂರದಾಸ, ಕಬೀರದಾಸ, ಗುರುನಾನಕರು ಮೊದಲಾದವರ ಹಾಡುಗಳನ್ನೂ ಹಾಡುತ್ತಿದ್ದರು. ಹಿಂದಿ ಮಾತ್ರವಲ್ಲದೆ ಗುಜರಾತಿ, ಪಂಜಾಬಿ, ಮರಾಠಿ ರಚನೆಗಳನ್ನೂ ಕ್ರಮವರಿತು ಪಾಠಮಾಡಿದ್ದರು. ಮುಖ್ಯವಾಗಿ ಉತ್ತರ ಭಾರತದಲ್ಲಿ ಜನಪ್ರಿಯವಾದುದು ಭಜನೆಗಳು. ದೇಶದ ಹೊರಗಿನ ರಸಿಕರಿಗೂ ರುಚಿಯಾದುವು ಇವೇ. ಭಜನೆಯನ್ನು ಶಾಸ್ತ್ರೀಯ ಸಂಗೀತದ ನೆಲೆಗೇರಿಸಿದವರು ಇವರೇ.

ಎಂಎಸ್ ಅವರ ಗುರುಭಕ್ತಿಯ ಇನ್ನೊಂದು ಅಭಿವ್ಯಕ್ತಿಯನ್ನೂ ಗಮನಿಸಬೇಕು. ಯಾವ ಹಾಡನ್ನು ಯಾರಿಂದ ಕಲಿತರೋ ಅದೇ ಪಾಠಾಂತರವನ್ನು ಸ್ವಲ್ಪವೂ ಮಾರ್ಪಡಿಸದೆ ಕಲಿತ ಹಾಗೆಯೇ ಸಾಹಿತ್ಯವನ್ನೂ ಸ್ವರವನ್ನೂ ಉಳಿಸಿಕೊಳ್ಳುವುದೂ ಗುರುನಿಷ್ಠೆಯಲ್ಲವೆ? ಅದಕ್ಕೆ ತಮ್ಮ ಬೆಡಗು-ಬಿನ್ನಾಣಗಳನ್ನೂ ಕಲ್ಪನೆ-ಕೊಡುಗೆಗಳನ್ನೂ ಸೇರಿಸದೆ ಇದ್ದಾಗ ತಾನೆ ಸಂಪ್ರದಾಯದ ಸ್ವಾರಸ್ಯ ಕಾಣುವುದು? ಗಾಯಕನಾದವನು ವಾಗ್ಗೇಯಕಾರನಿಗೂ ರಸಿಕಶ್ರೋತೃವಿಗೂ ನಡುವೆ ತಲೆಹಾಕಿಕೊಂಡು ಬರಬಾರದು. ಸಂತನಾದ ವಾಗ್ಗೇಯಕಾರನ ಪ್ರತಿಭೆಯ ಪರಿಚಯವೇ ರಸಿಕನಿಗೆ ಆಗಬೇಕಾದುದು. ನಾಲ್ಕು ಕಾಲ ಉಳಿಯುವುದು, ರಸಿಕರ ಸಂಸ್ಕಾರಕ್ಕೆ ಕಾರಣವಾಗುವುದು ಅದೇ. ಈ ನಿಲುವು ಎಂಎಸ್‌ರವರದ್ದು. ಕಲ್ಪನೆ ಏನಿದ್ದರೂ ಆಲಾಪನೆಯಲ್ಲಿ, ನೆರವಲ್ಲಿನಲ್ಲಿ, ಸ್ವರಸಂಯೋಗದಲ್ಲಿ. ಕೃತಿಯಲ್ಲಿರುವ ರಾಗಭಾವ, ಸಾಹಿತ್ಯಭಾವಗಳನ್ನು ಮಾರ್ಪಡಿಸುವ ಅಧಿಕಾರ ಗಾಯಕನಿಗಿರದು. ವಾಗ್ಗೇಯಕಾರರ ವಿಚಾರವಾಗಿ ಹಾಡುವವರಿಗೆ ಗೌರವಬುದ್ಧಿಯಿರಬೇಕು, ಆದರವಿರಬೇಕು. ಅವರ ಕೃತಿಗಳನ್ನು ತಮಗೆ ಕಲಿಸಿದ ಗುರುಗಳಲ್ಲಿ ಭಕ್ತಿಯಿರುವುದಾದರೆ ಅವರು ಕಲಿಸಿದ್ದನ್ನು ಗಾಯಕರು ಯಥಾವತ್ತಾಗಿ ನಿರೂಪಿಸಬೇಕು. ಇದನ್ನು ಎಂಎಸ್ ನಂಬಿದ್ದರು.

ಎಂಎಸ್ ಅವರ ಗುರುಭಕ್ತಿಯ ಇನ್ನೊಂದು ಮುಖ ಅವರಲ್ಲಿದ್ದ ಪತಿಭಕ್ತಿ. ಪತ್ನಿಗೆ ತನ್ನ ಪತಿಯೇ ಪರದೈವವೆನ್ನುವುದು ಹಳೆಯಕಾಲದ ಉಪದೇಶ. ಗಂಡಿನ ಹೆಗ್ಗಳಿಕೆಯುನ್ನು ಹೆಣ್ಣಿನ ಮೇಲೆ ಹೇರುವ ಹವಣಿಕೆಯಿದೆಂದು ಬೇರೆ ಹೇಳಬೇಕೆ? ಗಂಡೇ ಹೆಣ್ಣಿಗೆ ಮಾಡಿದ ಉಪದೇಶವೆಂಬುದೂ ಸ್ಪಷ್ಟವೇ. ಆದರೆ ಈ ಉಪದೇಶವನ್ನು ಯಾರು ಯಾವ ಕಾಲದಲ್ಲಿ, ಎಷ್ಟರಮಟ್ಟಿಗೆ ಪಾಲಿಸುತ್ತಿದ್ದರೋ ತಿಳಿಯದು. ಪುರಾಣದ ಕತೆಗಳನ್ನು ಬಿಟ್ಟರೆ, ಈ ಉಪದೇಶದ ಅನುಸರಣೆ ತೀರ ವಿರಳವೇ ಎನ್ನಿ. ಅದರ ಯುಕ್ತಾಯುಕ್ತತೆಗಳೇನಾದರೂ ಇರಲಿ, ಎಂಎಸ್ ಅಂತೂ ಈ ಉಪದೇಶವನ್ನು ಪರಿಪಾಲಿಸಿದರು. ಅವರ ಗಂಡ ಸದಾಶಿವಂ ಅವರ ಪಾಲಿಗೆ ದೈವ.

ತನ್ನ ಎಳೆಯ ವಯಸ್ಸಿನಲ್ಲೇ ಮಧುರೆಯನ್ನು ತೊರೆದು ಚೆನ್ನೈಗೆ ಬಂದು, ಸದಾಶಿವಂ ಆಸರೆಯಲ್ಲಿ ನಿಂತಾಗಿನಿಂದ ಸದಾಶಿವಂ ಅವರಲ್ಲಿ ಶ್ರದ್ಧೆ, ವಿಶ್ವಾಸ, ಒಂದು ತೆರನಾದ ಭಕ್ತಿ ಬೆಳೆದುಬಂದುವು. ಮೊದಲಲ್ಲಿ 'ಮಾಮ', ಮದುವೆಯಾದ ಮೇಲೂ 'ಮಾಮ'ನೇ ಆಗಿಬಿಟ್ಟಿದ್ದರು. ಆಕೆಯ ಸಂಗೀತ ಊರ್ಜಿತವಾದುದೂ, ವ್ಯಕ್ತಿತ್ವ ಉಜ್ವಲವಾದುದೂ, ಆಕೆಗೆ ವಿಪುಲವಾದ ಜನಪ್ರೀತಿ, ವಿಶ್ವವಿಖ್ಯಾತಿಗಳು ಒದಗಿಬಂದುದೂ ಈ 'ಮಾಮ'ನಿಂದಲೇ. ಎಂಎಸ್ 1966ರಲ್ಲಿ ಯುಎನ್ ಸಂಸ್ಥೆಯಲ್ಲಿ (ನ್ಯೂಯಾರ್ಕಿನಲ್ಲಿ) ಹಾಡಿ ನೆರೆದ ಎಲ್ಲ ಗಣ್ಯರಿಂದಲೂ ಸನ್ಮಾನಿಸಲ್ಪಟ್ಟಾಗ, ಏಕಾಂತದಲ್ಲಿ ಸದಾಶಿವಂ ತಮ್ಮ ನೆಚ್ಚಿನ ಬಂಟನಾಗಿದ್ದ 'ಕಲ್ಕಿ' ಕಣ್ಣನ್ ಕೈಹಿಡಿದು "ಇವಳನ್ನು ವಿಶ್ವವಿಖ್ಯಾತ ಗಾಯಕಿಯನ್ನಾಗಿ ಮಾಡಬೇಕೆಂಬ ಆಸೆ ನನಗಿದ್ದಿತು. ಇಂದು ಅದು ಕೈಗೂಡಿತು" ಎಂದು ಹೇಳುವಾಗ ಕಣ್ಣೀರು ಧಾರೆಯಾಗಿ ಸುರಿಯಿತಂತೆ. ಪತಿಯನ್ನು ಎಂಎಸ್ ದೈವವೆಂದು ಕಂಡದ್ದರಲ್ಲಿ ಆಶ್ಚರ್ಯವೇನು? ಅವರದೊಂದು ಅಪುರೂಪ ದಾಂಪತ್ಯ. ಎಂಎಸ್ ಏನೋ ಸಂಗೀತ ಸಮಾರಾಧನೆಗಾಗಿಯೇ ಭೂಮಿಯ ಮೇಲೆ ಬಂದಿಳಿದ ಅಪ್ಸರೆ. ಆದರೆ ಕಾಳಿದಾಸನ ಮಾತಿನಲ್ಲಿ ಆಕೆ 'ಸಂಚಾರಿಣೀ ಪಲ್ಲವಿನೀ ಲತಾ'. ಚೆಲುವಿನ ಬಳ್ಳಿಗೊಂದು ಆಸರೆಯ ಮರ ಬೇಡವೆ? ಸದಾಶಿವಂ ಆಕೆಯ ಕೈಹಿಡಿದು ನಡೆಸಿದರು; ಬದುಕನ್ನೇ ಬೆಳೆಸಿದರು, ಸಾರ್ಥಕತೆಯನ್ನು ಹಿಗ್ಗಿಸಿದರು. ಆಕೆಯ ಅಭ್ಯುದಯವನ್ನು ಬಿಟ್ಟು ಇವರಿಗೆ ಮತ್ತೊಂದು ಆಸಕ್ತಿಯಿರದು, ಹವ್ಯಾಸವಿರದು. ಎಂದಮೇಲೆ ಎಂಎಸ್ ಪಾಲಿಗೆ ಅವರು ದೈವವೇ.

ಎಂಎಸ್ ಸಂಗೀತಕ್ಕಾಗಿಯೇ ಅವತರಿಸಿದವರೆಂಬ ನಂಬಿಕೆ ಸದಾಶಿವಂಗಿದ್ದಿತು. ದಿನನಿತ್ಯದ ಬರಡು ವ್ಯವಹಾರದಲ್ಲಿ ತೊಡಗಿದರೆ ಸಂಗೀತ ಬಡವಾದೀತೆಂದು ಬಗೆದು ಎಂಎಸ್‌ಗೆ ಹಾಡುವುದನ್ನು ಬಿಟ್ಟು ಬೇರೊಂದು ಚಿಂತೆಯಿರಬಾರದೆಂದೂ, ಎಚ್ಚರದ ವೇಳೆಯನ್ನೆಲ್ಲ ಆಕೆಗೆ ಪ್ರಿಯವಾದ ಸಂಗೀತದಲ್ಲಿ ಕಳೆಯುವಂತಾಗಬೇಕೆಂದೂ ಸದಾಶಿವಂ ಎಲ್ಲ ವಿಧವಾದ ನೆರವನ್ನೂ ಒದಗಿಸಿದರು. ಅಡುಗೆಗೆ, ಪರಿಚಾರಿಕೆಗೆ ವಿಶಾಲಂ, ಕಾರ್ಯದರ್ಶಿಯಾಗಿ ಆತ್ಮನಾಥನ್, ಹೊರಗಿನ-ಒಳಗಿನ ಕೆಲಸಗಳಿಗೆ 'ಕಲ್ಕಿ' ಕಣ್ಣನ್ ಮತ್ತು ಅವರ ಹೆಂಡತಿ ಲಕ್ಷ್ಮಿ.

ಕಣ್ಣನ್ ಮಾಯಾವರಂನವರು. ಹುಡುಗನಾಗಿದ್ದಾಗಲೇ ಸದಾಶಿವಂ ಬಳಿ ಉದ್ಯೋಗಕ್ಕೆಂದು ಬಂದು, ಅವರಲ್ಲೇ ನೆಲೆಸಿಬಿಟ್ಟರು. ಎಂಎಸ್ 'ಮೀರಾ' ಚಿತ್ರದಲ್ಲಿ ಅಭಿನಯಿಸುವಾಗ ಅವರಿಗೆ ನೆರವಾಗಿ ಅಲ್ಲೇ ಇದ್ದರು. ಸದಾಶಿವಂ 'ಕಲ್ಕಿ' ಪತ್ರಿಕೆಯನ್ನು ಆರಂಭಿಸಿದಾಗ ಅಲ್ಲಿ ಕೆಲಸಮಾಡತೊಡಗಿದರು. ಅವರಿಬ್ಬರೂ ದೇಶದಲ್ಲಿ ವಿದೇಶದಲ್ಲಿ ಪ್ರವಾಸಮಾಡುವಾಗ ಜೊತೆಯಲ್ಲೇ ಇರುತ್ತಿದ್ದರು. ಅವರಿಗೆ ಮದುವೆ ಮಾಡಿಸಿದವರು ಸದಾಶಿವಂ; ಹೆಂಡತಿ ಲಕ್ಷ್ಮಿಯೂ ಈ ಕುಟುಂಬಕ್ಕೆ ಸೇರಿದಂತೆಯೇ ಇದ್ದರು. ಅನಂತರ ಇವರು ಮುಂಬಯಿಯಲ್ಲಿ ಉದ್ಯೋಗದಲ್ಲಿದ್ದರು. ಸದಾಶಿವಂ–ಎಂಎಸ್ ಮುಂಬಯಿಗೆ ಹೋದಾಗಲೆಲ್ಲ ಅವರ ಮನೆಯಲ್ಲೇ ತಂಗುವರು. ಕಣ್ಣನ್ ಮತ್ತು ಲಕ್ಷ್ಮಿ ಎಂಎಸ್‌ಗೆ ತೀರ ಹತ್ತಿರದವರಾದವರು.

ಹೀಗೆ ಅವರ ಪರಿವಾರ. ಸಂಗೀತ ಶಿಕ್ಷಣಕ್ಕೆ ಗುರುಗಳ ವ್ಯವಸ್ಥೆ, ಹಾಡಿಕೆಗೆ ಪಕ್ಕವಾದ್ಯದವರ ಏರ್ಪಾಟು, ವಿನಿಕೆಯಲ್ಲಿ ಸಂಘಸಂಸ್ಥೆಗಳ ಜೊತೆ ಮಾತುಕತೆ, ಪತ್ರವ್ಯವಹಾರ, ಕಾರ್ಯಕ್ರಮಗಳ ಗೊತ್ತುಪಾಟು–ಎಲ್ಲವೂ ಸದಾಶಿವಂ ಅವರದ್ದೇ. ದೇವರ ಮನೆಯಲ್ಲಿ ಪೂಜೆ, ಹೊರಗೆ ಬಂದು ಅಭ್ಯಾಸ, ವಿನಿಕೆಗೆ ಸಿದ್ಧತೆ, ಕಚೇರಿಯಿದ್ದಾಗ ಹಾಡಿಕೆ ಇಷ್ಟೇ ಎಂಎಸ್ ಪಾಲಿನ ಕೆಲಸ. ಬಂದವರೊಂದಿಗೆ ಮಾತನಾಡಿದರೆ ದೇವರು ಆದರದಿಂದ ಕೊಟ್ಟ ಅಪೂರ್ವವಾದ ಗಂಟಲಿಗೆ ಆಯಾಸವಾದೀತೆಂಬ ಎಣಿಕೆ ಬೇರೆ. ಇನ್ನು ಕಚೇರಿಯಲ್ಲಿ ಏನು ಹಾಡಬೇಕು, ಯಾವ ಕ್ರಮದಲ್ಲಿ ವಿನಿಕೆ ನಡೆಯಬೇಕು, ಯಾವ ಯಾವ ಕೃತಿಗೆ ಎಷ್ಟೆಷ್ಟು ಸಮಯ– ಇವೆಲ್ಲವೂ ಆಕೆಗೆ ತ್ರಾಸವಾಗಬಾರದೆಂದು ಸದಾಶಿವಂ ತಾವೇ ನಿರ್ಧರಿಸುವರು.

ಸದಾಶಿವಂಗೆ ಮೊದಲು ಸಂಪ್ರದಾಯ ಸಂಗೀತಜ್ಞಾನ ಎಷ್ಟಿದ್ದಿತೋ ತಿಳಿಯದು. ಹುಡುಗನಾಗಿದ್ದಾಗ ರಾಜಾಜೀ ಪ್ರೇರಣೆಯಿಂದ ಸತ್ಯಾಗ್ರಹಸಮರವನ್ನು ಸೇರಿ, ಬೀದಿಗಳಲ್ಲಿ ಬಾವುಟ ಹಿಡಿದು ಸುಬ್ರಹ್ಮಣ್ಯಭಾರತಿಯವರ ರಾಷ್ಟ್ರಪ್ರೇಮದ ಹಾಡುಗಳನ್ನು ಗಟ್ಟಿಯಾಗಿ ಹೇಳಿಕೊಂಡು ಹೋಗುತ್ತಿದ್ದರಂತೆ. ಆದರೆ ಆ ಸಂಗೀತವೇ ಬೇರೆ. ಮುಂದೆ ಎಂಎಸ್ ಅವರಿಂದಲೇ ಸಂಪ್ರದಾಯ ಸಂಗೀತದ ರುಚಿಯನ್ನು

ಕಂಡುಕೊಂಡರೆಂದು ತೋರುತ್ತದೆ. ಶೆಮ್ಮಂಗುಡಿಯವರ ಗೆಳೆತನ ಮೊದಲಾದ ಮೇಲಂತೂ ಸರಿಯೇ ಸರಿ. ಎಂಎಸ್ ಅವರು ಹಾಡುವಾಗಲೆಲ್ಲ ಹತ್ತಿರವೇ ಇರುವವರು. ಎಂಎಸ್ ಹಾಡುತ್ತಿದ್ದುದೂ ಮುಖ್ಯವಾಗಿ ಇವರಿಗೇ! ಇವರಿಗೆ ಒಪ್ಪಿಗೆಯಾದರೆ ಎಂಎಸ್‌ಗೆ ತೃಪ್ತಿ. ಹೀಗಾಗಿ ಅವರ ಸಂಗೀತದ ಮೇಲೂ ಸಾಕಷ್ಟು ಹಿಡಿತ ಸದಾಶಿವಂಗಿದ್ದಿತು. ವಿನಿಕೆಗಳಲ್ಲಿ ಮೊದಲ ಸಾಲಲ್ಲೇ ಎಂಎಸ್ ಎದುರೇ ಕೂತು ಸಂಜ್ಞೆಯಿಂದ 'ಆಲಾಪನೆ ಸಾಕು', 'ನೆರವಲು ಇಷ್ಟಿರಬೇಕು', 'ಕಚೇರಿ ಯಾವಾಗ ಮುಗಿಯಬೇಕು', 'ಪಕ್ಕವಾದ್ಯಗಳಿಗೆ ತನಿ ಬಿಡುವುದು ಯಾವಾಗ' ಎಂದು ಮುಂತಾಗಿ ಸೂಚಿಸುವರು. ಎಂಎಸ್ ಹಾಡುತ್ತಿರುವಾಗ ಇವರ ಸೂಚನೆಗಳನ್ನೇ ಗಮನಿಸುತ್ತ ಇರುವರು.

ಈ ನಿರ್ಬಂಧದಲ್ಲಿಯೇ ಎಂಎಸ್ ತಮ್ಮ ಮನೋಧರ್ಮವನ್ನು ಕುದುರಿಸಿಕೊಳ್ಳುವರು. ಇದನ್ನವರು ನಿರ್ಬಂಧವೆಂದೆಣಿಸಲಿಲ್ಲ; ನಿಯಂತ್ರಣವೆಂದು ಪರಿಗ್ರಹಿಸಿದರು. ಸಂಯಮವಿಲ್ಲದೆ ಸಂಗೀತ ಇರುವುದು ಹೇಗೆ? ತಾಳವಾಗಲಿ, ರಾಗಸ್ವರೂಪವಾಗಲಿ, ಸ್ವರಸ್ಥಾನಗಳಾಗಲಿ ನಿಯಂತ್ರಣವೇ ಅಲ್ಲವೆ? ಅವನ್ನೆಲ್ಲ ಬದಿಗಿಟ್ಟು ಹುಚ್ಚು ಹೊಳೆಯಂತೆ, ಮನಸ್ಸಿಗೆ ಬಂದಂತೆ, ಹಾಡಿದರೆ, ನುಡಿಸಿದರೆ ಅದು ಮನೋಧರ್ಮವೆಂದಾಗಬಹುದೆ? ಇಷ್ಟಾಗಿ ಮನೋಧರ್ಮವಿರುವುದು ವೈಪುಲ್ಯದಲ್ಲಲ್ಲ, ರಸವಂತಿಗೆಯಲ್ಲಿ. ಇದು ಅರಿಯಕ್ಕುಡಿಯವರು ಕಲಿಸಿದ ಪಾಠ. ಒಂದು ರಾಗದ ಸ್ವರೂಪವನ್ನೂ ಸ್ವಾರಸ್ಯವನ್ನೂ ವೈಶಿಷ್ಟ್ಯವನ್ನೂ ಐದು ನಿಮಿಷಗಳಲ್ಲಿ ಕಾಣಿಸಬಹುದು. ಆಲಾಪನೆ ಮೊದಲಾಗುವಾಗಲೇ ರಾಗ ಸ್ಪಷ್ಟವಾಗಿ ಎದ್ದು ಕಾಣಬೇಕು. ಇದು ಯಾವ ರಾಗವೆಂದು ಶ್ರೋತೃವಿಗೆ ಗಲಿಬಿಲಿಯಾಗಬಾರದು. ಇದು ಶ್ರೀರಂಜಿನಿಯೋ ರೀತಿಗೌಳವೋ, ಪೂರ್ವಿಕಲ್ಯಾಣಿಯೋ ಪಂತುವರಾಳಿಯೋ, ದರ್ಬಾರೋ ನಾಯಕಿಯೋ, ದೇವಗಾಂಧಾರಿಯೋ ಆರಭಿಯೋ, ಸೌರಾಷ್ಟ್ರವೋ ಚಕ್ರವಾಕವೋ ಎಂಬ ಸಂಶಯಗಳೇಳಬಾರದು. ಶಂಕರಾಭರಣವೆಂದರೆ ಋಷಭಸ್ವರದ ಮೇಲೆ ಒತ್ತಿರಬೇಕು, ಕಲ್ಯಾಣಿಯಾದರೆ ಗಾಂಧಾರದ ಮೇಲೆ, ಹೀಗೆ ರಾಗಸ್ವರೂಪದ ಮನವರಿಕೆಯನ್ನು ಮೊದಲೇ ಮಾಡಿಕೊಡಬೇಕು. ಈ ಪಾಠವನ್ನು ಎಂಎಸ್ ಪ್ರಯೋಗಕ್ಕೆ ತಂದುಕೊಂಡರು. ಇದಕ್ಕೆ ಸದಾಶಿವಂ ಅವರ ಒತ್ತಾಸೆಯಿದ್ದಿತು. ಇದೂ ಒಂದು ಸಂಯಮದ ಪ್ರಶ್ನೆಯೇ.

ಸಂಗೀತದ ಸ್ವಾರಸ್ಯವಿರುವುದು ವಿಸ್ತಾರದಲ್ಲಲ್ಲ, ಸಂಕೋಚದಲ್ಲಿ. ಮನೋಧರ್ಮದಲ್ಲಿಯೂ ಔಚಿತ್ಯವಿರಬೇಕಷ್ಟೆ? ಎಷ್ಟು ಅಗತ್ಯವೋ ಅಷ್ಟಿದ್ದರೆ ರಸದ ಅನುಭವ. ಎಂಎಸ್ ಹೇಳುತ್ತಿದ್ದರು –"ಕರ್ನಾಟಕ ಸಂಗೀತದ ಸಾರಸರ್ವಸ್ವವನ್ನು ಎರಡು-ಎರಡೂವರೆ ಗಂಟೆಗಳಲ್ಲಿ ಮನದಟ್ಟುಮಾಡಿಕೊಡಬಹುದು" ಎಂದು. ಈ ಸಂಯಮ–ನಿರ್ಬಂಧದ ಅರಿವು ಅವರಿಗೆ ಚೆನ್ನಾಗಿ ಇದ್ದುದರಿಂದಲೇ ಆಕಾಶವಾಣಿ (ಆಲ್ ಇಂಡಿಯಾ ರೇಡಿಯೋ) ಇವರನ್ನು ಬರಮಾಡಿಕೊಂಡು 'ಪ್ರೊಡ್ಯೂಸರ್–ಎಮಿರಿಟಸ್' ಎಂದು ಇವರನ್ನು 1979-80ರಲ್ಲಿ ನೇಮಕಮಾಡಿಕೊಂಡಿತು. ಇದಕ್ಕೆ ಮೊದಲೇ 1963ರಲ್ಲಿ ಕ್ಷೇತ್ರಯ್ಯನ ಪದಗಳನ್ನು ಇವರಿಂದ ಆಕಾಶವಾಣಿ ಪ್ರಸ್ತುತಪಡಿಸಿದ್ದಿತು. ಅವರು ಅವನ್ನು ಹಿಂದೆ ತಂಜಾವೂರು ಬೃಂದಮ್ಮನಿಂದ ಕಲಿತದ್ದು. ಹಲವು ವರ್ಷಗಳ ನಂಟು ಮುಂದರಿಯಿತು. 1993ರಲ್ಲಿ ಇದು ಏರ್ಪಡಿಸಿದ ಅಂತಾರಾಷ್ಟ್ರೀಯ ಸಂಗೀತ ದಿನಾಚರಣೆಯಲ್ಲೂ ಎಂಎಸ್ ಗಾಯನ ಪ್ರಸಾರಗೊಂಡಿತು. ಮುತ್ತುಸ್ವಾಮಿ ದೀಕ್ಷಿತರ ಇನ್ನೂರನೆಯ ವಾರ್ಷಿಕೋತ್ಸವದಲ್ಲೂ ಇವರ ಹಾಡಿಕೆ ಪ್ರಮುಖವಿವರವಾಗಿ ಸೇರಿಕೊಂಡಿತು. 'ವೆಂಕಟೇಶ್ವರ ಸುಪ್ರಭಾತ'ವು ರೇಡಿಯೋ ಮೂಲಕವೇ ಮೊದಲು ಪ್ರಸಾರಗೊಂಡು ಜನಪ್ರಿಯವಾದ ನಂತರವೇ ಧ್ವನಿಮುದ್ರಣದ ವ್ಯವಸ್ಥೆಯಾದದ್ದು (1963ರಲ್ಲಿ). ಪ್ರತಿ ವರ್ಷವೂ ಹತ್ತು ಸಾವಿರ ಧ್ವನಿಮುದ್ರಣ (ಎಲ್‌ಪಿ, ಕೆಸೆಟ್, ಸಿಡಿ)ಗಳು ಮಾರಾಟವಾಗುತ್ತವೆ; ವರಮಾನವೆಲ್ಲ ತಿರುಪತಿ–ತಿರುಮಲೆ ದೇವಾಲಯಕ್ಕೇ ಹೋಗುತ್ತದೆ.

೩

ಸದಾಶಿವಂ ಎಷ್ಟು ಎಚ್ಚರದಿಂದ ಇದ್ದರೂ ಒಮ್ಮೆಯಂತೂ ಅವರು ತಾಳ ತಪ್ಪಿ ಎಂಎಸ್ ಅವರನ್ನು ಮುಜುಗರಕ್ಕೀಡುಮಾಡಿದ್ದುಂಟು. ಯುಎನ್ ಸಂಸ್ಥೆಯಲ್ಲಿ 1966ರಲ್ಲಿ ನಡೆದ ಸಮಾರಂಭದಲ್ಲಿ ಎಂಎಸ್ ಹಾಡುವುದಿದ್ದಿತು. ಆಗ ನಮ್ಮ ನಾಡಿನ ರಕ್ಷಣಾಸೇನೆಯ ಧುರೀಣರಾಗಿದ್ದ ಜನರಲ್ ಕಾರಿಯಪ್ಪ ಎಂಎಸ್ ಇಂಗ್ಲಿಷಿನಲ್ಲಿ ಹಾಡೊಂದನ್ನು ಹಾಡಿದರೆ ಎಲ್ಲರಿಗೂ

ಖುಷಿಯಾದೀತೆಂದು ಸದಾಶಿವಂಗೆ ಸೂಚಿಸಿದರು. ಅವರಿಗೆ ಸಂಗೀತಜ್ಞಾನ ಎಷ್ಟಿದ್ದಿತೋ ತಿಳಿಯದು; ಶಾಸ್ತ್ರೀಯ ಸಂಗೀತದ ಪರಿಚಯವಂತೂ ಇರಲಿಕ್ಕಿಲ್ಲ; ಎಂಎಸ್ ಅವರ ಸತ್ತ್ವ ಇರುವುದು ಇದರಲ್ಲೇ ಎಂಬುದೂ ಅವರಿಗೆ ತಿಳಿದಿರಲಾರದು. ಸದಾಶಿವಂ ಇವರು ಸೂಚಿಸಿದ್ದನ್ನು ತಮ್ಮ ಗುರು ರಾಜಾಜಿಗೆ ಹೇಳಿದರು. ರಾಜಾಜಿಗೂ ಇದು ಒಪ್ಪಿಗೆಯಾಯಿತು. ಇದು ಆಶ್ಚರ್ಯದ ಸಂಗತಿಯೇ. ಅವರಿಗಾದರೂ ಔಚಿತ್ಯಜ್ಞಾನ ಇರಬೇಡವೆ? ಎಂಎಸ್ ನೆಲೆಯೇನು, ಹಿನ್ನೆಲೆಯೇನು, ಮುನ್ನೆಲೆಯೇನು ಎಂಬ ವಿಚಾರ ಅವರಿಗೂ ತಿಳಿಯಲಿಲ್ಲವೆ? ಅಷ್ಟು ಮಾತ್ರವಲ್ಲ, ರಾಜಾಜಿ ಇಂಗ್ಲಿಷಿನಲ್ಲಿ ತಾವೇ ಒಂದು ರಚನೆಯನ್ನೂ ಮಾಡಿಕೊಟ್ಟರು. ಚೆನ್ನೈನಲ್ಲೇ ಇದ್ದ ಹ್ಯಾಂಡಲ್ ಮ್ಯಾನುಎಲ್ ಎಂಬ ಸಂಗೀತಜ್ಞ ಇದಕ್ಕೆ ಸ್ವರಸಂಯೋಜನೆಯನ್ನು ಮಾಡಿಕೊಟ್ಟ; ಹಾಡುವುದನ್ನು ಎಂಎಸ್‌ಗೆ ಕಲಿಸಿದ. ಇವೆಲ್ಲ ಸದಾಶಿವಂ ಏರ್ಪಾಟೇ. 'ಪೆರಿಯವರ್' ಹೇಳಿದ ಮೇಲೆ ಮತ್ತೇನು?

ಸರಿ, ಸಭೆಯಲ್ಲಿ ಈ ಇಂಗ್ಲಿಷ್ ಹಾಡನ್ನು ಹೇಗೆ ಹಾಡುವುದು? ಬರೆದವರು ಯಾರೇ ಆಗಲಿ, ಹಾಡು ಇಂಗ್ಲಿಷಿನದು, ಅದನ್ನು ನಿಂತೇ ಹಾಡುವುದು ಅಲ್ಲಿನ ವಾಡಿಕೆ. ಸದಾಶಿವಂಗೆ ಇದರಲ್ಲಿ ಅಸಂಗತವಾದದ್ದೇನು ಕಾಣಲಿಲ್ಲ. 'ಸಂಗೀತ ಸಾಮ್ರಾಜ್ಞಿ'ಯೆಂದು ಖ್ಯಾತಿವೆತ್ತ ಎಂಎಸ್ ಮತ್ತು ಮಗಳು ರಾಧಾ ಶಾಲಾಮಕ್ಕಳಂತೆ ಎದ್ದು ನಿಂತು ಹಾಡನ್ನು ಒಪ್ಪಿಸಿದರು. ಇದು ನಗೆಪಾಟಲಾಯಿತು. ಭಾರತೀಯರಿಗಂತೂ ನಾಚಿಕೆಯಿಂದ ತಲೆತಗ್ಗಿಸುವ ವಿಚಾರವಾಯಿತು. ಎಂಎಸ್‌ಗೆ ಇಂಗ್ಲಿಷ್ ಬಾರದು; ಪದವಿಭಾಗವಾಗಲಿ ಉಚ್ಚಾರಣೆಯಾಗಲಿ ಸಮರ್ಪಕವಾಗಿರಲಿಲ್ಲ. ನಿಂತು ಹಾಡುವ ಅಭ್ಯಾಸವಂತೂ ಅವರಿಗೆ ಇಲ್ಲವೇ ಇಲ್ಲ. ಮೇಲಾಗಿ ಇದರಲ್ಲಿ ಭಾವದ ಬಲವೇನಿರಲಿಲ್ಲ. ಎಂಎಸ್ ತಮ್ಮ ಅಂತರಂಗವನ್ನು ಅದರಲ್ಲಿ ತೊಡಗಿಸಿಕೊಳ್ಳುವುದಾದರೂ ಹೇಗೆ? ಇದೊಂದು ಕಹಿಪ್ರಸಂಗವಾಯಿತು.

ಇದನ್ನು ಮರೆಯೋಣ. ಸಂಪ್ರದಾಯ ಸಂಗೀತದಲ್ಲಿ ಆಕೆಯ ಪ್ರೌಢಿಮೆ ನಮಗೆ ಪ್ರಸ್ತುತವಾದುದು. ಎಂಎಸ್ ವೀಣೆಯನ್ನು ಮೊದಲು ಕಲಿತದ್ದು (ಕ್ರಮವಾಗಿ ಅಲ್ಲದಿದ್ದರೂ, ಕೇಳ್ಮೆಯಿಂದ) ತಮ್ಮ ತಾಯಿ ಷಣ್ಮುಖವಡಿವು

ಯಿಂದಲೇ. ಮುಂದೆ ಕೆ. ಎಸ್. ನಾರಾಯಣಸ್ವಾಮಿ (ಕೇರಳದ ಕೊಡುವಾಯೂರಿನಲ್ಲಿ 1914ರಲ್ಲಿ ಜನನ) ಎಂಬ ಸಂಪ್ರದಾಯಶರಣ, 'ಸಂಗೀತಭೂಷಣ' ವೈಣಿಕರಿಂದ ವೀಣೆಯನ್ನು ಕ್ರಮವಾಗಿ ಕಲಿತರು. ಇವರು ಸ್ವಾತಿ ತಿರುನಾಳರ ಕೃತಿಗಳನ್ನು ಪರಿಷ್ಕರಿಸಿದವರು. ತಿರುವನಂತಪುರದ ಸ್ವಾತಿ ತಿರುನಾಳ್ ಸಂಗೀತ ಕಾಲೇಜಿನಲ್ಲಿ ವೀಣಾ ಪ್ರಾಧ್ಯಾಪಕರಾಗಿದ್ದವರು. ಇವರ ವೀಣಾವಾದನದಲ್ಲಿ ಸುಖವಿದ್ದಿತು; ಶೈಲಿಯು ಗಾಯಕೀ ಪ್ರಕಾರದ್ದು. ಮಾಧುರ್ಯದೊಂದಿಗೆ ಮನೋಜ್ಞತೆಯೂ ಇದ್ದಿತು. ಆಕಾಶವಾಣಿಯ ಸಂಸ್ಥೆಯಲ್ಲಿ ಪ್ರಮುಖ ನಿರ್ದೇಶಕರಾಗಿ ಕೆಲಸಮಾಡಿ ಎಂಎಸ್ ಅವರಿಗೆ ನೆರವಾದ ಡಾ. ವಿ. ಕೆ. ನಾರಾಯಣ ಮೆನೊನ್ ಕೂಡ ಇವರ ಶಿಷ್ಯರೇ. ತಾಯಿ ಷಣ್ಮುಖವಡಿವುನಂತೆಯೇ ನಾರಾಯಣಸ್ವಾಮಿಯೂ ಗಾಯಕ ರಾಗಿಯೇ ಆರಂಭಿಸಿ ಶಾರೀರದ ಸೌಖ್ಯ ಸಾಲದೆ ವೀಣೆಯನ್ನು ಹಿಡಿದರು; ಆದರೆ ಗಾಯಕಪದ್ಧತಿಯೇ ಅಲ್ಲಿಯೂ ಒಳಸುಳಿಯಿತು. ಷಣ್ಮುಖಮ್ಮಾಳ್ ಕೂಡ ವೀಣೆಯೊಂದಿಗೆ ಹಾಡುವರು, ಅಥವಾ ಹಾಡಿಕೆಯೊಂದಿಗೆ ವೀಣೆ ನುಡಿಸುವರು. ಹಾಗಾಗಿ ನಾರಾಯಣಸ್ವಾಮಿಯವರ ಬಳಿ ಕಲಿಯುವುದು ಎಂಎಸ್‌ಗೆ ಹಿತವೇ ಆಯಿತು.

ಮುಂದೆ ಎಂಎಸ್ 'ಸಂಗೀತಕಲಾನಿಧಿ'ಯಾದಾಗ ಚೆನ್ನೈ ಮ್ಯೂಸಿಕ್ ಅಕ್ಯಾದಮಿಯ ಸಮ್ಮೇಳನದಲ್ಲೊಂದು ದಿನ ನಾರಾಯಣಸ್ವಾಮಿಯವರೊಂದಿಗೆ ವೀಣೆಯನ್ನು ನುಡಿಸಿದರು. ನೆರೆದ ರಸಿಕರೆಲ್ಲರೆದುರು ಅವರು ವೀಣೆಯನ್ನು ನುಡಿಸಿದ್ದು ಅದೇ ಮೊದಲು. ಮನೆಯಲ್ಲಿ ಮೊದಲಿಂದ ವೀಣೆಯ ಮೇಲೆ ಕೈಯಾಡಿಸುವುದು ಇದ್ದದ್ದೇ. ವೀಣಾವಾದನವೆಂದರೆ ಅವರಿಗೆ ಬಲು ಪ್ರೀತಿ. ರಾಗದಲ್ಲಿ ಸ್ವರದ ಪಾತ್ರವನ್ನು ಅರಿತುಕೊಳ್ಳಬೇಕಾದರೆ ಗಾಯಕರು ವೀಣೆಯನ್ನು ಅಭ್ಯಾಸಮಾಡಬೇಕು ಎಂದು ಹೇಳುತ್ತಿದ್ದರು. ರಾಗದ ಸ್ವಾರಸ್ಯವನ್ನೂ ಸ್ವರೂಪವನ್ನೂ ಸಂಪೂರ್ಣವಾಗಿ ತಿಳಿದುಕೊಳ್ಳಬೇಕಾದರೆ ಅದರ ಸ್ವರ ಒಂದೊಂದರ ಸಾಮರ್ಥ್ಯವನ್ನು ಮನಗಾಣಬೇಕು. ಇದು ವೀಣೆಯ ನುಡಿಸಾಣಿಕೆಯಲ್ಲಿ ಎದ್ದು ಕಾಣುತ್ತದೆ. ಸ್ವರಗಳು ಹೇಗೆ ಹೊಂದಿಕೊಂಡು ರಾಗವಾಗಿ ಮಾರ್ಪಡುತ್ತದೆ ಎಂಬುದೂ ವೀಣೆಯಿಂದ ಸ್ಪಷ್ಟವಾಗಿ

ತಿಳಿದುಬರುತ್ತದೆ. ಗಮಕಗಳ ಮನವರಿಕೆಯೂ ವೀಣಾವಾದನದಿಂದ ಸಾಧ್ಯ. ಇವೆಲ್ಲವನ್ನೂ ಎಂಎಸ್ ವಿವರಿಸುತ್ತಿದ್ದರು.

ವೀಣೆಗೆ ಸಹಜವಾದ ತಾನವನ್ನು ಎಂಎಸ್ ಹಾಡಿಕೆಯಲ್ಲಿ ಚೆನ್ನಾಗಿ ಅಳವಡಿಸಿಕೊಂಡಿದ್ದರು. ಶೆಮ್ಮಂಗುಡಿಯವರು ತಾನವನ್ನು ಹಾಡುವ ಹೆಂಗಳೆಯರಲ್ಲಿ ಎಂಎಸ್ ಸರ್ವಶ್ರೇಷ್ಠರು ಎಂದು ಹೇಳುತ್ತಿದ್ದರು. ಶುದ್ಧ, ಕೂಟ ಎರಡೂ ಬಗೆಯ ತಾನವನ್ನು ಹಾಡುವಾಗ ಅವರ ವಿದ್ವತ್ತಿನ ಪರಿಚಯವಾಗುತ್ತಿದ್ದಿತು. ನೆರವಲ್ ಹಾಡುವಾಗಲೂ ಅನುಸ್ವಾರಗಳ ಜೋಡಣೆ, ಕಾರುವೆ ಬಲ ಮೊದಲಾದ ತಾಂತ್ರಿಕ ವಿವರಗಳಲ್ಲಿ ಅವರ ಪ್ರೌಢಿಮೆ ತೋರಿಬರುತ್ತಿದ್ದಿತು. ರಾಗಸ್ವರೂಪವನ್ನು ಅವರು ನಿರ್ಮಿಸುವಾಗ ಸಾಧನೆಯ ಪ್ರಯೋಜನ ಎದ್ದುಕಾಣುತ್ತಿತ್ತು. ಮೂರು ಸ್ಥಾಯಿಗಳಲ್ಲೂ ಸುಲಭವಾಗಿ ಸಂಚರಿಸುವ ಸಾಮರ್ಥ್ಯ ಅವರದ್ದು. ತಾರವಾಗಲಿ ಮಂದ್ರವಾಗಲಿ, ಯಾವ ಶ್ರಮವೂ ಇರದೆ ಲೀಲಾಜಾಲವಾಗಿ ಸ್ವರಸ್ಥಾನಗಳನ್ನು ಹಿಡಿಯುವರು, ಸಂಚರಿಸುವರು. ಮಧ್ಯಮ, ಪಂಚಮಗಳನ್ನು ಹಿಡಿಯುವ ಅವರ ರೀತಿ ಅನ್ಯಾದೃಶವಾದುದು. ಆಗ ಅವರ ಕಣ್ಣುಗಳು ಬೆಳಗುವುವು, ಕೈಗಳು ಆಡುವುವು. ಇವೆಲ್ಲ ಗಾಂಭೀರ್ಯವನ್ನು ಕೈಬಿಡದೆ, ಅಗತ್ಯವನ್ನು ಮೀರದೆ, ಲಲಿತವಾಗಿ ನಡೆಯುವುವು. ಸಾಧಕನು ಧ್ಯಾನಶ್ಲೋಕಗಳನ್ನು ಪುರಶ್ಚರಣ ಮಾಡಿಕೊಂಡು ಇಷ್ಟದೈವವನ್ನು ಮೂರ್ತೀಕರಿಸಿಕೊಳ್ಳುವಂತೆ, ಇವರೂ ರಾಗಗಳ ಸ್ವರೂಪವನ್ನು ಕಂಡರಿಸುವರು. ಗಾಯನವೂ ಧ್ಯಾನದ ಒಂದು ಪ್ರಕಾರವೇ ಎಂಬುದು ಸ್ಪಷ್ಟವಾಗುವುದು.

ರಾಗಭಾವವನ್ನು ಹಿಡಿಯುವುದರಲ್ಲೇ ಅವರ ಒಲವು. ಅವರಿಗೆ ತುಂಬಾ ಪ್ರಿಯವಾದ ರಾಗಗಳು ಶಂಕರಾಭರಣ, ಕಲ್ಯಾಣಿ, ಖರಹರಪ್ರಿಯ, ರೀತಿಗೌಳ ಮೊದಲಾದುವು. ಸಾಹಿತ್ಯವನ್ನು ಹಾಡುವಾಗ ಪದವಿಭಾಗ ಮಾಡುವುದು, ವಿಶ್ರಾಮ ಸ್ಥಳಗಳನ್ನು ತೋರಿಸುವುದು, ಭಾವಾಭಿವ್ಯಕ್ತಿಯ ಸಲುವಾಗಿ ಸ್ವರಸ್ಥಾನಗಳಲ್ಲಿ ವಿಶೇಷ ಒತ್ತುಗಳು, ಅರ್ಥಕ್ಕನುಗುಣವಾಗಿ ಸಂಚಾರ, ಶಾರೀರದಲ್ಲಿ ಅಗತ್ಯವೆನಿಸಿದ ಮಾರ್ಪಾಟು ಇವೆಲ್ಲವನ್ನೂ ಸಹಜವೆಂಬಂತೆ ಕೈಗೊಳ್ಳುವರು. ಅದಕ್ಕೆ ಹಿನ್ನೆಲೆಯಲ್ಲಿ ಎಷ್ಟು ವಿದ್ವತ್ತಿರಬೇಕು ಎಂಬುದು

ವಿದ್ವಾಂಸರಿಗೇ ಗೊತ್ತು. ಮಹಾವೈದ್ಯನಾಥ ಶಿವನ್ ಅವರ ಮೇಳರಾಗಮಾಲಿಕೆಯನ್ನು ಅವರು ಹಾಡಿರುವ ಬಗೆಯನ್ನು ನೋಡಿದಾಗ ಅವರ ವೈದುಷ್ಯದ ಇಣುಕುನೋಟ ಸಿಗುತ್ತದೆ. ಕೃತಿಗಳನ್ನು ಅವರು ಹಾಡುವಾಗ ರಚಿತಸಂಗೀತಭಾಗ (ವಾಗ್ಗೇಯಕಾರರಿಂದ ನಿರ್ಮಿತವಾದುದು) ಮತ್ತು ಕಲ್ಪಿತಸಂಗೀತಭಾಗ (ಗಾಯಕರು ಕಲ್ಪನೆಯಿಂದ ತೋರಿಸುವುದು) ಇವೆರಡರ ನಡುವೆ ಇರುವ ವ್ಯತ್ಯಾಸ ಎದ್ದುಕಾಣುತ್ತಿದ್ದಿತು.



ಮಳವರಾಯನೆಂಡಾಲ್ ಸುಬ್ಬರಾಮಭಾಗವತರು

ಪಲ್ಲವಿಗಾಯನದಲ್ಲೂ ಅವರ ನೈಪುಣ್ಯವಿದ್ದಿತು. ಚಿಕ್ಕಂದಿನಲ್ಲೇ ಮಳವರಾಯನೆಂಡಾಲ್ ಸುಬ್ಬರಾಮಭಾಗವತರಲ್ಲಿ ಪಲ್ಲವಿಗಾಯನದಲ್ಲಿ ಶಿಕ್ಷಣವನ್ನು ಪಡೆದಿದ್ದರು. ಚೆನ್ನೈನ ಮ್ಯೂಸಿಕ್ ಅಕ್ಯಾದಮಿಯಲ್ಲಿ 1950ರಲ್ಲಿ ಅವರು ಹಾಡಿದ ಬೇಗಡೆ ರಾಗದ ಪಲ್ಲವಿ 'ಕೈಲಾಸಪತೇ ಪಶುಪತೇ ಉಮಾಪತೇ ನಮೋऽಸ್ತುತೇ' ರಸಿಕರನ್ನೆಲ್ಲ ಬೆರಗುಮಾಡಿತು. ಪಲ್ಲವಿ ಹಾಡಲು ಹಿಂಜರಿಯುತ್ತಿದ್ದ ಅವರನ್ನು ಹುರಿದುಂಬಿಸಿ ಹಾಡಿಸಿದ ಯಶಸ್ಸು ಮುಸಿರಿ ಸುಬ್ರಹ್ಮಣ್ಯಯ್ಯರಿಗೆ ಸಲ್ಲಬೇಕು. ಅಭ್ಯಾಸಮಾಡುವಾಗ ಅವರನ್ನು ಎಡೆಬಿಡದೆ

ಪ್ರೋತ್ಸಾಹಿಸಿ ಅವರಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ತಂದುಕೊಟ್ಟವರು ವಯಲಿನ್ ವಿದ್ವಾಂಸರೂ ಸಹೃದಯರೂ ಆದ ತಿರುವಾಲಂಗಾಡು ಸುಂದರೇಶ ಅಯ್ಯರು. ಪಲ್ಲವಿ ಗಾಯನದಲ್ಲಿ ಪ್ರಸಿದ್ಧರಾಗಿದ್ದ ಆಲತ್ತೂರು ಸಹೋದರರು (ವೆಂಕಟಸುಬ್ರಹ್ಮಣ್ಯಯರು ಮತ್ತು ವೆಂಕಟೇಶಯ್ಯರು) ಮರುದಿನ ಎಂಎಸ್ ಮನೆಗೆ ಹೋಗಿ ಅವರ ಪಲ್ಲವಿ ವಿನಿಕೆ ಅದ್ಭುತವಾಗಿದ್ದಿತೆಂದೂ, ಮೊದಲಿಂದ ಕಡೆಯುವರೆಗೂ ರಾಗ–ಭಾವಗಳ ಮೇಲೆ ಅವರು ಕೊಟ್ಟ ಒತ್ತು ಅನ್ಯಾದೃಶವಾಗಿದ್ದಿತೆಂದೂ ಮನಸಾರೆ ಹೊಗಳಿದಾಗ, ಎಂಎಸ್ ಹಿಂಜರಿಕೆ ಬಹುಮಟ್ಟಿಗೆ ಮರೆಯಾಯಿತು.

ಕೃತಿಗಾಯನದಲ್ಲಿ ತ್ಯಾಗರಾಜಸ್ವಾಮಿಗಳ ಕೃತಿಗಳೆಂದರೆ ಅವರಿಗೆ ಅಚ್ಚುಮೆಚ್ಚು. ಹಾಗೆಯೇ ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು, ಅನ್ನಮಾಚಾರ್ಯರು, ಭದ್ರಾಚಲ ರಾಮದಾಸರು ಮೊದಲಾದ ಹಿರಿಯ ವಾಗ್ಗೇಯಕಾರರ ಸಂಸ್ಕೃತ, ತೆಲುಗು ರಚನೆಗಳನ್ನು ಸ್ವರಶುದ್ಧಿ, ಭಾವಶುದ್ಧಿ, ವಾಕ್‌ಶುದ್ಧಿಗಳಿಂದ ಹಾಡುವರು. ಹರಿದಾಸರ ಕನ್ನಡ ಪದಗಳನ್ನೂ ಅಷ್ಟೇ ಪ್ರೌಢವಾಗಿ ಹಾಡುವರು. ಕೆ. ವಾಸುದೇವಾಚಾರ್ಯರ 'ಬ್ರೋಚೇವಾರೆವರು' ಎಂಬ ಕಮಾಸ್ ರಾಗದ ಕೃತಿಗೆ ಜೀವ ಕೊಟ್ಟವರು, ಪ್ರಚಾರಕ್ಕೆ ತಂದವರು ಅವರೇ. ಪುರಂದರದಾಸರ 'ಜಗದೋದ್ಧಾರನ' ಎಂಬ ಕೀರ್ತನೆಯನ್ನು ಮಿರಿಮಿರಿಮಿಂಚುವಂತೆ ಮಾಡಿದರು. ಅವರು ಹಾಡಿರುವ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ' (ಕಾಂಬೋದಿ), 'ದಾಶರಥೇ' (ತೋಡಿ), 'ಚಕ್ಕನಿರಾಜಮಾರ್ಗ' (ಖರಹರಪ್ರಿಯ), 'ಗಿರಿಪೈ' (ಸಹಾನ), 'ದುರುಸುಗಾ' (ಸಾವೇರಿ) ಮೊದಲಾದುವು ಒಮ್ಮೆ ಕೇಳಿದರೆ ಸಾಕು, ಅನುಗಾಲ ಕಿವಿಯಲ್ಲಿ ಅನುರಣಿಸುತ್ತವೆ. ಭಕ್ತಿಯ ಹಲವು ವಿವರಗಳನ್ನು ತೋರಿಸುತ್ತ ಕಲ್ಯಾಣಿಯಲ್ಲೇ 'ನೀದು ಚರಣ', 'ಬಿರಾನ ಬ್ರೋವ', 'ಭಜರೇ ಚಿತ್ತ', 'ನಿಧಿ ಚಾಲಾ ಸುಖಮಾ', 'ತಲ್ಲಿ ನಿನ್ನು' ಮೊದಲಾದ ಕೃತಿಗಳನ್ನು ಹಾಡುವರು.

ತಮಿಳಿನಲ್ಲಿ ಕಂಬರಾಮಾಯಣದ ಭಾಗಗಳನ್ನೂ, ಶಿಲಪ್ಪದಿಕಾರದ ತುಣುಕುಗಳನ್ನೂ, ತಿರುಪ್ಪುಗಳನ್ನೂ, ಪಾಶುರಗಳನ್ನೂ ಸೊಗಸಾಗಿ ಹಾಡಿ ಜನಮನವನ್ನು ಗೆದ್ದರು. ಅಲ್ಲದೆ ಗೋಪಾಲಕೃಷ್ಣ ಭಾರತಿ, ಸುಬ್ರಹ್ಮಣ್ಯ ಭಾರತಿ,

ಪಾಪನಾಶಂ ಶಿವನ್, 'ಕಲ್ಕಿ' ಕೃಷ್ಣಮೂರ್ತಿ, ರಸಿಕಶಿಖಾಮಣಿ ಚಿದಂಬರನಾಥ ಮುದಲಿಯಾರ್, ವಿ. ರಾಘವನ್ ಮತ್ತು ರಾಜಾಜಿ ಇವರ ರಚನೆಗಳಿಗೂ ಪ್ರಚಾರವನ್ನು ತಂದುಕೊಟ್ಟರು. ವಿನಿಕೆಯ ಕಡೆಯಲ್ಲಿ ರಾಜಾಜಿ ರಚಿಸಿದ 'ಕುರೈ ಒನ್ರುಂ ಇಲ್ಲೈ ಕಣ್ಣಾ' (ಪ್ರಿಯನೆ, ನನಗೊಂದು ಕೊರತೆಯೂ ಇರದು) ಎಂಬ ತುಣುಕನ್ನು ಕಣ್ಣುಮುಚ್ಚಿ, ಕೈತಾಳದೊಂದಿಗೆ ಹಾಡುವಾಗ ಇಡೀ ಸಭೆಯೇ ಭಕ್ತಿಭಾವಪರವಶವಾಗುವುದು.

ಹೀಗೆ ಸಂಸ್ಕೃತ, ತೆಲುಗು, ಕನ್ನಡ, ತಮಿಳು, ಹಿಂದಿ ಭಾಷೆಗಳಲ್ಲಿ ಗಾಯನಮಾಡಿ ಗಟ್ಟಿಗರೆನಿಸಿಕೊಂಡರು. ಅವರ ಕಡೆಗಾಲದಲ್ಲಿ 'ನಿಮಗೆ ತೃಪ್ತಿಯನ್ನು ತಂದುಕೊಟ್ಟದ್ದು ಯಾವುದು?' ಎಂದು ಯಾರೋ ಕೇಳಿದಾಗ ಅವರಿತ್ತ ಉತ್ತರ ಇದು : "ನಮ್ಮಲ್ಲಿ ಒಬ್ಬೊಬ್ಬರಿಗೂ ಒಂದೊಂದು ಕೌಶಲವಿರುತ್ತದೆ; ಅದನ್ನು ನಮಗೆ ಶಕ್ತಿಯಿರುವಷ್ಟು ಸಾಧ್ಯವಾದಷ್ಟು ಸಾಧಿಸಿಕೊಳ್ಳಲು ಯತ್ನಿಸುತ್ತೇವೆ. ಅದರಲ್ಲೇನು ವಿಶೇಷವಿರದು. ಅದರಿಂದ ಅಷ್ಟಿಷ್ಟು ಸಮಾಧಾನವಿರುತ್ತದೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಬದುಕಿನಲ್ಲಿ ನನಗೆ ಸಂತೃಪ್ತಿಯನ್ನು ಕೊಟ್ಟಿರುವುದು ನನಗೆ ತಿಳಿದ ಯಾರಿಗಾಗಲಿ ಏನು ಅಪಚಾರವನ್ನೂ ಮಾಡಿಲ್ಲ ಎನ್ನುವುದು".

ಎಂಎಸ್

ದಿಗಂತ ವಿಶ್ರುತರಾದ ಈ ಕಲಾವಿದೆಯನ್ನು ಪಡೆದುಕೊಂಡು ಅವರನ್ನು ಹೆಮ್ಮೆಯಿಂದ ಕಂಡುಕೊಂಡು, ನೆಮ್ಮದಿಯಿಂದ ಇರಿಸಿಕೊಂಡು, ಕೊಂಡಾಡಿದ ನಮ್ಮ ನಾಡು ಧನ್ಯವೇ. ತಮಗೆ ನಿರಾಳವಾಗಿ ಒಲಿದಿದ್ದ ಸಂಗೀತ ಸಾಮರ್ಥ್ಯವನ್ನು ಭಗವದಾರಾಧನೆಗೆಂದೇ ಸಮರ್ಪಿಸಿ ಬದುಕಿನಲ್ಲಿ ಧನ್ಯತೆಯನ್ನು ಅವರು ಕಂಡುಕೊಂಡರು. ಅವರ ಸ್ಮರಣೆ ಸತ್‌ಪ್ರೇರಣೆಯನ್ನೊದಗಿಸಿದರೆ ಅವರು ಬದುಕಿದ್ದು ಸಾರ್ಥಕವಾಯಿತು. ಇಂಥದೊಂದು ದೀಪ ನೂರಾರು ದೀಪಗಳನ್ನು ಬೆಳಗಿಸಬಲ್ಲುದು, ಬೆಳಗಿಸಬೇಕು.

ಅನುಬಂಧ

ಎಂಎಸ್ ಸಂಪರ್ಕಕ್ಕೆ ಬಂದ, ಅವರನ್ನು ರೂಪಿಸಿದ ಹಿರಿಯ ಸಂಗೀತ ವಿದ್ವಾಂಸರು

ವೀಣಾ ಧನಮ್ಮಾಳ್
(1867–1938)

ಸಂಗೀತಸರಸ್ವತಿಯೇ ಮೈದಾಳಿ ಬಂದಂತೆ ತೋರಿಕೊಂಡು, ತಮ್ಮ ವೀಣಾವಾದನ ವೈಖರಿಯಿಂದ ರಸಿಕರನ್ನೆಲ್ಲ ಅಚ್ಚರಿಗೊಳಿಸಿದವರು; ತಂಜಾವೂರು ಕಲಾಶೈಲಿಗೆ ಅವರೊಂದು ಶಿಖರಪ್ರಾಯವಾಗಿದ್ದವರು. ಅವರ ಪ್ರಸಿದ್ಧಿ ಅಜರಾಮರವಾದುದು.

ಅಜ್ಜಿ ಕಾಮಾಕ್ಷಿ ರಾಜನರ್ತಕಿ; ಶ್ಯಾಮಶಾಸ್ತ್ರಿಯವರ ಮಗ ಸುಬ್ಬರಾಯ ಶಾಸ್ತ್ರಿಗಳಿಂದ ಗಾಯನವನ್ನು ಕಲಿತವರು. ತಾಯಿ ಸುಂದರಮ್ಮ ಇವರಿಂದಲೂ ಸುಬ್ಬರಾಯಶಾಸ್ತ್ರಿಗಳ ಮಗ ಅಣ್ಣಾಸ್ವಾಮಿಶಾಸ್ತ್ರಿಗಳಿಂದಲೂ ಸಂಗೀತ ಶಿಕ್ಷಣವನ್ನು ಪಡೆದುಕೊಂಡವರು. ಈ ಸಂಗೀತ ಬಳುವಳಿ ಧನಮ್ಮಾಳಿಗೆ ಬಂದಿತು. ಸೋದರಮಾವ ಅಪ್ಪಾಕಣ್ಣು, ಅಕ್ಕ ರೂಪವತಿ ಇಬ್ಬರೂ ಪಿಟೀಲುವಾದಕರಾದರು. ಧನಮ್ಮಾಳ್ ಒಬ್ಬರೇ ವೀಣೆಯನ್ನು ಹಿಡಿದದ್ದು.

ವೀಣೆ ಕಲಿತದ್ದು ಅಳಸಿಂಗರಯ್ಯ, ಸಾತನೂರು ಪಂಚನದ ಅಯ್ಯರ್, ಮೈಲಾಪುರ ಬಾಲದಾಸ (ಪದಗಳನ್ನು ಹಾಡುತ್ತಿದ್ದ, ವೀಣೆ ನುಡಿಸುತ್ತಿದ್ದ ಅಂಧವಿದ್ವಾಂಸ) ಇವರ ಬಳಿ. ನಿರಂತರ ಸಾಧನೆಯಿಂದ ವೀಣೆಯನ್ನು ಒಲಿಸಿಕೊಂಡರು. ವೀಣೆ ಅವರಿಗಾಗಿಯೇ ಸಿದ್ಧವಾದದ್ದು, ಅವರು ವೀಣೆಗಾಗಿ ಹುಟ್ಟಿದ್ದು ಎನ್ನುವಂತಾಯಿತು.

ಅವರ ವಾದನಸೌಂದರ್ಯಕ್ಕೆ ಬೆರಗಾಗದವರೇ ಇಲ್ಲ. ಶ್ಯಾಮಶಾಸ್ತ್ರಿಗಳ ಕೃತಿಗಳ ಭಾವಪ್ರಧಾನತೆ ಅವರ ವಾದನದಲ್ಲಿ ಎದ್ದು ಕಾಣುತ್ತಿದ್ದಿತು. ಪದಗಳನ್ನೂ ಜಾವಳಿಗಳನ್ನೂ ನಿರೂಪಿಸುವಲ್ಲಿ ಸಿದ್ಧಹಸ್ತರು. ಮೊದಲಲ್ಲಿ ಅಕ್ಕ ರೂಪವತಿಯೊಂದಿಗೆ ಹಾಡುತ್ತಿದ್ದರು. ಈ ಜೋಡಿಗಾಯನ ತುಂಬ ಜನಪ್ರಿಯವಾಯಿತು.

ಹಲವೆಡೆ ಸಂಗೀತಸಭೆಗಳಲ್ಲಿ ವಿನಿಕೆ ಮಾಡಿದರಾದರೂ ಮನೆಗಳಲ್ಲಿ ರಸಿಕರೆದುರು ನುಡಿಸುವುದು ಅವರಿಗೆ ಮೆಚ್ಚು. ಹಲವಾರು ವರ್ಷಗಳು ಧರ್ಮಪುರಿ ಸುಬ್ಬರಾಯರೊಂದಿಗೆ ಅವರು 'ಉಲ್ಲಾಸಮು ಸಲ್ಲಾಪಮು' ಕಾರ್ಯಕ್ರಮವನ್ನು ನಡೆಸಿದರು. ತಮ್ಮ ಮನೆಯಲ್ಲೇ ಪ್ರತಿ ಶುಕ್ರವಾರ ನೆರೆದವರಿಗೆ ವೀಣಾವಾದನದ ಸೌಖ್ಯವನ್ನು ನೀಡುತ್ತಿದ್ದರು.

ಅರವತ್ತು ವರ್ಷಗಳ ಕಾಲ ಸಂಗೀತಸಾಮ್ರಾಜ್ಞಿಯಾಗಿ ಮೆರೆದು ಸಂಗೀತರಸಿಕರಿಗೆಲ್ಲ ರಸಪಾನವನ್ನು ಧಾರಾಳವಾಗಿ ಮಾಡಿಸಿ, ತನ್ನ ಇಷ್ಟದೈವವಾದ ಕೃಷ್ಣನಲ್ಲಿ ಕಣ್ಮರೆಯಾದರು.



ಪುದುಕ್ಕೊಟ್ಟೆ ದಕ್ಷಿಣಾಮೂರ್ತಿ ಪಿಳ್ಳೈ
(1875–1937)

ಕರ್ನಾಟಕ ಸಂಗೀತದಲ್ಲಿ ಅಜರಾಮರವಾದ ಹೆಸರು; ಸಾಕ್ಷಾತ್ ನಂದಿಕೇಶ್ವರನ ಅವತಾರವೆಂದೇ ರಸಿಕರ ಎಣಿಕೆ. ಖಂಜರಿ ಮತ್ತು ಮೃದಂಗ ವಾದ್ಯಗಳಿಗೆ ಗೌರವಾದರಗಳನ್ನು ಗಳಿಸಿಕೊಟ್ಟವರು.

ಇನ್ನೊಬ್ಬ ಪ್ರತಿಭಾಶಾಲಿ ಮಾನುಎಂಡಿಯಾ ಪಿಳ್ಳೆಯವರಲ್ಲಿ ಶಿಕ್ಷಣ; ತಂಜಾವೂರು ಕೃಷ್ಣಭಾಗವತರಿಂದ ಮಾರ್ಗದರ್ಶನ; ತಂಜಾವೂರು ಪಕ್ಕಿರಿ ಮತ್ತು ನಾರಾಯಣಸ್ವಾಮಿ ಅಪ್ಪಾ ಅವರಿಂದ ಪ್ರಭಾವಿತರಾದವರು. ಅವರ ಶಿಷ್ಯರಲ್ಲಿ ಪ್ರಮುಖರು ಸುಪ್ರಸಿದ್ಧ ಪಾಲಕ್ಕಾಡು ಮಣಿಅಯ್ಯರ್, ದೇವಕೋಟೆ ಸುಂದರರಾಜ ಅಯ್ಯಂಗಾರ್, ತಂಜಾವೂರು ರಾಮದಾಸರು.

ಅವರ ನುಡಿಸಾಣಿಕೆಯಲ್ಲಿ ಮಾರ್ದವ, ಲಯಜ್ಞಾನ, ಹಿತ, ರಸಾವೇಶ ಎದ್ದು ಕಾಣುತ್ತಿದ್ದುವು. ತನಿ ನುಡಿಸುವಾಗಲಂತೂ ಅವರ ಮೇರುಸದೃಶ ಮನೋಧರ್ಮ ಮೆರೆಯುತ್ತಿದ್ದಿತು. ಲೆಕ್ಕಾಚಾರ (ಕಣಕ್ಕು) ಅವರಿಗೆ ಮುಖ್ಯವಾಗಿರಲಿಲ್ಲ ; ಶ್ರೋತೃಗಳ ಸುಖಸಂಪಾದನೆಯತ್ತಲೇ ಅವರ ಗಮನವೆಲ್ಲ. ಎಣಿಕೆ ಸ್ವಭಾವಸಿದ್ಧವಾಗಿಯೇ ಇರುತ್ತಿದ್ದಿತು.

ಬದುಕಿನಂತೆಯೇ ಅವರ ಸಂಗೀತವೂ ನಿರಾಡಂಬರ, ಉಜ್ವಲ. ಬದುಕಿನಲ್ಲಿಯೂ ಅಂತರ್ಮುಖ ಪ್ರವೃತ್ತಿ, ಆಧ್ಯಾತ್ಮಿಕತೆಯ ಒಲವು. ಮುರುಗನ ಪರಮಭಕ್ತರು. ಸಂಗೀತ ಅವರ ಪಾಲಿಗೆ ಜೀವಿಕೆಯಲ್ಲ, ಸಾಧನೆ. ಕಡೆಗಾಲದಲ್ಲಿ ತೀವ್ರ ವೈರಾಗ್ಯವನ್ನು ತಳೆದು ಸಂನ್ಯಾಸಿಯಾಗಿಬಿಟ್ಟರು (ಚಿನ್ಮಯಾನಂದ ಗುರು).

ಕರ್ನಾಟಕ ಸಂಗೀತದ ಆಳ-ಅಗಲಗಳನ್ನೆಲ್ಲ ಮನದಟ್ಟು ಮಾಡಿಕೊಂಡು, ತಮ್ಮ ಪ್ರತಿಭೆಯಿಂದ ಅದನ್ನು ಶ್ರೀಮಂತಗೊಳಿಸಿ ಲಕ್ಷಾಂತರ ರಸಿಕರಿಗೆ ಅದರ ಸಾರಸರ್ವಸ್ವವನ್ನೂ ಉಣಬಡಿಸಿದರು. ಅವರ ವಿನಿಕೆಯ ಎತ್ತರ ಹೆಚ್ಚೋ ಬದುಕಿನ ಎತ್ತರ ಹೆಚ್ಚೋ ಹೇಳಲಾಗದು.

ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್
(1890–1967)

ಅರ್ಧಶತಮಾನಕ್ಕೂ ಮಿಕ್ಕು ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಮಿಗಿಲಿಲ್ಲದಂತೆ ಎಣೆಯಿಲ್ಲದಂತೆ ವಿರಾಜಿಸಿದವರು. ವಿದ್ವಾಂಸರಿಗೂ ಸಾಮಾನ್ಯ ರಸಿಕರಿಗೂ ಅವರ ವಿನಿಕೆಯೆಂದರೆ ಎಂದೂ ಆಕರ್ಷಣೆಯೇ. ಅವರಂತೆ ಪ್ರಸಿದ್ಧರಾದವರು ಮತ್ತೊಬ್ಬ ವಿದ್ವಾಂಸರಿಲ್ಲ. ವಿನಿಕೆಗೆ ಹೊಸದೊಂದು ಆಯಾಮವನ್ನೇ ಏರ್ಪಡಿಸಿದರು.

ತಂದೆ ತಿರುವೆಂಕಟಾಚಾರ್ಯರು ಜ್ಯೋತಿಷಿ, ಸಂಗೀತರಸಿಕರಲ್ಲ. ಆದರೆ ಮಗನಿಗೆ ಪುದುಕೋಟೆ ಮಲಯಪ್ಪಯ್ಯರು, ನಾಮಕ್ಕಲ್ ನರಸಿಂಹಾಚಾರ್ಯರಲ್ಲಿ ಸಂಗೀತ ಶಿಕ್ಷಣ, ಪಟ್ಟಣಂ ಸುಬ್ರಹ್ಮಣ್ಯಯ್ಯರ ಪಟ್ಟಶಿಷ್ಯ ರಾಮನಾಡು ಪೂಚಿ ಶ್ರೀನಿವಾಸ ಅಯ್ಯಂಗಾರರಲ್ಲಿ ಪ್ರೌಢಶಿಕ್ಷಣ (12 ವರ್ಷಕಾಲ). ಸಂಪ್ರದಾಯ ಸಂಗೀತದ ಮೇಲೆ ಮೇರೆಯಿಲ್ಲದ ಹಿಡಿತ. ತಮ್ಮ 20ನೆಯ ವಯಸ್ಸಿನಲ್ಲಿ ಮೊದಲ ಕಚೇರಿಯಲ್ಲೇ ಎಲ್ಲರ ಒಲವನ್ನು ಸೂರೆಗೊಂಡರು. ಅಂದಿನಿಂದಲೇ ಇವರ ಯಶಸ್ಸು ನೆಲೆಗೊಂಡಿತು.

ಚೌಕಟ್ಟು ಶುದ್ಧಸಂಪ್ರದಾಯ; ಆದರೆ ವಿನಿಕೆಯಲ್ಲಿ ನವನವೋನ್ಮೇಷದ ಪ್ರತಿಭೆ. ರಾಗನಿರೂಪಣೆಯಲ್ಲಂತೂ ಸಂಗ್ರಹವಾಗಿ, ಸಮಗ್ರವಾಗಿ, ಸುಮಧುರವಾಗಿ, ಸ್ವತಂತ್ರವಾಗಿ ಅವರ ಅಭಿವ್ಯಕ್ತಿ. ಅಚ್ಚುಕಟ್ಟು, ಹಿತಮಿತ, ಕ್ರಮವರಿತ ಸಂಗೀತ ಅವರದ್ದು. ಒಂದಿನಿತೂ ಆಯಾಸವಿಲ್ಲದೆ ನಾಲ್ಕೈದು ಗಂಟೆ ಹಾಡುವ ಸಾಮರ್ಥ್ಯ; ಕೇಳುವವರ ಕುತೂಹಲವನ್ನು ನಿಮಿಷನಿಮಿಷವೂ ಕೆರಳಿಸುವ ವಿನಿಕೆ. ತಾರಸ್ಥಾಯಿಯಲ್ಲಿ ಪಂಚಮವನ್ನು ಹಿಡಿದು ಹಾಡುತ್ತಿದ್ದರೆ ರಸಿಕರಿಗೆ ರಸದೂಟ. ಕಾಂಬೋಜಿರಾಗವೆಂದರೆ ದೇವಲೋಕವೇ ಸಿದ್ಧವಾಗುತ್ತಿದ್ದಿತು.

ತ್ಯಾಗರಾಜರ ಪರಂಪರೆಗೇ ಸೇರಿದವರಾಗಿ ತ್ಯಾಗರಾಜರ ಕೃತಿಗಳಿಗೆ ಜೀವತುಂಬಿದರು. ಅರುಣಾಚಲ ಕವಿರಾಯರ ರಾಮನಾಟಕವೆಂಬ ಗೇಯನಾಟಕಕ್ಕೆ ಸ್ವರಸಂಯೋಜನೆ ಮಾಡಿ ಬೆಳಕಿಗೆ ತಂದರು; ಗೋದಾದೇವಿಯ ತಿರುಪ್ಪಾವೈ ಪದಗಳನ್ನೂ ಹಾಡಿ ಪ್ರಾಚುರ್ಯವನ್ನೊದಗಿಸಿದರು. ಹಾಡುವಾಗ ಅವರ ನೆಮ್ಮದಿ, ಉತ್ಸಾಹ, ಶಿಸ್ತು ಎದ್ದು ಕಾಣುತ್ತಿದ್ದುವು. ಪಕ್ಕವಾದ್ಯಗಳ ಗುದ್ದಾಟ, ಗದ್ದಲ, ಗೊಂದಲಗಳಿಗೆ ಎಡೆಮಾಡಿಕೊಡುತ್ತಿರಲಿಲ್ಲ. ಇವರದ್ದು ಹೇಳಿ ಕೇಳಿ ಮನೋಧರ್ಮಸಂಗೀತ; ಲೆಕ್ಕಾಚಾರಕ್ಕೆ ಒಲಿದವರಲ್ಲ ಅವರು.

'ಸಂಗೀತಕಲಾನಿಧಿ' (1939); 'ಪದ್ಮಭೂಷಣ' (1958). ಶಿಷ್ಯರಲ್ಲಿ ಪಾಲಕ್ಕಾಡು ಕೆ. ವಿ. ನಾರಾಯಣಸ್ವಾಮಿ, ಮಧುರೆ ಕೃಷ್ಣನ್, ಬಿ. ರಾಜಂ ಅಯ್ಯರ್ ಮೊದಲಾದವರು ಪ್ರಮುಖರು. ಅವರ ಪ್ರಭಾವವನ್ನು ಒಡಮೂಡಿಸಿಕೊಂಡವರು ನೂರಾರು ಮಂದಿ ವಿದ್ವಾಂಸರು.

ಮಹಾರಾಜಪುರಂ ವಿಶ್ವನಾಥಯ್ಯರ್
(1896–1970)

ತ್ಯಾಗರಾಜರ ಪರಂಪರೆಯಲ್ಲಿ ವಿಶಿಷ್ಟವಾಗಿ ಬೆಳಗಿದ ಒಂದು ದೀಪ. ತಂದೆ ರಾಮಯ್ಯರ್ ಸಂಗೀತ ರಸಿಕರು. ತಂಜಾವೂರು ಜಿಲ್ಲೆಯಲ್ಲಿ ಕಾವೇರಿತೀರದ ಮಹಾರಾಜಪುರಂಗೆ ನೆರೆಯಲ್ಲಿರುವ ತಿರುಕ್ಕೋಡಿಕಾವಲ್ ನಟರಾಜನ ಆಲಯದಲ್ಲಿ ನಾಗಸ್ವರವಿದ್ವಾಂಸರಾಗಿದ್ದ ತಿರುಮಾರ್ಗಳ್ ನಟೇಶನ್ ಅವರ ವಾದನದ ವೈಖರಿಗೆ ಮಾರುಹೋದವರು ವಿಶ್ವನಾಥಯ್ಯರ್. ಸಂಗೀತದ ಮೇಲೆ ಹೀಗೆ ಮೂಡಿದ ಒಲವು ಸಂಗೀತಕ್ಕೇ ಸೆಳೆದುಕೊಂಡಿತು.

ಉಮಯಾಳ್‌ಪುರಂ ಸ್ವಾಮಿನಾಥಯ್ಯರಲ್ಲಿ ಶಿಕ್ಷಣ; ವೇಂಗಯ್ಯರ ಮಾರ್ಗದರ್ಶನ; ಘಟವಿದ್ವಾಂಸರಾಗಿದ್ದ ರಂಗಪ್ಪಯ್ಯರ ವಾದನಕ್ಕೆ ಒಲಿದು ತಾಳವಾದ್ಯಗಳನ್ನೂ ಅಭ್ಯಾಸಮಾಡಿದರು. ಅವರ ಹಾಡಿಕೆಯಲ್ಲಿ ಶಾರೀರದ ಸೊಬಗು ಮಾತ್ರವಲ್ಲದೆ ಮನೋಧರ್ಮದ ಪ್ರತಿಭೆ ಎದ್ದುಕಾಣುತ್ತಿದ್ದು ತುಂಬ ಜನಪ್ರಿಯರಾದ ಗಾಯಕರಾದರು. ಲಯಜ್ಞಾನ, ರಸಭಾವನಿರೂಪಣೆ, ಗಾನದಲ್ಲಿ ತನ್ಮಯತೆ ಇವುಗಳಿಂದಾಗಿ ಜನ ಇವರನ್ನು 'ಸಂಗೀತಭೂಪತಿ' ಯೆಂದೇ ಆದರಿಸಿದರು. ಅವರು ಹಾಡುತ್ತಿದ್ದ ಮೋಹನ ರಾಗ ಇವರಿಗೆ ಒಲಿದಂತೆ ಬೇರೆ ಯಾರಿಗೂ ಒಲಿಯಲಿಲ್ಲ! ಯಾವ ರಾಗವೇ ಆಗಲಿ ಇವರ ಬಾಯಿಂದ ಬಂದರೆ ಮೋಹಕವೇ!

ಶುದ್ಧಶಾಸ್ತ್ರೀಯ ಸಂಗೀತವನ್ನೇ ಮೆಚ್ಚಿಕೊಂಡಿದ್ದವರು; ಹಿಂದೂಸ್ತಾನೀ ಸಂಗೀತದ ಪರಿಚಯವೂ ಚೆನ್ನಾಗಿದ್ದಿತು. ತ್ಯಾಗರಾಜರ ಭಕ್ತರು; ಪ್ರತಿವರ್ಷ ಆರಾಧನೆಯ ವೇಳೆ ತಿರುವಯ್ಯಾರಿಗೆ ಹೋಗಿ ಬರುತ್ತಿದ್ದರು. ಭಕ್ತಿಯಿಂದಲೇ ತ್ಯಾಗರಾಜ ಕೃತಿಗಳನ್ನು ಹಾಡುತ್ತಿದ್ದರು. ಹಾಡುವಾಗ ಮೈಮರೆಯುತ್ತಿದ್ದರು. ಸಂಪ್ರದಾಯ ಸಂಗೀತದ ಸಾರ್ವಭೌಮರೆನಿಸಿದ್ದರೂ ಚಲಚ್ಚಿತ್ರ ರಂಗವನ್ನು ಪ್ರವೇಶಿಸಿದರು. ಮಾತಿನಲ್ಲಿ ಹಾಸ್ಯದ ಹೊನಲು.

'ಸಂಗೀತಕಲಾನಿಧಿ'; ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿದರು. ಶಿಷ್ಯರಲ್ಲಿ ಶೆಮ್ಮಂಗುಡಿ ಶ್ರೀನಿವಾಸಯ್ಯರು ಪ್ರಸಿದ್ಧರು. ಹಾಡಿಕೆಯಲ್ಲಿ ಹೆಸರಾದರೂ ಖಂಜರಿ ವಾದ್ಯವನ್ನು ಪ್ರೌಢಿಮೆಯಿಂದ ನುಡಿಸುತ್ತಿದ್ದರು.

ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೈ

(1898–1970)

ನಾಗಸ್ವರವಾದನಕ್ಕೆ ಒಲಿದ ಇಶೈವೆಳ್ಳಾಲರ್ ಪಂಗಡದಲ್ಲಿ ಹುಟ್ಟಿದವರಾದರೂ ಪಿಟೀಲನ್ನು ತಮ್ಮ ವೃತ್ತಿಗೂ ಅನುರಕ್ತಿಗೂ ಆರಿಸಿಕೊಂಡರು. ಆದರೆ ಹಾಡಿಕೆಯಲ್ಲಿ ಪರಿಣತಿಯನ್ನು ಪಡೆದುಕೊಂಡದ್ದು ನಾಗಸ್ವರ ವಿದ್ವಾಂಸರಾಗಿದ್ದ ಕಂದಸ್ವಾಮಿ ಪಿಳ್ಳೆಯವರಿಂದಲೇ. ಅನಂತರ ಪಲ್ಲವಿ ವಿದ್ವಾಂಸರಾಗಿದ್ದ ತಿರುವಿಶನಲ್ಲೂರು ನಾರಾಯಣಸ್ವಾಮಿ ಅಯ್ಯರಲ್ಲಿ ಪ್ರೌಢಶಿಕ್ಷಣ. ಪಂದನಲ್ಲೂರು ಚಿನ್ನಸ್ವಾಮಿ ಪಿಳ್ಳೆಯವರ ಮಾರ್ಗದರ್ಶನ. ಮೊದಲಿನಿಂದ ಅಕ್ಕ ರತ್ನಮ್ಮಾಳ್ ಅವರ ಆರೈಕೆಯಲ್ಲಿ ಸಂಗೀತದ ಮುನ್ನಡೆ.

ವಿಖ್ಯಾತರಾದ ತಿರುಕ್ಕೋಡಿಕಾವಲ್ ಕೃಷ್ಣಯ್ಯರಲ್ಲಿ ಪಿಟೀಲು ಶಿಕ್ಷಣ. 1916ರಲ್ಲಿ ಮೊದಲ ಕಚೇರಿ, ಹುಟ್ಟೂರಾದ ಆಲಂಗುಡಿಯಲ್ಲಿ. ಮುತ್ತಯ್ಯ ಭಾಗವತರ ಉತ್ತೇಜನ; ನಾಮಕ್ಕಲ್ ನರಸಿಂಹಯ್ಯಂಗಾರ್ಯರಿಂದ ಪ್ರೌಢಶಿಕ್ಷಣ, ಕೋನೇರಿರಾಜಪುರಂ ವೈದ್ಯನಾಥಯ್ಯರ್ (1917), ಪೂಚಿ ಶ್ರೀನಿವಾಸಯ್ಯಂಗಾರ್ (1919) ಮೊದಲಾದ ಹಿರಿಯ ಗಾಯಕರಿಗೆಲ್ಲ ಪಕ್ಕವಾದಕರು. ತಿರುವಾಂಕೂರು ಸಂಸ್ಥಾನದ ಆಸ್ಥಾನ ವಿದ್ವಾಂಸರು (1940); ಅರಸರಿಂದ ಆನೆಯ ಉಡುಗೊರೆ (ಕುಂಭಕೋಣದ ಗುಡಿಗೆ ಕೊಟ್ಟುಬಿಟ್ಟರೆನ್ನಿ). 'ಸಂಗೀತಕಲಾನಿಧಿ' (1948). ಸಂಗೀತ ನಾಟಕ ಅಕ್ಯಾಡಮಿ ಪ್ರಶಸ್ತಿ (1950).

ಸಂಗೀತಗಾರನು ಎಡೆಬಿಡದೆ ತನ್ನ ವಿದ್ವತ್ತನ್ನು ಹೆಚ್ಚಿಸಿಕೊಳ್ಳುತ್ತಲೆ ಇರಬೇಕೆಂಬುದು ಅವರ ನಿಲುವು. ಸಂಗೀತಕ್ಕೆ ಸಾಧನೆ ಎಷ್ಟಿದ್ದರೆ ಅಷ್ಟು ಮೆರುಗು. ತಾಳ್ಮೆಯಿರಬೇಕು, ಸಹನೆ ಇರಬೇಕು, ಕಷ್ಟಸಹಿಷ್ಣುತೆ ಇರಬೇಕೆಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು.

ಅವರದ್ದು ಅಪಾರವಾದ ವಿದ್ವತ್ತು; ವಾದನದಲ್ಲಿ ವಿಶಿಷ್ಟವಾದ ಪ್ರೌಢಿಮೆ, ನಯ, ಲಾಲಿತ್ಯ, ಗಾಂಭೀರ್ಯ. ಅವರ ವ್ಯಕ್ತಿತ್ವ, ನಡೆನುಡಿಗಳು ಎಂದೂ ಗಂಭೀರವಾದುವೇ. ಸೊಗಸಾದ ಮನೋಧರ್ಮ. ಅವರದ್ದು ವಿಪುಲವಾದ ಶಿಷ್ಯವರ್ಗ. ಮಾಯೂರಂ ಗೋವಿಂದರಾಜ ಪಿಳ್ಳೈ, ಸಾವಿತ್ರಿ ಸತ್ಯಮೂರ್ತಿ, ಸಿಕ್ಕಲ್ ಭಾಸ್ಕರನ್, ಟಿ. ಎಸ್. ಸಂಬಂಧ ಪಿಳ್ಳೈ, ತಿರುಗೋಕರ್ಣಂ ಲೋಕನಾಥ ಪಿಳ್ಳೈ, ದಂಡಪಾಣಿ ದೇಶಿಕರ್, ಕಂದಾಡೆ ರಾಜಲಕ್ಷ್ಮಿ, ಪಾಪಾ ಸ್ವಾಮಿನಾಥನ್ ಮೊದಲಾದ ಹಲವರು ಅವರಲ್ಲಿ ಪಿಟೀಲು ವಾದನವನ್ನೂ ಗಾಯನವನ್ನೂ ಕಲಿತರು.

ಸಂಪ್ರದಾಯಶರಣರೇ ಆದರೂ ತಮ್ಮದೇ ವಿಶಿಷ್ಟವಾದೊಂದು ಶೈಲಿಯನ್ನು ಬೆಳೆಸಿಕೊಂಡರು.

ಪಾಪನಾಶಂ ಶಿವನ್
(1890–1973)

ತಂಜಾವೂರು ಜಿಲ್ಲೆಯ ಪೊಲಹಂ ರಾಮಯ್ಯ, ಪಾಪನಾಶಕ್ಷೇತ್ರದ ವರ್ಷಾವಧಿ ಉತ್ಸವಕ್ಕೆ ತುಂಡುಬಟ್ಟೆ ಉಟ್ಟು ತಪ್ಪದೆ ಹಾಜರಾಗುತ್ತಿದ್ದರಾಗಿ ಪಾಪನಾಶಂ ಶಿವನ್ ಆದರು. ಅನಾಥಶಿಶು, ಊರೂರು ಅಂಡಲೆಯುತ್ತಿದ್ದರೂ ಭಕ್ತಿ ಬೇರೂರಿತು. ಸಾಹಿತ್ಯದಲ್ಲಿ ಒಲವು ಮೂಡಿತು. ತಿರುವನಂತಪುರದಲ್ಲಿ ಹತ್ತು ವರ್ಷ ಸಂಸ್ಕೃತ ಸಾಹಿತ್ಯ, ವ್ಯಾಕರಣಗಳ ಅಧ್ಯಯನ.

ಅಲ್ಲೇ ಭಜನೆ, ಕೀರ್ತನೆ, ಕಾಲಕ್ಷೇಪಗಳಲ್ಲಿ ತೊಡಗಿ ಸಂಗೀತವನ್ನೂ ಭಾವುಕತೆಯನ್ನೂ ಮೈಗೂಡಿಸಿಕೊಂಡರು. ನೀಲಕಂಠ ಶಿವನ್ ಭಜನ ಗೋಷ್ಠಿಯಲ್ಲಿ ಸೇರಿದರು. ರಾಮಲಿಂಗಸ್ವಾಮಿಗಳ ಅರಳ್‌ಪದಗಳನ್ನು ಹಾಡುವುದರಲ್ಲಿ ಎತ್ತಿದ ಕೈಯಾದರು. ಓದುವರ್ ಗೋಷ್ಠಿಗಳಲ್ಲೂ ಕೂಡಿಕೊಂಡರು. ಹಾಡುವಾಗ ಭಾವಪಾರವಶ್ಯ, ಉಳಿದಂತೆ ಮೌನ.

ಗುರು ನೀಲಕಂಠ ಶಿವನ್ ಅವರ ಕೃತಿಗಳ ಪ್ರಚಾರಕ್ಕೆ ಟೊಂಕಕಟ್ಟಿ ನಿಂತರು. ಅರುಣಗಿರಿನಾಥರ್, ರಾಮಲಿಂಗಸ್ವಾಮಿ, ಗೋಪಾಲಕೃಷ್ಣಭಾರತಿ, ವೇದನಾಯಕಂ ಪಿಳ್ಳೆ ಇವರ ಸಾಲಿನಲ್ಲೇ ತಮಿಳು ವಾಗ್ಗೇಯಕಾರರಾದರು. ಮುಂದೆ ಮದುವೆಯಾಗಿ ಚೆನ್ನೈನಲ್ಲಿ ನೆಲೆಸಿದರು. ಚಲನಚಿತ್ರಗಳಿಗೆ, ನೃತ್ಯನಾಟಕಗಳಿಗೆ ಸಂಗೀತವನ್ನು ಕಲ್ಪಿಸಿಕೊಟ್ಟರು. ಕೆಲವು ಚಿತ್ರಗಳಲ್ಲಿ ಪಾಲ್ಗೊಂಡದ್ದೂ ಉಂಟು.

2000ಕ್ಕೂ ಮಿಕ್ಕ ಗೇಯಪ್ರಬಂಧಗಳನ್ನು ಸಂಸ್ಕೃತ, ತಮಿಳು ಭಾಷೆಗಳಲ್ಲಿ ರಚಿಸಿದ್ದಾರೆ. ರಾಮಾಯಣವನ್ನು 24 ರಾಗಗಳಲ್ಲಿ ಗೇಯರೂಪಕ್ಕೆ ಇಳಿಸಿದ್ದಾರೆ. ಅವರ ಕೃತಿಗಳ ಜನಪ್ರೀತಿ ಸೋಜಿಗವನ್ನುಂಟುಮಾಡುತ್ತದೆ. ಸಂಗೀತ-ಸಾಹಿತ್ಯ ಎರಡರಲ್ಲೂ ಸಿದ್ಧಹಸ್ತರು.

ದೈವಭಕ್ತರು, ವಿರಕ್ತರು, ಭಾವುಕರು, ಉತ್ತಮ ಗಾಯಕರು, ಪ್ರತಿಭಾಶಾಲಿಗಳು, ಶ್ರೇಷ್ಠ ವಾಗ್ಗೇಯಕಾರರು, ತ್ಯಾಗರಾಜಸ್ವಾಮಿಗಳ ಭಕ್ತರು. ಸಂಪ್ರದಾಯಶೀಲರು; ಸರಳರು; ಸದ್ಗುಣ ಸಂಪನ್ನರು. ಜನಾನುರಾಗವನ್ನು ಅಪಾರವಾಗಿ ಪಡೆದುಕೊಂಡು ಕೃತಾರ್ಥರಾದವರು.

ಎಂಎಸ್‌ಗೆ ಚಲಚ್ಚಿತ್ರ ನಟಿಯಾಗಿದ್ದಾಗಲೇ ಸಂಗೀತ ನಿರ್ದೇಶನ ಮಾಡಿದ ವಾಗ್ಗೇಯಕಾರರು. ಭಜನೆಯ ಪದ್ಧತಿಯನ್ನು ಆಕೆಗೆ ತಿಳಿಸಿಕೊಟ್ಟವರು. ಸಂಗೀತದಲ್ಲಿ ಭಕ್ತಿಭಾವದ ಪಾರಮ್ಯವನ್ನು ಮನವರಿಕೆ ಮಾಡಿಕೊಟ್ಟವರು.

ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ
(1898–1975)

ಕಾಂಚೀಪುರಂ ನಾಯನಾಪಿಳ್ಳೆಯವರ ಪಟ್ಟಶಿಷ್ಯ. ತೆಲುಗು ಮೂಲದವರಾದರೂ ತಮಿಳುನಾಡಿನಲ್ಲಿ ದಿಗ್ವಿಜಯ ಸಾಧಿಸಿದ ಧೀರ. 'ಸಂಗೀತ ಕಲಾನಿಧಿ'. ಅರವತ್ತು ವರ್ಷಗಳು ಶ್ರೇಷ್ಠಗಾಯಕರಾಗಿ, ಸಂಗೀತಶಿಕ್ಷಕರಾಗಿ ಮೆರೆದವರು. ಗಾಯನದಲ್ಲಿ ಗಾಂಭೀರ್ಯ; ಲಯಜ್ಞಾನ. ಪಲ್ಲವಿ ನಿರೂಪಣೆಯಲ್ಲಿ ನಿಃಸೀಮರು. ಕಂಚಿನ ಕಂಠ. ಸ್ವಚ್ಛಂದವಾಗಿ ಸ್ವರಸಂಚಾರ, ಶುದ್ಧವಾದ ಸಂಪ್ರದಾಯ.

ತಂದೆ ಚಿತ್ತೂರು ಪ್ರಾಂತ್ಯಕ್ಕೆ ಸೇರಿದ್ದ ಪುಂಗನೂರು ಸಂಸ್ಥಾನದ ಹರಿಕಥೆ ಮತ್ತು ಪಿಟೀಲು ವಿದ್ವಾಂಸರಾಗಿದ್ದ ಪೇರಯ್ಯ; ತಾಯಿ ಕಲಾವಂತುಲು ಪಂಗಡಕ್ಕೆ ಸೇರಿದ ಗಾಯಕಿ, ಮೊದಿಲೇಶ್ವರಮ್ಮ. ಮೊದಲು ತಂದೆ-ತಾಯಿಯರಿಂದಲೇ ಪಾಠ; ಅನಂತರ ಕಾಂಚೀಪುರಂ ನಾಯನಾಪಿಳ್ಳೆಯವರಲ್ಲಿ ಹದಿನೈದು ವರ್ಷಗಳ ಗುರುಕುಲವಾಸ. ಆಗಲೇ ಸುಬ್ರಹ್ಮಣ್ಯ ನಾಯುಡು ಗುರುಗಳ ಅಣತಿಯಂತೆ ಸುಬ್ರಹ್ಮಣ್ಯ ಪಿಳ್ಳೆ ಆದದ್ದು!

ಬಹುವರ್ಷಗಳು ಪ್ರತಿದಿನವೂ ಅವರಿಗೆ ಕಚೇರಿ ಇರುತ್ತಿದ್ದಿತು; ಅಷ್ಟು ಜನಪ್ರೀತಿಯನ್ನು ಗಳಿಸಿದ್ದರು. ಅವರ ಕಚೇರಿಯಲ್ಲಿ ಹಲವು ಲಯವಾದ್ಯಗಳು; ಗುರುವಿನಂತೆಯೆ ಇವರದ್ದೂ 'ಫುಲ್‌ಬೆಂಚ್'. ತ್ಯಾಗರಾಜರ ಅನೇಕ ಕೃತಿಗಳನ್ನು ಜನಪ್ರಿಯವಾಗಿಸಿದರು. ಜಾವಳಿ, ತಿರುಪ್ಪುಗಳು ಹಾಡುವುದರಲ್ಲಿ ಎತ್ತಿದ ಕೈ. ಅಣ್ಣಾಮಲೆ, ತಿರುಪತಿ, ಚೆನ್ನೈಗಳಲ್ಲಿ ಸಂಗೀತ ಕಾಲೇಜುಗಳಲ್ಲಿ ಶಿಕ್ಷಕರಾಗಿ, ಪ್ರಾಂಶುಪಾಲರಾಗಿ ದುಡಿದರು.

ರಸಿಕರ ಮೆಚ್ಚಿನ ಹಾಡುಗಳಾದ 'ಮಧುರಾನಗರಿಲೊ' (ಆನಂದಭೈರವಿ) 'ಮಾವಲ್ಲಗಾದಮ್ಮ' (ಮಾಂಡ್), 'ಕುಲಮುಲೋನ ಗೊಲ್ಲದಾನ' (ಸಿಂಧುಭೈರವಿ) 'ಅಮ್ಮ ಯಶೋದ' ಇವು ಇವರ ರಚನೆಗಳೇ. ಇವರ ಶಿಷ್ಯರಲ್ಲಿ ಪ್ರಮುಖರೆಂದರೆ ಮಧುರೆ ಸೋಮು, ತಾಡೆಪಲ್ಲಿ ಲೋಕನಾಥಶರ್ಮ, ರೇವತಿ ರತ್ನಸ್ವಾಮಿ (ಮಗಳು).

ಸರಳ ಸ್ವಭಾವ, ಉದಾರಿ, ಮುಗ್ಧವಾದ ಮನೋವೃತ್ತಿ. ಶಿಷ್ಯರಲ್ಲಿ ತುಂಬು ವಾತ್ಸಲ್ಯ, ಶಿಕ್ಷಣದಲ್ಲಿ ಏನೊಂದು ಮುಚ್ಚುಮರೆಯಿಲ್ಲ. ಅಜಾತಶತ್ರು; ಎಲ್ಲರಿಗೂ ಅಚ್ಚುಮೆಚ್ಚು.

ಕಾರೈಕುಡಿ ಸಾಂಬಶಿವ ಅಯ್ಯರ್

(1888–1958)

ವೀಣಾವಾದನ ಬೇರೆ ಅಲ್ಲ, ಉಸಿರಾಟ ಬೇರೆ ಅಲ್ಲ. ವೀಣೆ ಎಂದರೆ ಅವರೇ, ಅವರೆಂದರೆ ವೀಣೆಯೇ. ತಾನದ ವಿಸ್ತಾರ, ಪಲ್ಲವಿಯ ಸೊಗಸು, ಸ್ವರಪ್ರಸ್ತಾರದ ಸ್ವಾರಸ್ಯ, ಘನರಾಗ ಪಂಚಕದ ನಿರೂಪಣೆ ಅವರದ್ದೇ ಸ್ವತ್ತು.

ಎಂಟು ತಲೆಮಾರುಗಳಿಂದ ವೈಣಿಕರು. ತಂದೆ ಸುಬ್ಬಯ್ಯನವರು ಪುದುಕ್ಕೋಟೆಯ ಆಸ್ಥಾನ ವಿದ್ವಾಂಸರು. ಸೋದರ ಸುಬ್ಬರಾಮಯ್ಯನವರಿಗೂ (1886–1936) ಇವರಿಗೂ ತಂದೆಯಿಂದಲೇ ಪಾಠ. ಐದನೆಯ ವಯಸ್ಸಿಗೇ ವೀಣಾವಾದನದ ಆರಂಭ. ಹನ್ನೆರಡನೆಯ ವಯಸ್ಸಿನಲ್ಲೇ ಕಚೇರಿ. ದಿನಕ್ಕೆ ಹದಿಮೂರು, ಹದಿನಾಲ್ಕು ಗಂಟೆಗಳ ಸಾಧಕ. ವೀಣೆಯೆಂದರೆ ತಮ್ಮ ಆರಾಧ್ಯದೈವವೆಂದೇ ಎಣಿಕೆ. ಪೂಜೆಯ ಕಾಲದಲ್ಲೂ ವೀಣಾ ವಾದನವೇ.

ಸೋದರರಿಬ್ಬರೂ ಸೇರಿಯೇ ವೀಣೆಯ ಕಚೇರಿಗಳನ್ನು ನೀಡುತ್ತಿದ್ದರು. ಸುಬ್ಬರಾಮಯ್ಯನವರದ್ದು ಊರ್ಧ್ವವೀಣೆ, ನಿಲ್ಲಿಸಿಕೊಂಡು ನುಡಿಸುವರು. ಇವರದ್ದು ತೀರ್ಯಕ್ ವೀಣೆ, ವಾಡಿಕೆಯಂತೆ ಅಡ್ಡಲಾಗಿರಿಸಿಕೊಂಡು ನುಡಿಸುತ್ತಿದ್ದರು. ಅವರದ್ದು ತಾಂಡವವಾದರೆ, ಇವರದ್ದು ಲಾಸ್ಯ. ಅದು ಗಂಡು, ಇದು ಹೆಣ್ಣು. ಈ ಜೋಡಿ ಮೂವತ್ತು ವರ್ಷಗಳಿಗೂ ಮೀರಿ (1903–1936) ಸಂಗೀತ ಪ್ರಪಂಚದಲ್ಲಿ ಮೆರೆಯಿತು.

ಸುಬ್ಬರಾಮಯ್ಯರು ತೀರಿಕೊಂಡ ಮೇಲೆ ಆರು ವರ್ಷ ಸಾಂಬಶಿವಯ್ಯರವರು ವೀಣೆಯ ಕಚೇರಿಗಳನ್ನು ನಿಲ್ಲಿಸಿಬಿಟ್ಟರು. ಮಿತ್ರರ ಬಲವಂತಕ್ಕೆ ಕಟ್ಟುಬಿದ್ದು 1948ರಲ್ಲಿ ಚೆನ್ನೈನ ಪೆರಂಬೂರಿಗೆ ಬಂದು ಅಲ್ಲಿ ನೆಲಸಿ, ಪೆರಂಬೂರು ಸಂಗೀತ ಸಭೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. 1954ರಲ್ಲಿ ರುಕ್ಮಿಣಿದೇವಿ ಅಡಯಾರಿನ ಕಲಾಕ್ಷೇತ್ರಕ್ಕೆ ಕರೆಸಿಕೊಂಡರು. ಆರು ವರ್ಷಗಳು ಇಲ್ಲಿ ವೀಣಾ ಶಿಕ್ಷಣದ ಹೊರೆಯನ್ನು ಹೊತ್ತರು. ಗಂಟಲ ಕ್ಯಾನ್ಸರ್ ಬೇನೆಯಿಂದ ತೀರಿಕೊಂಡರು.

ಸಂಪ್ರದಾಯಶೀಲರು, ದೈವಭಕ್ತರು, ವಿವಿಕ್ತವಾಸಿಗಳು, ಸರಳ ಸ್ವಭಾವದವರು. 'ಸಂಗೀತಕಲಾನಿಧಿ'ಯೇ ಮೊದಲಾಗಿ ಅನೇಕ ಪುರಸ್ಕಾರಗಳು ಅವರನ್ನರಸಿಕೊಂಡುಬಂದವು.

ಶಿಷ್ಯರಲ್ಲಿ ದೇವಕೊಟ್ಟೆ ನಾರಾಯಣಯ್ಯಂಗಾರ್, ರಾಜೇಶ್ವರಿ ಪದ್ಮನಾಭನ್ (ಅಣ್ಣನ ಮೊಮ್ಮಗಳು), ರಂಗನಾಯಕಿ ರಾಜಗೋಪಾಲ್, ರಾಮಶಾಸ್ತ್ರಿ, ಕೆ. ಎಸ್. ಸುಬ್ರಹ್ಮಣ್ಯಂ (ಸ್ವೀಕೃತ ಪುತ್ರ, ಅಣ್ಣನ ಮೊಮ್ಮಗ) ಪ್ರಮುಖರು.

ಟೈಗರ್ ವರದಾಚಾರ್ಯರು
(1876–1950)

ಸಾತ್ವಿಕ ಸ್ವಭಾವದ ಭಾವುಕ ಗಾಯಕರಿಗೆ 'ಟೈಗರ್' ಎಂದೇನು ಹೆಸರು? ಮೈಸೂರು ಮಹಾರಾಜರು ಇಟ್ಟ ಹೆಸರಂತೆ ಅದು. ವೀಣೆ ಶೇಷಣ್ಣನವರು ಇವರ ಹಾಡಿಕೆಯನ್ನು ಕೇಳಿ "ಹುಲಿಯಲ್ಲ, ಸಿಂಹ" ಎಂದರಂತೆ. ಅವರು ಹಾಡುವಾಗ ಕಲ್ಪಿಸುತ್ತಿದ್ದ ನೆನಪು ಅದು. ಕಾಡಿನಲ್ಲಿ ಸಿಂಹವೇ ರಾಜ; ಸಂಗೀತ ಕ್ಷೇತ್ರದಲ್ಲಿ ಇವರೇ ರಾಜ.

ಲಕ್ಷ್ಯ-ಲಕ್ಷಣ ಎರಡರಲ್ಲೂ ಸಿಂಹದಂತೆಯೇ ಮೇಲ್ಮೆ. ಸಂಪ್ರದಾಯದ ಚೌಕಟ್ಟಿನಲ್ಲಿ ಸ್ವಾತಂತ್ರ್ಯಕ್ಕೆ ಎಡೆಯಿದೆ ಎಂಬುದನ್ನು ತೋರಿಸಿಕೊಟ್ಟ ಧೈರ್ಯ ಅವರದ್ದು. ಸಂಗೀತದಲ್ಲಿರಬೇಕಾದುದು ಭಾವ; ರಾಗ, ತಾಳ ಎರಡೂ ಇದನ್ನು ಅನುಸರಿಸಬೇಕು ಎಂದು ಅವರ ನಿಲುವು. ಸರ್ವಲಘುಪ್ರಸ್ತಾರದ ಸೊಗಸನ್ನು ಅವರು ಕಾಣಿಸುತ್ತಿದ್ದರು. ಶಾರೀರ ಅಹಿತವಾಗಿದ್ದರೂ ವಿಚಿತ್ರವೃತ್ತಿಗಳಿಂದ ಅದ್ಭುತವಾದ, ಆಕರ್ಷಕವಾದ ವಿನಿಕೆ ಅವರದ್ದು.

ತಿರುವೊಟ್ರಿಯೂರು ಅವರದ್ದು; ತಂದೆ ಹರಿಕಥಾ ವಿದ್ವಾಂಸರು. ಪಟ್ಟಣಂ ಸುಬ್ರಹ್ಮಣ್ಯ ಅಯ್ಯರಲ್ಲಿ ಸಂಗೀತ ಶಿಕ್ಷಣ; ತಿರುವೊಟ್ರಿಯೂರು ತ್ಯಾಗಯ್ಯರ ಮಾರ್ಗದರ್ಶನವೂ ಇದ್ದಿತು. ಅಸಾಧಾರಣವಾದ ವಿದ್ವತ್ತು, ಉತ್ತಮಮಟ್ಟದ ಸಂಗೀತ, ಅತ್ಯಂತ ಭಾವುಕತೆ, ಪ್ರಯೋಗಶೀಲತೆ, ಪ್ರತಿಭೆ, ಪ್ರೌಢಿಮೆ, ಕಲ್ಪನಾವಿಲಾಸ ಇವು ವರದಾಚಾರ್ಯರ ಜನಪ್ರೀತಿಗೆ ಕಾರಣವಾದುವು.

ಚೆನ್ನೈ ಸಂಗೀತ ಅಕ್ಯಾಡಮಿಯವರು ಸಂಗೀತ ಶಿಕ್ಷಕರ ತರಬೇತಿಗೆ ನಡೆಸುತ್ತಿದ್ದ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು; ಆನಂತರ ಚಿದಂಬರದ ಅನ್ನಾಮಲೆ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನ ಮುಖ್ಯಸ್ಥರಾದರು. ಚೆನ್ನೈನ ಕಲಾಕ್ಷೇತ್ರಕ್ಕೆ ಬಂದು ಅಲ್ಲಿ ಅನೇಕ ವರ್ಷಗಳು ಸೇವೆ ಸಲ್ಲಿಸಿದರು.

ವಾಗ್ಗೇಯಕಾರರೂ ಹೌದು. ಆಶುರಚನೆಗಳೇ ಅವರ ವೈಶಿಷ್ಟ್ಯ. ಹೀಗೆ ಸುಮಾರು ನೂರರವರೆಗೆ ಅವರ ಕೃತಿಗಳಿವೆ. ವರ್ಣಗಳು (ತಾನ ಮತ್ತು ಪದ) ಅವರ ರಚನೆಗಳಲ್ಲಿ ತುಂಬ ಮನೋಜ್ಞವಾದುವು. 'ಸಂಗೀತ ಕಲಾನಿಧಿ'ಯಾದದ್ದಲ್ಲದೆ ಅಕ್ಯಾಡಮಿಯ ತಜ್ಞರ ಸಭೆಗಳಲ್ಲಿ ತಪ್ಪದೆ ಪಾಲ್ಗೊಂಡು ಗಹನವಾದ ವಿಷಯಗಳನ್ನು ಸರಳವಾಗಿ ವಿವರಿಸುತ್ತಿದ್ದರು. ಅವರ ಹಾಸ್ಯಪ್ರಜ್ಞೆ, ಸರಳಸ್ವಭಾವ, ಪ್ರಾಮಾಣಿಕತೆಗಳು ಎಲ್ಲರನ್ನೂ ಅವರತ್ತ ಸೆಳೆಯುತ್ತಿದ್ದುವು.

ಅವರ ಶಿಷ್ಯರಲ್ಲಿ ಎಂ. ಡಿ. ರಾಮನಾಥನ್ ಪ್ರಮುಖರು.

ಚೆಂಬೈ ವೈದ್ಯನಾಥ ಭಾಗವತರು
(1896–1975)

ಹಿಂದಿನ ತಲೆಮಾರಿನಲ್ಲಿ ಸಂಗೀತ ಸಾಮ್ರಾಜ್ಯದ ಸಾರ್ವಭೌಮರಂತೆ ಮೆರೆದವರು. ಅವರ ಶಾರೀರದ ಅಸಾಧಾರಣ ಸೊಬಗು, ಮನೋಧರ್ಮದ ಸೊಗಸು, ಸರಸವಾದ ವ್ಯಕ್ತಿತ್ವದ ಮೆರಗು ಅವರ ಜನಪ್ರೀತಿಯ ಹಿನ್ನೆಲೆ. ದೈವಭಕ್ತಿ, ಸದಾಚಾರ ಮತ್ತು ಸರಳಸುಂದರ ಬದುಕು ಎಲ್ಲರ ಗೌರವವನ್ನೂ ಸೂರೆಗೊಂಡವು. ಪರಿಶುದ್ಧವಾದ ಚಾರಿತ್ರ, ಸಂಪ್ರದಾಯಶುದ್ಧವಾದ ಗಾಯನ, ರಸಿಕಮನೋರಂಜನೆಗೆ ಹೇಳಿ ಮಾಡಿಸಿದ ಶೈಲಿ.

ಬಾಲ್ಯದಲ್ಲಿ ತೊಂದಕ್ಕುಳದಿ ಅನಂತರಾಮಭಾಗವತರಲ್ಲಿ ಶಿಕ್ಷಣ. ಶಾರೀರವು ಆರನೆಯ ವರ್ಷದಲ್ಲೇ ತೊಂದರೆ ಕೊಟ್ಟಿತಾಗಿ ಪಿಟೀಲು ವಾದನದ ಕಡೆ ಒಲವು. ಆ ವಾದ್ಯದಲ್ಲೂ ಸಮರ್ಥರಾದರು. ಮೂರು ವರ್ಷಗಳನಂತರ ಶಾರೀರ ಹತೋಟಿಗೆ ಬಂದಿತು. ಅಲ್ಲಿಂದ ಮುಂದೆ ಅವರು ತೀರಿಕೊಳ್ಳುವವರೆಗೆ ಏಕಪ್ರಕಾರವಾಗಿ ಆಕರ್ಷಕವಾದ ಕಂಠಶ್ರೀ.

ಅವರ ಗಾಯನದಲ್ಲಿ ಲಯಕ್ಕೆ ಅಗ್ರಪಟ್ಟ. ಧೀರ ಗಂಭೀರವಾದ ವಿನಿಕೆ; ಭಾವಕ್ಕೆ ಹೆಚ್ಚಿನ ಒತ್ತು. ಎಷ್ಟು ಗಂಟೆಗಳಾದರೂ ಅನಾಯಾಸವಾಗಿ ಹಾಡುವರು; ರಸಿಕರಿಗೆ ಅಷ್ಟೂ ಕಾಲ ಆಹ್ಲಾದದ ಪ್ರವಾಹದಲ್ಲಿ ಮಿಂದ ಅನುಭವ. ಹಾಡಿಕೆಯಲ್ಲಿ ಶಿಸ್ತು, ಸೊಗಸು ಎಂದೂ ತಪ್ಪಿದ್ದಲ್ಲ.

ಪಕ್ಕವಾದ್ಯದವರನ್ನು ಹುರಿದುಂಬಿಸುವುದರಲ್ಲಿ ಎತ್ತಿದ ಕೈ. ಪ್ರತಿಭಾಶಾಲಿಗಳನ್ನು ಜನರೆದುರು ತರುವುದರಲ್ಲೂ ಮುಂದಾಳು. ಅದರಲ್ಲೂ ಎಷ್ಟೋ ಎಳೆಯ ಗಾಯಕರನ್ನೂ ವಾದಕರನ್ನೂ ಪ್ರಸಿದ್ಧಿಗೆ ತಂದವರು. ಚೌಡಯ್ಯನವರ ಪರಮ ಮಿತ್ರರು; ಅವರ ಒತ್ತಾಯಕ್ಕೆ ಮಣಿದು ಚಲಚ್ಚಿತ್ರದಲ್ಲೂ ಒಮ್ಮೆ ಕಾಣಿಸಿಕೊಂಡರು.

ಗುರುವಾಯೂರಪ್ಪನ ನಿಸ್ಸೀಮ ಭಕ್ತರು. ಕೃಷ್ಣನ ಗುಡಿಯಲ್ಲಿ ರಾತ್ರಿ ಸಂಗೀತ ವಿನಿಕೆಯನ್ನು ಸಂತೋಷದಿಂದ ನಡೆಸಿ, ನೆರೆದವರನ್ನು ಸಂತೋಷಗೊಳಿಸಿ, ಅದೇ ರಾತ್ರಿ ತೀರಿಕೊಂಡರು.

ಟಿ. ಚೌಡಯ್ಯ
(1895–1967)

ವಯೊಲಿನ್ ವಾದನಕ್ಕೆ ವಿಶೇಷವಾದ ಕಳೆಯನ್ನು ತೊಡಿಸಿ ಸಂಗೀತ ಸಾಮ್ರಾಜ್ಯದಲ್ಲಿ ಸ್ವಾರಸ್ಯವನ್ನು ಮೂಡಿಸಿದವರು. ಕಾವೇರಿದಂಡೆಯ ಮೇಲೆ ತಿರುಮಕೂಡಲು ತಮ್ಮ ತೌರೂರೆಂದು ಅದಕ್ಕೊಂದು ಮಾನ್ಯತೆಯನ್ನು ತಂದುಕೊಟ್ಟವರು. ತಾಯಿ ಸುಂದರಮ್ಮನಿಂದಲೇ ಸಂಗೀತದ ಮೇಲಣ ಒಲವನ್ನು ಗಳಿಸಿಕೊಂಡವರು.

ಹದಿನಾಲ್ಕು ಹದಿನೈದರ ಎಳೆತನದಲ್ಲೇ ಮೈಸೂರಿಗೆ ಬಂದು ಬಿಡಾರಂ ಕೃಷ್ಣಪ್ಪನವರ ಬಳಿ ಸಂಗೀತವನ್ನು ಕಲಿತು, ಎಂಟು ವರ್ಷಗಳಲ್ಲೇ ಈ ಅಸಾಧ್ಯ ಗುರುವಿಗೆ ಕಚೇರಿಯಲ್ಲಿ ಪಕ್ಕವಾದ್ಯ ನುಡಿಸುವ ಎದೆಗಾರಿಕೆ ಅವರದ್ದು. ಅಲ್ಲಿಂದ ಮುಂದೆ ಕಾಲಿಟ್ಟಲ್ಲೆಲ್ಲ ಜಯಭೇರಿಯೆ; ಹತ್ತಿದ ವೇದಿಕೆಯಲ್ಲೆಲ್ಲ ಕೊಂಡಾಟವೇ.

ಮತ್ತೆ ಅದೇನು ಸಾಧಕ! ಅದೇನು ಪ್ರತಿಭೆ! ಅದೇನು ಧೈರ್ಯ! ದಕ್ಷಿಣ ದೇಶದಲ್ಲೆಲ್ಲ ಅವರದ್ದೇ ನುಡಿಸಾಣಿಕೆಗೆ ಅಗ್ರಪಟ್ಟ. ಎಂ. ಎಸ್. ಸುಬ್ಬುಲಕ್ಷ್ಮಿಗೂ ಅವರದ್ದೇ ಪಕ್ಕವಾದ್ಯದ ಬಯಕೆ! ನಾಡಿನ ಹಿರಿಯ ವಿದ್ವಾಂಸರೆಲ್ಲ ಇವರನ್ನು ಆದರಿಸುವವರೇ.

ನುಡಿಸುವಾಗ ತನ್ಮಯತೆ, ಏಕಾಗ್ರತೆ, ನಾದಪೋಷಣೆ. ಸಂಶೋಧನೆಗೂ ಸೈ! ಏಳು ತಂತಿ ಪಿಟೀಲು (1927), ಹತ್ತೊಂಬತ್ತು ತಂತಿ ಪಿಟೀಲು. ಪಕ್ಕವಾದ್ಯವಾದರೂ ಸರಿ, ತನಿಯಾದರೂ ಸರಿ ಅವರೇ ನಾಯಕರು. ಅರುಣಾಚಲಪ್ಪನವರ ಹಾರ್ಮೋನಿಯಂ ಜೊತೆಗೆ ನುಡಿಸುತ್ತಿದ್ದರು. ಕಡೆಯ ಎಂಟು ಹತ್ತು ವರ್ಷಗಳು ದೊರೆಸ್ವಾಮಿ ಅಯ್ಯಂಗಾರರ ವೀಣೆಯೊಂದಿಗೆ.

'ತ್ರಿಮಕುಟ' ಎಂಬ ಅಂಕಿತದಿಂದ ಕಾಣಿಸಿಕೊಳ್ಳುವ ಸಂಗೀತರಚನೆಗಳು ಅವರವೇ. ಅಯ್ಯನಾರ್ ಕಲಾಶಾಲೆಯನ್ನು ರೂಪಿಸಿದವರು ಅವರೇ. ಚಲನಚಿತ್ರಗಳನ್ನೂ ತಯಾರಿಸಿ ಕೈಸುಟ್ಟುಕೊಂಡರು. ಸಂಗೀತಕ್ಕೆ ಚಿಕಿತ್ಸಕ ಗುಣವಿದೆಯೆಂದು ಸಾಧಿಸಿದರು. ಸಂಗೀತಗಾರರಿಗೆ ಆತ್ಮವಿಶ್ವಾಸ ಮುಖ್ಯವೆಂಬುದನ್ನು ಮನವರಿಕೆಮಾಡಿಕೊಟ್ಟರು.

ಶಿಷ್ಯರಲ್ಲಿ ಸೇತುರಾಮನ್, ಆರ್. ಕೆ. ವೆಂಕಟರಾಮಶಾಸ್ತ್ರಿ, ಕಂಡದೇವಿ ಅಳಗಿರಿಸ್ವಾಮಿ, ರಾಮರತ್ನಂ ಪ್ರಮುಖರು. ಕಡೆಯ ಗಳಿಗೆಯವರೆಗೂ ಸಂಗೀತದ ಗೀಳೇ. ನಾಡಿನ ಹೆಮ್ಮೆಯೆನಿಸಿದರು.

ತುರೈಯೂರು ರಾಜಗೋಪಾಲ ಶರ್ಮ

(ಜನನ : 1905)

ಸಂಪ್ರದಾಯ ಸಂಗೀತಕ್ಕೆ ಬಹುಮುಖ್ಯವಾದ ಸೇವೆ ಸಲ್ಲಿಸಿದವರು. ತಂದೆ ಮಹದೇವಶಾಸ್ತ್ರಿಗಳು ಸಂಗೀತ ವಿದ್ವಾಂಸರು, ಸಂಸ್ಕೃತ ಶಾಸ್ತ್ರ ಕಲಾವಿದರು; ತುರೈಯೂರನ್ನು ಬಿಟ್ಟು ಶ್ರೀರಂಗಕ್ಕೆ ಬಂದು ನೆಲೆಸಿದರು.

ಅಲ್ಲಿ ನಾಮಕ್ಕಲ್ ನರಸಿಂಹಯ್ಯಂಗಾರ್ಯರಲ್ಲಿ ಮಗನ ಶಿಷ್ಯವೃತ್ತಿ. ತಂದೆಯೊಂದಿಗೆ ಹರಿಕಥಾಕಾಲಕ್ಷೇಪದಲ್ಲಿ ಭಾಗವತರು; ಮುಂದೆ ಟೈಗರ್ ವರದಾಚಾರ್ಯರಲ್ಲಿ ಶಿಕ್ಷಣ.

ಗ್ರಾಮೋಫೋನ್ ಕಂಪನಿಯಲ್ಲಿ ಉದ್ಯೋಗ; ಶಾಸ್ತ್ರೀಯ ಸಂಗೀತದ ಧ್ವನಿಮುದ್ರಣವನ್ನು ಆರಂಭಿಸಿದರು. ರಾಮಾಯಣವನ್ನು ಹತ್ತು ರೆಕಾರ್ಡುಗಳಲ್ಲಿ ತಾವೇ ಹಾಡಿದರು. ಹಲವಾರು ಚಲನಚಿತ್ರಗಳಿಗೆ ಸಂಗೀತವನ್ನು ಅಳವಡಿಸಿದರು.

ಮದ್ರಾಸಿನ ಕಲಾಕ್ಷೇತ್ರದಲ್ಲಿ ಸಂಗೀತವನ್ನು ಮೂವತ್ತು ವರ್ಷಗಳ ಕಾಲ ಬೋಧಿಸಿದರು. ಸಂಪ್ರದಾಯ ಸಂಗೀತವನ್ನು ಕುರಿತಂತೆ, ತ್ಯಾಗರಾಜರ ಕೃತಿಗಳನ್ನು ಕುರಿತಂತೆ ನೂರಾರು ಲೇಖನಗಳನ್ನು ತಮಿಳಿನಲ್ಲಿ ರಚಿಸಿದರು.

ಪದವರ್ಣಗಳನ್ನೂ ಜಾವಳಿಗಳನ್ನೂ ರಚಿಸಿದ್ದಾರೆ. ಪಾಪನಾಶಂ ಶಿವನ್ ಅವರೊಂದಿಗೆ ಹಲವು ಚಲನಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿಯೂ ಕೆಲಸ ಮಾಡಿದರು.

ವೇದಿಕೆಯ ಮೇಲೆ ಅಷ್ಟಾಗಿ ಕಾಣಿಸಿಕೊಳ್ಳದಿದ್ದರೂ ಶಾಸ್ತ್ರೀಯ ಸಂಗೀತದ ಸ್ವಾರಸ್ಯವನ್ನು ಜನರಿಗೆ ಮನಗಾಣಿಸಲು ಬದುಕಿನುದ್ದಕ್ಕೂ ದುಡಿದರು.



ಮುಸಿರಿ ಸುಬ್ರಹ್ಮಣ್ಯಯ್ಯರ್

(1899–1974)

ಮುಸಿರಿಯವರ ತಂದೆ ಶಂಕರಯ್ಯರ್ ಸಂಸ್ಕೃತ, ಸಂಗೀತ ಎರಡರಲ್ಲೂ ನಿಷ್ಣಾತರು. ಶಾಲಾಕಾಲೇಜು ವ್ಯಾಸಂಗ ಮುಗಿಸಿದ ಮೇಲೆ, ಸುಬ್ರಹ್ಮಣ್ಯಯ್ಯರು ಪ್ರಸಿದ್ಧರಾಗಿದ್ದ ಸಭೇಶಯ್ಯರೆಂಬ ಮಹಾವಿದ್ವಾಂಸರ ಬಳಿ ಸಂಗೀತ ಶಿಕ್ಷಣವನ್ನು ಪಡೆದುಕೊಂಡರು. ಸಭೇಶಯ್ಯರ ಪ್ರೀತ್ಯಾದರಗಳನ್ನು ಗಳಿಸಿ ಅವರ ಅಳಿಯನೂ ಆದರು.

ಅದಕ್ಕೂ ಮೊದಲೇ ಸೂಲಮಂಗಲಂ ನಾರಾಯಣಸ್ವಾಮಿ, ನಾಮಕ್ಕಲ್ ನರಸಿಂಹಯ್ಯಂಗಾರ್ ಮತ್ತು ಕರೂರು ಚಿನ್ನಸ್ವಾಮಯ್ಯರ ಬಳಿ ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿತಿದ್ದರು.

ಭಾವಪೂರ್ಣವಾದ ವಿನಿಕೆಯಲ್ಲಿ ಪ್ರಸಿದ್ಧರು. ಸ್ಫುಟವಾದ ಗಮಕಗಳು; ರಾಗಭಾವದೊಂದಿಗೆ ಸಾಹಿತ್ಯದ ರಸವನ್ನೂ ಮೇಳವಿಸಿ ಹಾಡುವುದರಲ್ಲಿ ಎತ್ತಿದ ಕೈ. ರಕ್ತಿರಾಗಗಳ ಗಾಯನಕ್ಕೆ ಅವರಿಗೆ ಸರಿಸಾಟಿಯಿರರು.

ಚೆನ್ನೈನ ಸೆಂಟ್ರಲ್ ಕಾಲೇಜ್ ಆಫ್ ಮ್ಯೂಸಿಕ್‌ನ ಮೊದಲ ಪ್ರಾಂಶುಪಾಲರು. ರಾಷ್ಟ್ರಪ್ರಶಸ್ತಿಯನ್ನು ಪಡೆದುಕೊಂಡವರು; 'ಸಂಗೀತ ಕಲಾನಿಧಿ' (1939). ತಿರುವಯ್ಯಾರಿನ ತ್ಯಾಗಬ್ರಹ್ಮ ಮಹೋತ್ಸವ ಸಭೆಗೆ ಹಲವು ವರ್ಷ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಚಲಚ್ಚಿತ್ರಗಳಲ್ಲೂ ನಟರಾಗಿ, ಗಾಯಕರಾಗಿ ಹೆಸರು ಗಳಿಸಿದರು; ಗ್ರಾಮೋಫೋನಲ್ಲಿ ಶಾಸ್ತ್ರೀಯ ಸಂಗೀತದ ಧ್ವನಿಮುದ್ರಿಕೆಯನ್ನು ಮೂಡಿಸಿದವರಲ್ಲಿ ಮೊದಲಿಗರು (1932). ಆಭೇರಿರಾಗದ 'ನಗುಮೋಮು' ವನ್ನು ಯಾರೂ ಎಂದಿಗೂ ಮರೆಯುವಂತಿಲ್ಲ.

ಅವರ 'ಎಂತವೇಡುಕೊಂದು', 'ತಿರುವಡಿ ಶರಣಂ', 'ರಾಮಚಂದ್ರ ರಾಘವ', 'ನೀರಜಾಕ್ಷಿ ಕಾಮಾಕ್ಷಿ', 'ಪಾಲಿಂಚು ಕಾಮಾಕ್ಷಿ' ಮೊದಲಾದ ಹಾಡುಗಳ ವಿನಿಕೆ 'ನ ಭೂತೋ ನ ಭವಿಷ್ಯತಿ' ಎನ್ನುವಂಥವು.

ಲಕ್ಷ್ಯ-ಲಕ್ಷಣಗಳೆರಡರಲ್ಲೂ ನಿಸ್ಸೀಮರು. ಚೆನ್ನೈನ ಮ್ಯೂಸಿಕ್ ಅಕ್ಯಾಡಮಿಗೆ ಆಧಾರಸ್ತಂಭವಾಗಿದ್ದವರು. ಸಂಪ್ರದಾಯಶುದ್ಧಿಯೊಂದಿಗೆ ಮನೋಧರ್ಮವನ್ನೂ ಧಾರಾಳವಾಗಿ ಸೇರಿಸಿದ ಕೀರ್ತಿ ಅವರದ್ದು.

ಶೆಮ್ಮಂಗುಡಿ ಶ್ರೀನಿವಾಸಯ್ಯರ್
(1908–2004)

ಸಂಗೀತ ಸಾಮ್ರಾಜ್ಯದ ಅನಭಿಷಿಕ್ತ ಚಕ್ರವರ್ತಿ. ಅತ್ಯಂತ ಪ್ರತಿಭಾನ್ವಿತ, ಜನಪ್ರಿಯ ಗಾಯಕ. ಹುಟ್ಟಿದ್ದು ಸೋದರಮಾವ ಸುವಿಖ್ಯಾತ ತಿರುಕ್ಕೋಡಿಕ್ಕಾವಲು ಕೃಷ್ಣಯ್ಯರ ಮನೆಯಲ್ಲೇ. ಎಂಟನೆಯ ವಯಸ್ಸಿನಲ್ಲೇ ಸಂಗೀತದ ಕಲಿಕೆ ಆರಂಭ. ಗೊಟ್ಟುವಾದ್ಯಂ ಸಖಾರಾಮರಾಯರಲ್ಲಿ ಹಾಡುಗಾರಿಕೆ ಶಿಕ್ಷಣ. ತಿರುಪ್ಪಾಂಬರಂ ಸೋದರರ ಸ್ಫೂರ್ತಿಯಿಂದ ನಾಗಸ್ವರ ಪದ್ಧತಿಯ ರಾಗಾಲಾಪನೆಯ ಮೇಲೆ ಒಲವು. ಮಹಾರಾಜಪುರಂ ವಿಶ್ವನಾಥಯ್ಯರಲ್ಲಿ ಕೆಲವು ವರ್ಷಗಳ ಶಿಕ್ಷಣ. ಉಮಯಾಳ್‌ಪುರಂ ಸ್ವಾಮಿನಾಥಯ್ಯರ ಮಾರ್ಗದರ್ಶನ.

ತ್ಯಾಗರಾಜರ ಪರಂಪರೆಯಲ್ಲೇ ಬಂದವರು. ಮೊದಲ ಕಚೇರಿ ಹತ್ತೊಂಬತ್ತನೆಯ ವಯಸ್ಸಿನಲ್ಲಿ. ಕುಂಭಕೋಣದ ನಾಗೇಶ್ವರಸ್ವಾಮಿ ಸನ್ನಿಧಿಯಲ್ಲಿ. ಅಲ್ಲಿಂದ ಮುಂದೆ ಎಲ್ಲೆಲ್ಲೂ ಜಯಭೇರಿ.

1939ರಲ್ಲಿ ತಿರುವಾಂಕೂರು ಆಸ್ಥಾನವಿದ್ವಾಂಸರು. ಮರುವರ್ಷ ಸ್ವಾತಿ ತಿರುನಾಳ್ ಅಕ್ಯಾಡಮಿಯ ಪ್ರಾಂಶುಪಾಲರು. ಇಪ್ಪತ್ತುಮೂರು ವರ್ಷಗಳ ಸೇವೆಯ ಅವಧಿಯಲ್ಲಿ ಮುತ್ತಯ್ಯಭಾಗವತರೊಡಗೂಡಿ ಸ್ವಾತಿ ತಿರುನಾಳರ ನೂರೊಂದು ಕೃತಿಗಳಿಗೆ ಸ್ವರರಚನೆ; ಪ್ರಕಟಣೆ. 1957 ರಿಂದ 1960ರವರೆಗೆ ಆಕಾಶವಾಣಿಯಲ್ಲಿ ಸಂಗೀತ ನಿರ್ದೇಶಕರಾಗಿ ಕೆಲಸ.

ಮನೋಧರ್ಮಸಂಗೀತ; ಸಂಪ್ರದಾಯಶುದ್ಧಿ; ಲಯದ ಬಿಕ್ಕಟ್ಟು. ಶಾರೀರದಲ್ಲಿ ಕೊಂಚ ತೊಂದರೆಯುಂಟಾಯಿತಾದರೂ, ಗಾಯನದ ಸ್ವಾರಸ್ಯ ಏನೇನೂ ಕುಂದಲಿಲ್ಲ. ಅವರ ವಿನಿಕೆಯಲ್ಲಿನ ಸೊಗಸು, ಉತ್ಸಾಹ, ಭಾವಪರವಶತೆಗಳು ಜನಪ್ರೀತಿಯನ್ನು ಒದಗಿಸಿಕೊಟ್ಟವು. ವೈದಿಕ ಸಂಪ್ರದಾಯಕ್ಕೆ ಸೇರಿ, ಅದರಲ್ಲೇ ಉಳಿದುಕೊಂಡವರು. ಹಲವಾರು ಶಿಷ್ಯರನ್ನು ತಯಾರುಮಾಡಿದ್ದಾರೆ. ಚೆನ್ನೈ ಮ್ಯೂಸಿಕ್ ಅಕ್ಯಾಡಮಿಯ ಕಾರ್ಯಕಲಾಪಗಳಲ್ಲಿ ಮಾರ್ಗದರ್ಶಿ. ಸಂಗೀತ ಕಲಾನಿಧಿ.



ಸಂಧ್ಯಾವಂದನಂ ಶ್ರೀನಿವಾಸರಾವ್
(1918–1994)

ಹುಟ್ಟಿದ್ದು ಪೆನುಕೊಂಡೆ; ಹಿರಿಯರು ಶ್ರೀರಂಗಪಟ್ಟಣದವರು. ಓದಿದ್ದು ಅನಂತಪುರದ ಕಾಲೇಜಿನಲ್ಲಿ (ಬಿ.ಎ.), ಚೆನ್ನೈನಲ್ಲಿ (ಬಿ.ಎಲ್.). ವಕೀಲಿವೃತ್ತಿ ಬಳ್ಳಾರಿಯಲ್ಲಿ, ಅನಂತಪುರದಲ್ಲಿ. ಆದರೆ ಒಲವೆಲ್ಲ ಸಂಗೀತದ ಮೇಲೆ.

ಏಳು ವರ್ಷದವರಿದ್ದಾಗಲೇ ಪಲ್ಲವಿ ಗಾಯನಕ್ಕೆ ಹೆಸರಾಗಿದ್ದ ಪಕ್ಕ ಹನುಮಂತಾಚಾರ್ಯರಲ್ಲಿ ಸಂಗೀತ ಶಿಕ್ಷಣ. ತಿರುಪತಿ ರಂಗಾಚಾರ್ಯರಲ್ಲೂ ಕಲಿಕೆ. ಮುಂದೆ ಮಹಾರಾಜಪುರಂ ವಿಶ್ವನಾಥಯ್ಯರಲ್ಲಿ ಶಿಷ್ಯವೃತ್ತಿ; ಟಿ. ಎಲ್. ವೆಂಕಟರಾಮಯ್ಯರಿಂದ ಮಾರ್ಗದರ್ಶನ. ಟೈಗರ್ ವರದಾಚಾರ್ಯರಲ್ಲಿ ಪಲ್ಲವಿ, ಮನೋಧರ್ಮಸಂಗೀತದ ಗ್ರಹಣ. ಮೈಸೂರು ವಾಸುದೇವಾಚಾರ್ಯರು, ದ್ವಾರಂ ವೆಂಕಟಸ್ವಾಮಿ ನಾಯ್ಡು ಅವರಿಂದ ರಾಗ-ತಾಳ-ಪಲ್ಲವಿ ವಿನಿಕೆಯ ಕಲಿಕೆ.

ಇಷ್ಟೆಲ್ಲ ಆದ ಮೇಲೆ ವೃತ್ತಿ ಪ್ರವೃತ್ತಿಯಂತೆಯೇ. ಆಕಾಶವಾಣಿಯಲ್ಲಿ ಸಂಗೀತ ನಿರ್ದೇಶಕರು. ಕರ್ನಾಟಕ ಸಂಗೀತದ ಕೇಂದ್ರ ಕಾಲೇಜಿನ ಪ್ರಿನ್ಸಿಪಲ್, ಚೆನ್ನೈ ಸಂಗೀತ ಅಕ್ಯಾಡಮಿಯ ಶಿಕ್ಷಕರ ಕಾಲೇಜಿನ ಮುಖ್ಯಸ್ಥರು. ಸಂಗೀತದ ಅನೇಕ ಸಂಸ್ಥೆಗಳಲ್ಲಿ ಸದಸ್ಯರು.

ದಾಸ ಸಾಹಿತ್ಯ-ಸಂಗೀತಗಳಲ್ಲಿ ಎತ್ತಿದ ಕೈ. ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಎಂ. ಎಸ್. ಸುಬ್ಬುಲಕ್ಷ್ಮಿ, ಜಿ.ಎನ್.ಬಿ. ಮೊದಲಾದವರಿಗೆ ದಾಸರ ಕೃತಿಗಳ ಗಾಯನವನ್ನು ಕಲಿಸಿದರು. ಲಕ್ಷ್ಯ-ಲಕ್ಷಣ ಎರಡೂ ಪ್ರಕಾರಗಳಲ್ಲಿ ನಿಸ್ಸೀಮರು. ಬೋಧನೆಯಲ್ಲಿ ಚತುರರಾಗಿದ್ದಂತೆ ಸಭಾಗಾಯನದಲ್ಲೂ ಪರಿಣತರು.

ಶಿಷ್ಯರಲ್ಲಿ ಅವರ ಮಗ ಪೂರ್ಣಪ್ರಜ್ಞರಾವ್ ಮತ್ತು ಪ್ರಪಂಚಂ ಸೀತಾರಾಮ್ ಪ್ರಮುಖರು. ತ್ರಿಚೂರು ರಾಮಚಂದ್ರನ್ ಇವರಲ್ಲಿ ದೀಕ್ಷಿತರ ಕೆಲವು ಕೃತಿಗಳನ್ನು ಕಲಿತರು. ಸಂಗೀತವನ್ನು ಕುರಿತಂತೆ ಇಂಗ್ಲೀಷಿನಲ್ಲಿ ಹಲವು ಪ್ರಬಂಧಗಳನ್ನು ಬರೆದಿದ್ದಾರೆ.



ತಿರುವಾಲಂಗಾಡು ಸುಂದರೇಶ ಅಯ್ಯರ್
(1900–1966)

ಹಿಂದಿನ ತಲೆಮಾರಿನ ಹಿರಿಯ ಗಾಯಕರಿಗೆ (ಅರಿಯಕ್ಕುಡಿ, ಮುಸಿರಿ, ಮಧುರೈ ಮಣಿ ಅಯ್ಯರ್, ಮಹಾರಾಜಪುರಂ ಮೊದಲಾದವರಿಗೆ) ಅಚ್ಚುಮೆಚ್ಚಿನ ಪಿಟೀಲು ಪಕ್ಕವಾದ್ಯಗಾರರು. ಸಂಗೀತದಲ್ಲಿ ಮುಖ್ಯವಾದ ಮನೋಧರ್ಮ ಇವರ ವೈಶಿಷ್ಟ್ಯ. ರಸವನ್ನು ಅಭಿವ್ಯಕ್ತಗೊಳಿಸುವಲ್ಲಿ, ರಾಗದ ಸ್ವರೂಪವನ್ನು ಕೆಲವೇ ಕ್ಷಣಗಳಲ್ಲಿ ಎತ್ತಿತೋರಿಸುವುದರಲ್ಲಿ ಇವರದ್ದು ಮೇಲುಗೈ. ಕಣಕ್ಕು (ಲೆಕ್ಕಾಚಾರ), ಅತಿಯಾದ ನೆರವಲ್ಲು, ಮೇರೆ ಮೀರಿದ ಸ್ವರಕಲ್ಪನೆ ಇವರಿಗೆ ಹಿಡಿಸದು. ತಮ್ಮ ಬದುಕಿನಂತೆಯೇ ಸಂಗೀತವೂ ಸರಳವಾಗಿ, ಸುಂದರವಾಗಿ ಇರಬೇಕೆಂದು ಬಯಸಿದವರು. 'ಸುಸ್ವರಂ ಸುಂದರೇಶಯ್ಯರ್' ಎಂದೇ ಪ್ರಸಿದ್ಧಿ. ಎಲ್ಲದರಲ್ಲೂ ಔಚಿತ್ಯಪ್ರಜ್ಞೆ, ಎಷ್ಟು ಬೇಕೋ ಅಷ್ಟೆ. ಅಷ್ಟರಲ್ಲೇ ಸ್ವಾರಸ್ಯ, ಸೌಂದರ್ಯಗಳನ್ನೆಲ್ಲ ತುಂಬಬೇಕು. ಸಂಗೀತದಲ್ಲಿ ಮುಖ್ಯವಾದುದು ರಾಗಭಾವ ಎಂದವರ ನಿಲುವು.

ಸಂಸ್ಕೃತ ಪಂಡಿತರ ಮನೆತನ. ಅಜ್ಜ ವಿಶ್ವನಾಥಯ್ಯರವರು ತರ್ಕ, ವ್ಯಾಕರಣ ಮೀಮಾಂಸಾಶಾಸ್ತ್ರಗಳಲ್ಲಿ ಪಾರಂಗತರು. ತಂದೆ ನೀಲಕಂಠಯ್ಯರವರು ತರ್ಕ, ವ್ಯಾಕರಣ ಬಲ್ಲಿದರು. ಅವರ ಸ್ನೇಹಿತರಲ್ಲಿ ಪ್ರಸಿದ್ಧ ತಿರುಕ್ಕೋಡಿಕ್ಕಾವಲ್ ಕೃಷ್ಣಯ್ಯರೂ ನಾಗಸ್ವರಂ ತಿರುಮರುಗಾಳ್ ನಟೇಶ ಪಿಳ್ಳೆ ಸೇರಿದ್ದರು.

ತಮ್ಮ ಹದಿನೇಳನೇ ವಯಸ್ಸಿನಲ್ಲಿಯೇ ಆಗ ಜನಪ್ರಿಯರಾಗಿದ್ದ ಮಧುರೆ ಪುಷ್ಪವನಂ ಅಯ್ಯರ್ ಎಂಬ ಪ್ರತಿಭಾಶಾಲಿ ಗಾಯಕರಿಗೆ ಪಿಟೀಲು ಪಕ್ಕವಾದ್ಯ ನುಡಿಸಿ ಕೀರ್ತಿಭಾಜನರಾದರು. ಬದುಕಿನಲ್ಲೂ ಸಂಗೀತದಲ್ಲೂ ಶಿಸ್ತಿಗೆ ಬೆಲೆಕೊಟ್ಟವರು. ಯಾವ ಬಗೆಯ ಆಡಂಬರಕ್ಕೂ ಒಲಿದವರಲ್ಲ. ಹಣಕ್ಕಂತೂ ಎಂದೂ ಬಾಯಿಬಿಟ್ಟವರಲ್ಲ. ಸಂಗೀತದಲ್ಲಿ ಸಂಪ್ರದಾಯ ಎಷ್ಟು ಮುಖ್ಯವೋ, ಸಂಗೀತಗಾರರಿಗೂ ಅದು ಅಷ್ಟೇ ಮುಖ್ಯ ಎಂಬುದನ್ನು ಸ್ಪಷ್ಟಪಡಿಸಿದವರು.



ಮೈಸೂರು ಕೆ. ವಾಸುದೇವಾಚಾರ್ಯರು
(1865–1961)

ಸುಪ್ರಸಿದ್ಧ ವಾಗ್ಗೇಯಕಾರರು. ಲಕ್ಷ್ಯ ಲಕ್ಷಣಗಳೆರಡರಲ್ಲೂ ನಿಸ್ಸೀಮರು. ಸಂಗೀತ ಕ್ಷೇತ್ರದಲ್ಲಿ ಸರ್ವಮಾನ್ಯರಾದ ಹಿರಿಯರು.

ಕೊಯಮತ್ತೂರಿನ ಚೇವೂರು ಸುಬ್ರಹ್ಮಣ್ಯಾಚಾರ್ಯರು ಮುಮ್ಮಡಿಯವರ ಆಶ್ರಯವನ್ನು ಬಯಸಿ ಮೈಸೂರಿಗೆ ಬಂದು ನೆಲೆಸಿದರು. ಅವರ ಮಗ ವಾಸುದೇವ ಮಹಾರಾಜರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಯನವನ್ನು ಮುಗಿಸಿ ಮಹಾರಾಜರ ಪ್ರೋತ್ಸಾಹದಿಂದ ತಿರುವಯ್ಯಾರಿಗೆ ಹೋಗಿ ತ್ಯಾಗರಾಜ ಪರಂಪರೆಯ ಪಟ್ಟಣಂ ಸುಬ್ರಹ್ಮಣ್ಯಯ್ಯರ ಬಳಿ ಸಂಗೀತ ಶಿಕ್ಷಣವನ್ನು ಪಡೆದುಕೊಂಡರು (1884–1890).

ಮೈಸೂರಿನಲ್ಲಿ ಆಸ್ಥಾನ ವಿದ್ವಾಂಸರು; 1954ರಲ್ಲಿ ರುಕ್ಮಿಣೀದೇವಿ ಆರುಂಡೇಲರ ಕರೆಯನ್ನು ಮನ್ನಿಸಿ ಅಡಯಾರು ಕಲಾಕ್ಷೇತ್ರದಲ್ಲಿ ನೆಲೆಸಿದರು. ರಾಮಾಯಣದ ನೃತ್ಯರೂಪಕವನ್ನು ಸಿದ್ಧಪಡಿಸಿದರು. ವಾಗ್ಗೇಯಕಾರರಾಗಿ, 'ವಾಸುದೇವ ಕೀರ್ತನಮಂಜರಿ' (ಎರಡು ಸಂಪುಟಗಳಲ್ಲಿ) ಅವರ ಕೀರ್ತಿಯನ್ನು ಸ್ಥಿರಗೊಳಿಸಿದೆ.

'ಸಂಗೀತ ಕಲಾನಿಧಿ', 'ಪದ್ಮಭೂಷಣ' (1954). ಗಾಯಕರಾಗಿ ಮನೋಧರ್ಮ ಸಂಗೀತಕ್ಕೆ ಹೆಸರಾದರು; ಮಧ್ಯಮಕಾಲ ಅವರಿಗೆ ವಿಶಿಷ್ಟವಾದದ್ದು. ತಾನಗಾಯನ, ಶ್ರುತಿಶುದ್ಧಿಗಳಿಗೆ ಅವರದ್ದು ಎತ್ತಿದ ಕೈ. ಅವರ ರಚನೆಗಳು ಸಂಸ್ಕೃತ, ತೆಲುಗು ಭಾಷೆಗಳಲ್ಲಿವೆ. 'ಕರುಣಿಸೌ ತಾಯೆ' (ಸರಸ್ವತೀಮನೋಹರಿ) ಒಂದು ಮಾತ್ರ ಕನ್ನಡ ರಚನೆ.

ಅವರ ಶಿಷ್ಯರಲ್ಲಿ ಬಿ. ಕೆ. ಪದ್ಮನಾಭರಾವ್, ಡಿ. ಪಶುಪತಿ, ನಾ. ಚೆನ್ನಕೇಶವಯ್ಯ, ಯಳಂದೂರು ರಂಗಾಚಾರ್ಯರು ಪ್ರಮುಖರು. ಜಯಚಾಮರಾಜ ಒಡೆಯರೂ ಅವರಲ್ಲಿ ಕಲಿತವರೇ.

ಕೆ. ಎಸ್. ನಾರಾಯಣ ಸ್ವಾಮಿ
(1914–1999)

ವೇದಿಕೆಯ ವಿದ್ವಾಂಸರಾಗಿ ಅಷ್ಟು ಪ್ರಸಿದ್ಧಿಯನ್ನು ಪಡೆದುಕೊಳ್ಳದಿದ್ದರೂ, ಪ್ರಸಿದ್ಧರಾದ ಎಲ್ಲ ವಿದ್ವಾಂಸರ ಗೌರವಾದರಗಳಿಗೆ ಪಾತ್ರರಾದ ವೈಣಿಕರು ಕೊಡುವಾಯೂರ್ ಶಿವರಾಮಯ್ಯರ್ ನಾರಾಯಣಸ್ವಾಮಿ. ಸಂಪ್ರದಾಯನಿಷ್ಠರಾದ ಇವರು ಸ್ವರಜ್ಞಾನಕ್ಕೆ ರಾಗಲಕ್ಷಣಕ್ಕೆ ಇನ್ನೊಂದು ಹೆಸರು ಎಂದೇ ಖ್ಯಾತರು. ರಾಗವನ್ನು ಹಲವಾರು ಮುಖಗಳಿಂದ ಕಾಣಿಸುವ ಪ್ರತಿಭೆ ಅವರದ್ದು. ವಿನಿಕೆಯಲ್ಲಂತೂ ಸುಖಭಾವವನ್ನು ಸೂಸುವುದರಲ್ಲಿ ಎತ್ತಿದ ಕೈ. ಗಂಭೀರವಾದ ಆದರೆ ಅತಿದೀರ್ಘವಲ್ಲದ ಗಮಕಗಳು, ಔಚಿತ್ಯಪ್ರಜ್ಞೆ ಅವರಿಗೆ ವಿಶಿಷ್ಟವಾದವು. ಅವರು ವೀಣೆ ನುಡಿಸುತ್ತಿದ್ದ ರೀತಿ ಗಾಯನ ಶೈಲಿಯಲ್ಲಿತ್ತು.

ವೈಣಿಕ ಮನೆತನದವರೇ ಆಗಿದ್ದ ಅವರಿಗೆ ಮೊದಲ ಪಾಠ ಪ್ರಾರಂಭವಾದದ್ದು ತಂದೆ ಕೇರಳದ ಕೊಡುವಾಯೂರಿನಲ್ಲಿರುತ್ತಿದ್ದ ಶಿವರಾಮಯ್ಯರ್ ಮತ್ತು ತಾಯಿ ನಾರಾಯಣಿ ಅಮ್ಮಾಳ್ ಅವರಿಂದ. ಅನಂತರ ಅಣ್ಣ ಕೃಷ್ಣಯ್ಯರಲ್ಲಿಯೇ ಶಿಕ್ಷಣ. ಮುಂದೆ ಚಿದಂಬರದ ಅನ್ನಾಮಲೆ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನಲ್ಲಿ ಕಲಿಕೆ. ಅಲ್ಲಿ ಸಭೇಶಯ್ಯರ್ ಮತ್ತು ತಂಜಾವೂರು ಪೊನ್ನಯ್ಯ ಪಿಳ್ಳೆಯವರಲ್ಲಿ ಹಾಡಿಕೆ. ದೇಶಮಂಗಲಂ ಸುಬ್ರಹ್ಮಣ್ಯಯ್ಯರಲ್ಲಿ ವೀಣೆ, ಪೊನ್ನಯಪಿಳ್ಳೆಯೆಂಬುವರಲ್ಲಿ ಮೃದಂಗ ಕಲಿತರು. ಅದೇ ಕಾಲೇಜಿನಲ್ಲಿ ಅಧ್ಯಾಪಕರಾದರು (1937–1946). ಮುಂದೆ ತಿರುವನಂತಪುರದ ಸ್ವಾತಿ ತಿರುನಾಳ್ ಸಂಗೀತ ಅಕಾಡೆಮಿಯಲ್ಲಿ ವೀಣಾಧ್ಯಾಪಕರಾಗಿ ಸೇರಿ, ಆಗ ಪ್ರಿನ್ಸಿಪಾಲರಾಗಿದ್ದ ಶೆಮ್ಮಂಗುಡಿ ಶ್ರೀನಿವಾಸಯ್ಯರಿಗೆ, ಸ್ವಾತಿ ತಿರುನಾಳರ ಕೃತಿಗಳಿಗೆ ಸ್ವರಸಂಯೋಜನೆ ಮಾಡುವ ಕೆಲಸದಲ್ಲಿ ನೆರವಾದರು. ಶೆಮ್ಮಂಗುಡಿ ನಿವೃತ್ತರಾದ ಮೇಲೆ ಇವರೇ ಪ್ರಿನ್ಸಿಪಾಲರಾದರು. 1970ರಲ್ಲಿ ಅಲ್ಲಿಂದ ನಿವೃತ್ತರಾಗಿ ಮುಂಬಯಿಯ ಷಣ್ಮುಗಾನಂದ ಕಲಾಸಂಸ್ಥೆಯವರು ನಡೆಸುತ್ತಿದ್ದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. 1997ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ದೊರಕಿತು.

ಗೋಪಾಲಕೃಷ್ಣಭಾರತಿ, ನೀಲಕಂಠಶಿವನ್ ಮತ್ತು ಅರುಣಾಚಲ ಕವಿರಾಯರ ತಮಿಳು ಸಂಗೀತ ಕೃತಿಗಳು ಬೆಳಕನ್ನು ಕಂಡದ್ದು ಇವರ ಉದ್ಯಮದ ಫಲವಾಗಿಯೇ. ದೀಕ್ಷಿತರ ಕೃತಿಗಳನ್ನು ವೀಣೆಯಲ್ಲಿ ನುಡಿಸುವುದರಲ್ಲಿ ಇವರು ನಿಸ್ಸೀಮರು. ಇವರ ಉಪನ್ಯಾಸ-ಪ್ರಾತ್ಯಕ್ಷಿಕೆಗಳು ವಿದ್ಯಾರ್ಥಿಗಳ, ವಿದ್ವಾಂಸರ ವಲಯದಲ್ಲಿ ಪ್ರಸಿದ್ಧವಾಗಿದ್ದವು; ಇವರು ಎರಡರಲ್ಲೂ ಪರಿಣತರಾಗಿದ್ದರು.